# THE BOOK WAS DRENCHED

UNIVERSAL LIBRARY
OU_198018
UNIVERSAL LIBRARY



# ಕಾಶೀನಾಥ

ಮೂಲ:

ಶರತ್ಚಂದ್ರ ಚಟರ್ಜಿ

●

ಅನುವಾದ

ಶ್ರೀ ಸಿ. ಕೆ. ನಾಗರಾಜರಾವ್

ಚಿತ್ರಾ ಏಜನ್ಸೀಸ್

ಪ್ರಕಾಶಕರು :

ಚಿತ್ರಾ ಏಜೆನ್ಸೀಸ್

ಬೆಂಗಳೂರು ಸಿಟಿ

...ED 1956

...HECKED 1951

Checked 1963

ಬೆಲೆ ಆರಾಣೆ

Checked 1969

ಮುದ್ರಕರು

ಸುಬೋಧ ವಿದ್ಯುನ್ಮುದ್ರಣಾಲಯ,

ಚಾಮರಾಜಪೇಟೆ, — ಬೆಂಗಳೂರು ಸಿಟಿ.

# ಮುನ್ನುಡಿ

ಚಿತ್ರಾ ಗ್ರಂಥಮಾಲೆಯ ಪ್ರಕಾಶಕರ ಕೋರಿಕೆಯಂತೆ ಈ ಗ್ರಂಥದ ಮುನ್ನುಡಿಯನ್ನು ನಾನು ಸಂತೋಷದಿಂದ ಬರೆಯುತ್ತಿದ್ದೇನೆ.

ಕಾಶೀನಾಥನ ಕಥೆಯನ್ನು ಓದುತ್ತಾ ಕುಳಿತರೆ ಕೊನೆಯ ಪುಟದವರೆಗೂ ನಮ್ಮ ಕಣ್ಣುಗಳು ಮತ್ತೊಂದೆಡೆಗೆ ಹರಿಯುವುದಿಲ್ಲ. ಆತನ ಸವಿಗನಸುಗಳೆಲ್ಲವೂ ಕರಗಿ ಮದುವೆಯಿಂದ ಮಾಯವಾಗಿ ಸತಿಯ ಅನಿರೀಕ್ಷಿತ ನಡೆನುಡಿಗಳಿಂದ ಆತನ ಜೀವನ ತಳಮಳಗೊಂಡು, ಭಯಂಕರ ಸಂದೇಹಗಳಿಗೆ ತುತ್ತಾಗಿ, ಕಗ್ಗತ್ತಲ್ಲಿ ಕತ್ತರಿಸಿ, ತಂಗಿಯ ಸ್ನೇಹ ಶುಶ್ರೂಷಾದಿಗಳಿಂದ ತಿಳಿಯಾಗಿ, ಕಡೆಗೆ ಶಾಂತವಾಗಿ ಸಾಗುತ್ತದೆ. ಕಾಶೀನಾಥನ ಕೈಹಿಡಿದ ಕಮಲೆಯೂ ಕೂಡ ಗಂಡನ ಸುಸಂಸ್ಕೃತ ಹೃದಯದ ಅಂತರಾಳವನ್ನು ಅರಿಯಲಾರದೆ, ತನ್ನ ಕೃತಕ ಮನೋಭಾವಗಳನ್ನು ತ್ಯಜಿಸಲಾರದೆ ತನಗಾಗಿ ತನ್ನವರು ಆರಿಸಿ ತಂದವನಿಗೆ ತನ್ನ ಅಂತರಂಗವನ್ನು ತೋರಲಾರದೆ ನೊಂದು ಬೆಂದು ಕಡೆಗೆ ತನ್ನ ಜೀವನವನ್ನು ಪೂರ್ಣಮಾಡಿಕೊಳ್ಳುತ್ತಾಳೆ.

ಕಡಲಿನ ಉಪ್ಪು, ಕಾಡಿನ ನೆಲ್ಲಿ, ಎರಡೂ ಹದಗೊಂಡು ಪಕ್ವವಾಗುವುದು ಗೃಹಸ್ಥ ಜೀವನದಲ್ಲಿ. ವಿವಾಹಿತರಾದ ಪುರುಷರೆಲ್ಲರಲ್ಲೂ ಕಾಶೀನಾಥನ ಅಂಶ ಸ್ವಲ್ಪವಾದರೂ ಇದ್ದೇ ಇರುತ್ತದೆ ತನ್ನನ್ನೇ ನಂಬಿರುವ ಹೆಣ್ಣು ಹೃದಯವನ್ನರಿತು ಅದನ್ನು ತುಷ್ಟಿಪಡಿಸುವ ಸಾಮರ್ಥ್ಯವೂ ಅದಕ್ಕೆ ಬೇಕಾದ ಸಹಾನುಭೂತಿಯೂ ಪುರುಷರಲ್ಲಿ ಅತಿ ವಿರಳ ! ಹಾಗೆಯೇ, ಗಡಸಾದ ಗಂಡೆದೆಯನ್ನರಳಿಸಿ ಒಲಿಸಿ ಬದುಕನ್ನು ನೇರ್ಪಡಿಸಲು ಬೇಕಾದ ಸಹನೆ ಸ್ವಾರ್ಥತ್ಯಾಗಗಳು ಸ್ತ್ರೀಯರಲ್ಲೂ ಅಪರೂಪ ಆದ್ದರಿಂದ ಈ ಕಥೆಯನ್ನು ಓದುವಾಗ ವಾಚಕರು ತಮ್ಮನ್ನೇ ಪರೀಕ್ಷಿಸಿಕೊಂಡು ತಮ್ಮಲ್ಲಿ ಹುದುಗಿರುವ ಕಾಶೀನಾಥ ಕಮಲೆಯರನ್ನು ಪರೀಕ್ಷಿಸಿದರೆ ಅವರ ಸಂಸಾರ ಜೀವನವೇ ಉತ್ತಮಗೊಂಡೀತು ಇದು ಕೇವಲ 'ಸಂಸ್ಕೃತ ಪಾಠಶಾಲೆಯಲ್ಲಿ ಓದಿದ ಸರ್ವಸಾಧಾರಣವಾದ ಮನುಷ್ಯನ ಕಥೆ' ಮಾತ್ರವಲ್ಲ. 'ಇಲ್ಲಿ ನನಗೆ ಸುಖವಿಲ್ಲ', 'ನನ್ನನ್ನ ಒಂದು ಮೃಗದ ಕೈಯಲ್ಲಿ ಹಾಕಿ ಹೋಗಿದಾರೆ', 'ನಾನು ನಿನ್ನನ್ನು ಕ್ಷಮಿಸಿದೇನೆ', 'ಏತರಿಂದ ನೆಮ್ಮದಿಯಾಗುತ್ತದೆ ಎಂದು ನನಗೆ ಗೊತ್ತಿಲ್ಲ' 'ನನ್ನ ನಿನ್ನ ವಿವಾಹವಾಗದಿದ್ದರೆ ಚೆನ್ನಾಗಿರುತ್ತಿತ್ತು ಅನ್ನಿಸುತ್ತದೆ' ಎಂಬ ಮಾತುಗಳನ್ನು ಲಕ್ಷಾಂತರ ದಂಪತಿಗಳು

ಅಡಲಾರದೆ ನುಂಗಿರುತ್ತಾರೆ. ಆದ್ದರಿಂದ ಇದು ಒಂದು ವರ್ಗ ಸಂಸಾರದ ಕಥೆ ಮಾತ್ರವಲ್ಲ; ಮಾನವ ಸಂಸಾರದ ಕಥೆ.

ಶರತ್ ಬಾಬುರವರ ಶೈಲಿಯೂ, ಕಥನಕ್ರಮವೂ ಇಂತಹ ಮಾನಸಿಕ ಕಾದಂಬರಿಗಳಿಗೆ ಹೆಚ್ಚು ಪುಷ್ಟಿಯನ್ನು ಕೊಡುತ್ತವೆ. ಹೊರಗಿನ ಪ್ರಪಂಚದ ಕ್ರೂರ ಸುಂದರ ದೃಶ್ಯಗಳನ್ನು ಅವರು ವಿವರಿಸುವುದಿಲ್ಲ. ಅಂತರಂಗದ ಅಲ್ಲೋಲ ಕಲ್ಲೋಲಗಳನ್ನೂ ಕೂಡ ಅವರು ಒಂದೆರಡು ರೇಖಾ ಚಿತ್ರಗಳಿಂದಲೇ ನಿರೂಪಿಸುತ್ತಾರೆ. ವಾಚಕರೇ ಕಥೆಯ ಓಟವನ್ನು ತಡೆದು ನಿಲ್ಲಿಸಿಕೊಂಡು ಸನ್ನಿವೇಶವನ್ನು ತಮ್ಮೊಳಗೆ ಮೆಲುಕುಹಾಕಿ ವಿಮರ್ಶಿಸಿಕೊಳ್ಳಬೇಕಾಗುತ್ತದೆ.

ಪ್ರಕಾಶಕರು ಇಡೀ ಗ್ರಂಥವನ್ನು ಸಣ್ಣ ಮೊಳೆಗಳನ್ನೇ ಜೋಡಿಸಿ ಕಾಗದದ ಅಭಾವ ವಿಪರೀತವಾಗಿರುವ ಈ ಯುದ್ಧ ಕಾಲದಲ್ಲಿ ಈ ಕಾದಂಬರಿಯನ್ನು ಪ್ರಕಟಿಸಿದ್ದಾರೆ. ಇದಕ್ಕಾಗಿ ಅವರಿಗೆ ಎಲ್ಲರ ಧನ್ಯವಾದಗಳೂ ಸಲ್ಲತಕ್ಕದ್ದಾಗಿದೆ. ಇದನ್ನು ಕನ್ನಡಿಸಿ ನಮ್ಮ ಜನಕ್ಕೂ ಕಥೆಯ ಸವಿಯನ್ನು ಆಸ್ವಾದಿಸಲು ಅವಕಾಶ ಕೊಟ್ಟ ಶ್ರೀಮಾನ್ ಸಿ. ಕೆ. ನಾಗರಾಜರಾಯರು ನುರಿತ ಬರಹಗಾರರು. ಅವರು ಆಗಲೇ ಕನ್ನಡಿಗರ ಆದರ ಅಭಿಮಾನಗಳನ್ನು ಪಡೆದಿದ್ದಾರೆ. ತತ್ಫಲವಾಗಿ ಇಂತಹ ಹಲವಾರು ಗ್ರಂಥಗಳನ್ನೂ, ಇನ್ನೂ ಹಲವಾರು ಸ್ವತಂತ್ರ ಗ್ರಂಥಗಳನ್ನೂ ಅವರು ಬರೆಯಬೇಕೆಂಬುದೇ ನನ್ನ ಆಸೆ.

ಕಲ್ಪತರು
ಕೃಷ್ಣಮೂರ್ತಿಪುರಂ
ಮೈಸೂರು.

ನಾ. ಕಸ್ತೂರಿ.

# ಅರಿಕೆ

ದಿವಂಗತ ಬಾಬು ಶರಚ್ಚಂದ್ರರು ರಚಿಸಿರುವ ಸುಮಾರು ಐವತ್ತು ಗ್ರಂಥಗಳಲ್ಲಿ ಈಗ ಕನ್ನಡದಲ್ಲಿ ಹತ್ತು ಹದಿನೈದು ಪುಸ್ತಕಗಳು ಪ್ರಕಟವಾಗಿವೆ. ಅವರ ರಚನೆಗಳೆಲ್ಲ ಲೋಕ ಪ್ರಸಿದ್ಧವೆಂದು ನಾನು ಮತ್ತೆ ಹೇಳಬೇಕಾಗಿಲ್ಲ. ಏಕೆಂದರೆ ಅದು ಸರ್ವಜನ ವಿದಿತವಾದ ವಿಚಾರ. ಅವರ ಅಮರ ಕೃತಿಗಳಲ್ಲಿ ಕೆಲವಾದ ದೇವದಾಸ, ಮಂಜಿಲ್, ಬಡಿದೀದಿ, ಚಿಂಗಾರಿ ಮೊದಲಾದುವು ಆಗಲೇ ವಾಕ್ಚಿತ್ರ ಪಟಗಳಾಗಿ ಬಹಳ ಪ್ರಸಿದ್ಧವಾಗಿವೆ ಈಚೆಗೆ ಅವರ ಈ 'ಕಾಶೀನಾಥ'ವೂ ಸಹ ಚಿತ್ರಪಟವಾಗುತ್ತಿದೆಯೆಂದು ತಿಳಿದು ಬಂದಿದೆ.

ಈ ಪುಸ್ತಕವು 'ಶರತ್ ಸಾಹಿತ್ಯಮಾಲೆ'ಯ ನಾಲ್ಕನೆಯ ಕುಸುಮ ಇದರಲ್ಲಿ ಪತಿಯು ಸತಿಯನ್ನೂ, ಸತಿಯು ಪತಿಯನ್ನೂ ಪ್ರೀತಿಸುತ್ತಾರೆ ಆದರೂ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲಾರದವರಾಗಿದ್ದಾರೆ ಜೊತೆಗೆ ಧನಿಕನ ಒಬ್ಬಳೇ ಮಗಳಾದ ಸತಿಯಲ್ಲಿ ತಲೆಯೆತ್ತಿ ನಿಂತಿರುವ ಅಭಿಮಾನ ಮತ್ತು ಬಡವನಾಗಿ ಜನಿಸಿ ಚಿಕ್ಕ ವಯಸ್ಸಿನಲ್ಲಿಯೇ ತಬ್ಬಲಿಯಾದ ಪತಿಯಲ್ಲಿನ ಆಶಾರಹಿತ ಉದಾಸೀನ ಪ್ರಕೃತಿ! ಇವುಗಳ ಸಂಘರ್ಷಣೆಯಿಂದ ಅವರವರಲ್ಲಿ ಹೊಂದಾಣಿಕೆಗೆ ಅವಕಾಶವಿಲ್ಲವಾಗಿ ಒಬ್ಬರಿನ್ನೊಬ್ಬರನ್ನು ಸುಖಿಯನ್ನಾಗಿ ಮಾಡಲಾರದಾಗಿರುತ್ತಾರೆ. ಕಡೆಗೊಮ್ಮೆ ಇಬ್ಬರೂ ಎಚ್ಚೆತ್ತುಕೊಳ್ಳುತ್ತಾರೆ! ಶರತ್‌ಬಾಬುಗಳ ಸೂಕ್ಷ್ಮದೃಷ್ಟಿ ರಚನೆಯಲ್ಲಿ ಉದ್ದಕ್ಕೂ ಒಡೆದು ಕಾಣುತ್ತದೆ

ಮೊದಲು ಇದನ್ನು ವಾಕ್ಚಿತ್ರದಲ್ಲಿ ಪ್ರಕಟಿಸಿದ ಆದರ ಸಂಪಾದಕರಿಗೂ ಮತ್ತು ಪುಸ್ತಕ ರೂಪದಲ್ಲಿ ಪ್ರಕಟಿಸಿದ 'ಚಿತ್ರಾ ಗ್ರಂಥಮಾಲೆ'ಯವರಿಗೂ ನಾನು ಋಣಿ. ಕನ್ನಡಿಗರ ಆದರ, ಅಭಿಮಾನಗಳು ಸಾಹಿತ್ಯಕ್ಕೆ ಪೋಷಣೀಯ ಆಹಾರ; ತತ್ಫಲ ಬೆಳವಣಿಗೆ. ಅದು ಏಕರೀತಿಯಾಗಿ ಉತ್ತೇಜಕವಾಗಿದ್ದಷ್ಟೂ ಸಾಹಿತ್ಯ ವಿಸ್ತಾರವಾಗಲು ಸಹಾಯಕವಾಗುತ್ತದೆ.

೧೨೮, ನರಸಿಂಹರಾಜ ಕಾಲೋನಿ
ಬಸವನಗುಡಿ ಪೋಸ್ಟ್
ಬೆಂಗಳೂರು
೨೦-೧೨-೪೨

ಸಿ. ಕೆ. ನಾಗರಾಜರಾವ್

# ಪ್ರಕಾಶಕರ ಮೊದಲಮಾತು

ಬಂಗಾಳಿಯಿಂದ ದರ್ಪಚೂರ್ಣ, ಕಾಡುಮಲ್ಲಿಗೆ, ಅರಕ್ಷಣೀಯ ಮುಂತಾದ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿರುವ ಶ್ರೀಮಾನ್ ಸಿ. ಕೆ. ನಾಗರಾಜರಾಯರ "**ಕಾಶೀನಾಥ**"ವನ್ನು ನಮ್ಮ ಪ್ರಕಟಣಾಲಯದ ಪ್ರಥಮ ಕುಸುಮವನ್ನಾಗಿ ಕನ್ನಡಿಗರಿಗೆ ಅರ್ಪಿಸಲು ನಾವು ತುಂಬಾ ಸಂತೋಷಿಸುತ್ತೇವೆ.

ಉತ್ತಮ ಕಥಾಸಾಹಿತ್ಯ, ಶಾಸ್ತ್ರಸಾಹಿತ್ಯಗಳಿಗೆ ಆಕರವಾದ ಗ್ರಂಥಗಳನ್ನು ಕ್ರಮವಾಗಿ ಪ್ರಕಟಿಸಬೇಕೆಂಬುದೇ ನಮ್ಮ ಬಯಕೆ. ಗ್ರಂಥ ಪ್ರಕಟಣೆಗೆ ಇಂದು ಇಷ್ಟೊಂದು ಅಡ್ಡಿ ಆತಂಕಗಳು ಇವೆಯೆಂಬುದು ಎಲ್ಲರಿಗೂ ತಿಳಿದ ವಿಚಾರ. ಈ ಅನಾನುಕೂಲಗಳನ್ನು ಲಕ್ಷಿಸದೆ ನಾವು ಈಗ "**ಕಾಶೀನಾಥ**" ಗ್ರಂಥವನ್ನು ಹೊರಗೆಡಹಿದ್ದೇವೆ. ಕನ್ನಡಿಗರ ಪ್ರೇಮಪೂರ್ವಕವಾದ ಬೆಂಬಲದಿಂದ ಜಾಗ್ರತೆಯಾಗಿ ಇನ್ನೂ ಕೆಲವು ಗ್ರಂಥಗಳನ್ನು ಪ್ರಕಟಿಸುವುದು ಸಾಧ್ಯವಾಗುವುದೆಂದು ನಾವು ನಂಬಿದ್ದೇವೆ.

ಚಿತ್ರಾ ಗ್ರಂಥಮಾಲೆಯ ಮೇಲೆ ಅಭಿಮಾನವಿಟ್ಟು ಈ ಗ್ರಂಥಕ್ಕೆ ಮುನ್ನುಡಿ ಬರೆದುಕೊಟ್ಟ ಶ್ರೀಮಾನ್ ನಾ. ಕಸ್ತೂರಿ, ಬಿ.ಎ., ಬಿ.ಎಲ್.ರವರಿಗೆ ಅನಂತ ವಂದನೆಗಳು. ಗ್ರಂಥದ ಅಂದ ಹೆಚ್ಚಲು ಸೊಗಸಾದ ಚಿತ್ರ ಕೊಟ್ಟುದಕ್ಕಾಗಿ ನಾವು ಬೊಂಬಾಯಿಯ ಶ್ರೀ ರಾಘವೇಂದ್ರರಿಗೆ ತುಂಬಾ ಋಣಿಗಳಾಗಿದ್ದೇವೆ.

**ಪ್ರಕಾಶಕರು.**

# ಕಾಶೀನಾಥ

—೧—

ಬೆಳಗಿನ ಜಾವ ನಾಲ್ಕು ಗಂಟೆಗೇ ಎದ್ದು ಸ್ನಾನ ಮುಗಿಸಿಕೊಂಡು, ಆಹ್ನಿಕ ಪೂಜೆಗಳನ್ನು ಮಾಡಿ, ತಲೆಯ ಜುಟ್ಟನ್ನು ಗಂಟು ಕಟ್ಟಿಕೊಂಡು, ಧನಂಜಯಭಟ್ಟಾಚಾರ್ಯರ ಪಾಠಶಾಲೆಯ ವರಾಂಡದಲ್ಲಿ ಕುಳಿತು, ಪಿಟಿಪಿಟಿ ಅನ್ನುತ್ತಾ ದರ್ಶನ ಶಾಸ್ತ್ರ ಸೂತ್ರಗಳನ್ನು ಮತ್ತು ಅವುಗಳ ಭಾಷ್ಯವನ್ನು ಗಟ್ಟಿಮಾಡುತ್ತಾ ಕುಳಿತುಬಿಟ್ಟನೆಂದರೆ ಕಾಶೀನಾಥನಿಗೆ ಬಾಹ್ಯ ಪ್ರಪಂಚದ ಪ್ರಜ್ಞೆಯೇ ಇರುತ್ತಿರಲಿಲ್ಲ. ವಿಶಾಲವಾದ ಹಣೆಯ ದೀರ್ಘಾಕಾರನಾದ ಕಾಶೀನಾಥ ವಂದ್ಯೋಪಾಧ್ಯಾಯನು ದರ್ಶನಶಾಸ್ತ್ರದ ಗಹನವನದಲ್ಲಿ ಪ್ರವೇಶಿಸಿದ ಮೇಲೆ ನಿಜವಾಗಿಯೂ ದಿಗ್ಭ್ರಾಂತನಾಗಿ ಬಿಡುತ್ತಿದ್ದನು. ಅವನ ಈ ಬಗೆಯ ಪರಿಸ್ಥಿತಿಯನ್ನು ನೋಡಿ ಜನಗಳು ಅವನ ವಿಚಾರದಲ್ಲಿ ಬಗೆಬಗೆಯಾಗಿ ಆಡಿಕೊಳ್ಳುತ್ತಿದ್ದರು. ಕೆಲವರು, ತಂದೆಯಂತೆ ಅವನೂ ವಿದ್ವಾಂಸನಾಗುತ್ತಾನೆ ಎನ್ನುತ್ತಿದ್ದರು. ಮತ್ತೆ ಕೆಲವರು, ಓದಿ ಓದಿ ತಂದೆಯಂತೆ ಅವನೂ ಹುಚ್ಚನಾಗಿಬಿಡಬಹುದೆಂದು ಶಂಕೆಪಡುತ್ತಿದ್ದರು. ಹುಚ್ಚನಾಗಿ ಬಿಡಬಹುದೆಂದು ಶಂಕೆಪಡುವವರಲ್ಲಿ ಕಾಶೀನಾಥನ ಸೋದರಮಾವನೂ ಒಬ್ಬನು. ಆತನು ಮಧ್ಯೆ ಮಧ್ಯೆ, "ಮಗು, ನೀನು ಬಡವರ ಮನೆಯ ಹುಡುಗ. ಇಷ್ಟೊಂದು ಓದಿ, ಬರೆದು ಏನು ಮಾಡುತ್ತೀಯೆ? ನೀನು ಈವಾಗ ಎಷ್ಟು ಓದಿದ್ದೀಯೋ ಅಷ್ಟು ವಿದ್ಯೆಯಿಂದ ಎಲ್ಲಿಯಾದರೂ ಹೊತ್ತಿಗೆ ಒಂದು ತುತ್ತು ಅನ್ನ, ಉಡೋಕೆ ಒಂದು ಜೊತೆ ಬಟ್ಟೆ, ಒಂದು ತಂಬಿಗೆ ಥಾಲಿ ಸುಲಭವಾಗಿ ಸಿಗುತ್ತೆ. ಇಷ್ಟೊಂದು ಓದಿ ಕಡೆಗೆ ನೀನೂ ಕೂಡ ಸ್ವರ್ಗವಾಸಿಯಾದ ನಿನ್ನ ತಂದೆ ವಂದ್ಯೋಪಾಧ್ಯಾಯರ ಹಾಗೆ ಮೂಲೆಯಲ್ಲಿ ಕುಳಿತುಕೊಂಡು ತಲೆಯಾಡಿಸುತ್ತಾ ಇರುತ್ತೀಯೇನು? ಈಗ ಉಳಿದಿರುವ ಅಲ್ಪ ಸ್ವಲ್ಪ ಆಶಾಕಿರಣವೂ ಉಳಿಯದೆ ಹೋಗಿಬಿಡುತ್ತದೆ" ಎಂದು ಅವನಿಗೆ ಹೇಳುತ್ತಿದ್ದರು.

ಸೋದರಮಾವನ ಈ ಉಪದೇಶವು ಕಾಶೀನಾಥನ ಒಂದು ಕಿವಿಯಲ್ಲಿ ಪ್ರವೇಶಿಸಿ ಒಡನೆಯೇ ಮತ್ತೊಂದು ಕಿವಿಯಿಂದ ಹೊರ ಹೊರಟುಬಿಡುತ್ತಿತ್ತು.

ತನ್ನ ಮನಸ್ಸಿನಲ್ಲಿನ ಶಂಕೆಯಿಂದ, ಹುಚ್ಚು ಹಿಡಿದಿರಬಹುದೆಂದು ಸೋದರಮಾವನು ಅವನನ್ನು ಹೆದರಿಸುತ್ತಿದ್ದನು; ಮನೆಯ ಯಾವ ಕೆಲಸ ಕಾರ್ಯಗಳನ್ನೂ ಮಾಡುತ್ತಿರಲಿಲ್ಲವಾದ್ದರಿಂದ ಸೋದರತ್ತೆಯು ಅವನನ್ನು ಗದರಿಸಿ ಶಪಿಸುತ್ತಿದ್ದಳು; ಮತ್ತು ವ್ಯಾಕರಣ ಸಾಹಿತ್ಯದಲ್ಲಿ ಪ್ರವೀಣನೆಂದು ವಯಸ್ಸಿನಲ್ಲಿ ಹಿರಿಯನಾದ ಮಾತುಲ ಪುತ್ರನು ಅವನನ್ನು

ಗೇಲಿಮಾಡುತ್ತಿದ್ದನು. ಆದರೆ ಕಾಶೀನಾಥನು ಎಲ್ಲವನ್ನೂ ಧೈರ್ಯದಿಂದ ಸಹಿಸುತ್ತಿದ್ದನೋ ಇಲ್ಲವೆ ಆ ಮಾತುಗಳ ಆಳವನ್ನೇ ಅರಿಯಲಾರನಾಗಿದ್ದನೋ ತಿಳಿಯದು.

ಅದು ಏನೇ ಆಗಿರಲಿ, ಪರಿಣಾಮವೇನೋ ಒಂದೇ ಆಯಿತು. ಅವನು ಪ್ರತಿದಿನವೂ ಏನನ್ನು ಮಾಡುತ್ತಿದ್ದನೋ ಅದನ್ನೇ ಇವತ್ತಿಗೂ ಮಾಡುತ್ತಿದ್ದನು. ಸಂಜೆಯ ಹೊತ್ತು, ಒಮ್ಮೆ ಬಯಲಿನಲ್ಲಿ ತನ್ನ ಸಂತೋಷಕ್ಕಾಗಿ ಸುಮ್ಮನೆ ಅಡ್ಡಾಡುತ್ತಿದ್ದನು; ಮತ್ತೊಮ್ಮೆ ನದೀ ದಡದಲ್ಲಿನ ಒಂದು ಹಳೆಯ ಅತ್ತೀಮರದಡಿಯಲ್ಲಿ ಕುಳಿತು ರಕ್ತರಂಜಿತನಾಗಿ ಅಸ್ತಂಗತನಾಗುತ್ತಿರುವ ಸೂರ್ಯನ ಪ್ರಕಾಶವನ್ನೂ, ಸೌಂದರ್ಯವನ್ನೂ ಮತ್ತು ಹೇಗೆ ಸ್ವಲ್ಪ ಸ್ವಲ್ಪವಾಗಿ ಆಕಾಶದಂಚಿನಲ್ಲಿ ವಿಲೀನವಾಗುತ್ತಿರುವನೆಂಬುದನ್ನು ನೋಡುತ್ತಿದ್ದನು; ಇನ್ನೊಮ್ಮೆ ಆ ಗ್ರಾಮದ ಜಮೀನುದಾರನ ಮನೆಗೆ ಸೇರಿದ ಶಿವಮಂದಿರಕ್ಕೆ ಹೋಗಿ ಶಿವಾರ್ಚನೆ ಆರತಿಗಳನ್ನು ಅರ್ಧನಿಮೀಲಿತ ನೇತ್ರದಿಂದ ಅನುಭವಿಸಿ ಆನಂದಿಸುತ್ತಿದ್ದನು; ಒಂದೊಂದು ಸಲ ಇವಾವುದನ್ನೂ ಮಾಡದೆ ತನ್ನ ಸೋದರಮಾವನ ಚಂಡೀಮಂಟಪಕ್ಕೆ ಹೋಗಿ, ಒಂದು ಕಗ್ಗತ್ತಲು ಮೂಲೆಯಲ್ಲಿ ಕಂಬಳಿಯ ಆಸನ ಹಾಕಿಕೊಂಡು ಸುಮ್ಮನೆ ಅದರಮೇಲೆ ಕುಳಿತುಬಿಡುತ್ತಿದ್ದನು.

ಈ ಪ್ರಪಂಚದಲ್ಲಿ ತನಗೇನೂ ಕೆಲಸವಿಲ್ಲವೆನ್ನುವಂತೆ, ಯಾವ ಉದ್ದೇಶವೂ ಇಲ್ಲವೆನ್ನುವಂತೆ, ಯಾವ ಆಸೆಯೂ ಇಲ್ಲವೆನ್ನುವಂತೆ! ಅವನ ಹನ್ನೆರಡನೆಯ ವಯಸ್ಸಿನಲ್ಲಿಯೇ ಅವನ ತಂದೆಯವರು ಸ್ವರ್ಗಸ್ಥರಾಗಿದ್ದರು. ಅಲ್ಲಿಂದೀಚಿನ ಈ ಆರು ವರ್ಷಗಳನ್ನೂ ಅವನು ಇದೇ ರೀತಿಯಾಗಿಯೇ ತನ್ನ ಜೀವನವನ್ನು ಸೋದರಮಾವನ ಮನೆಯಲ್ಲಿಯೇ ಕಳೆದಿದ್ದಾನೆ. ಈಗೇನು ಮಾಡುತ್ತೇನೆ, ಆಮೇಲೇನು ಮಾಡಬಹುದು, ಹಿಂದೇನು ಮಾಡಿದ್ದೆ ಅಲ್ಲದೆ ಈಗೇನು ಮಾಡಬೇಕಾದ ಅವಶ್ಯಕತೆಯಿದೆ ಮತ್ತು ಮಾಡಬೇಕಾಗಿದೆ—ಈ ಯಾವುವೂ ಅವನ ಮನಸ್ಸಿನಲ್ಲಿ ಯಾವಾಗಲೂ ತಲೆದೋರುತ್ತಲೇ ಇರಲಿಲ್ಲ. ಇದೇ ರೀತಿಯಲ್ಲಿಯೇ ದಿನಗಳನ್ನು ಕಳೆಯಬೇಕು; ಯಾವತ್ತಿಗೂ ಹೀಗೆಯೇ ಎರಡು ಹೊತ್ತು ಒಣಕಲು ರೊಟ್ಟಿ ತಂಗಳನ್ನವನ್ನು ತಿಂದುಕೊಂಡಿರಬೇಕು; ಅತ್ತೆ ಮಾವಂದಿರ ಬೆದರಿಕೆ ಬೈಗಳನ್ನು ಕೇಳುತ್ತಿರಬೇಕು; ಅದೂ ಅಲ್ಲದೆ ಬೇರೆಲ್ಲಿಗೂ ಹೋಗಬೇಕಾದದ್ದೂ ಇಲ್ಲವೇನೋ, ಬೇರೇನೂ ಮಾಡಬೇಕಾಗಿಯೂ ಇಲ್ಲವೇನೋ ಎಂದವನಿಗೆ ಅನ್ನಿಸಿತ್ತೋ ಏನೋ! ಅವನು ಆ ಕತ್ತಲು ಮೂಲೆಯಲ್ಲಿ ಕುಳಿತುಕೊಳ್ಳುವುದನ್ನು ನೋಡಿದರೆ ಆ ನೀರವ, ನಿಸ್ತಬ್ಧ, ಕಗ್ಗತ್ತಲ ಮೂಲೆಯು ಸದಾ ಅವನ ಅಧಿಕಾರದಲ್ಲಿಯೇ ಇರುವುದು, ಯಾರೂ ಅದನ್ನು ಬಂದು ಅಕ್ರಮಿಸುವುದಿಲ್ಲ ಮತ್ತು ಜಾಗ ಬಿಟ್ಟು ಹೋಗಿ ಬೇರೆಡೆಯಲ್ಲಿ ಕುಳಿತುಕೋ ಎಂದು ಯಾರೂ ಹೇಳುವುದಿಲ್ಲವೇನೋ ಎಂದು ಅವನು ತಿಳಿದುಕೊಂಡಿದ್ದನೇನೋ ಎಂದೆನಿಸುತ್ತಿತ್ತು! ಊರಿನವರಾರಾದರೂ ಯಾವಾಗಲಾದರೂ ಒಮ್ಮೆ ಅಭಿಮಾನವಿಟ್ಟು ಅವನನ್ನು ಕರೆದು, "ಅಪ್ಪಾ ಕಾಶೀನಾಥ, ಈ ರೀತಿಯಲ್ಲಿ ಯಾವಾಗಲೂ ಯಾರ ಜೀವನವೂ ಜರುಗಿಲ್ಲ; ನಿನ್ನದೂ ಜರುಗುವುದಿಲ್ಲ, ಯಾವು

ದಾದರೂ ಆಗಲಿ ಒಂದು ಕೆಲಸಮಾಡು” ಎಂದು ಹೇಳುತ್ತಿದ್ದರು.

ಕಾಶೀನಾಥನು ಉತ್ತರವನ್ನೂ ಕೊಡುತ್ತಿರಲಿಲ್ಲ. ಕೇವಲ ಮನಸ್ಸಿನಲ್ಲಿ, ನಾನೇನು ಮಾಡುತ್ತಿದ್ದೇನೆ ಮತ್ತು ನಾನೇನು ಮಾಡಬೇಕು ಎಂದು ಯೋಚಿಸುವನು.

ಅಂತೂ ಹೀಗೆಯೇ ಕಾಶೀನಾಥನ ದಿನಗಳುಕಳೆಯುತ್ತಿದ್ದವು.

—೨—

ಆ ಗ್ರಾಮದ ಜಮೀನುದಾರನ ಹೆಸರು ಪ್ರಿಯನಾಥಮುಖೋಪಾಧ್ಯಾಯ. ಆ ಪ್ರಿಯನಾಥಬಾಬುವು ಉತ್ತಮ ಕುಲೀನನೂ ಮತ್ತು ಅತ್ಯಂತ ಧನಾಢ್ಯನೂ ಆಗಿದ್ದನು. ಅಷ್ಟೊಂದು ದೊಡ್ಡಮನುಷ್ಯನಾಗಿದ್ದರೂ ಸಹ ಎಷ್ಟೆಷ್ಟೋ ಹುಡುಕಿದರೂ ಸರ್ವರೂಪ ಗುಣಸಂಪನ್ನನಾದ, ತನ್ನಅಂತಸ್ತು ಕುಲಮರ್ಯಾದೆಯನ್ನು ರಕ್ಷಿಸಲು ಯೋಗ್ಯನಾದ ವರನು ಸಿಕ್ಕಲಿಲ್ಲ. ಆಗಿನಿಂದ ಅವನಿಗೆ ತನ್ನ ಕುಲ ಮರ್ಯಾದೆ ಅಂತಸ್ತುಗಳ ಕಾರಣದಿಂದ ಮನಸ್ಸು ತುಂಬಾ ಚಿಂತಾಜನಕವಾಯಿತು. ಇತ್ತ ಹೆಂಡತಿಯೊಡನೆ ಈ ಮಾತೇನಾದರೂ ಆಡಿದರೆ, “ನನಗೆ ಒಬ್ಬಳೇ ಮಗಳು, ನಿಮ್ಮ ಕುಲ ಮರ್ಯಾದೆ, ನೇಮ ಕಟ್ಟಿಕೊಂಡು ನನಗೇನಾಗಬೇಕು” ಎಂದುಬಿಡುವಳು.

ಆ ಜಮೀನುದಾರನ ಕುಲಗುರುಗಳು ಸಹ ಅದೇ ಗ್ರಾಮದಲ್ಲಿಯೇ ವಾಸಿಸುತ್ತಿದ್ದರು. ಅವರಿಗೆ ಈ ಸಮಾಚಾರ ತಿಳಿಸಲಾಗಿ, “ಹರಿ ಹರಿ! ಹಾಗೆಲ್ಲಾದರೂ ಸಾಧ್ಯವಾಗುತ್ತದೆಯೇ. ನಿನಗೇನು ದುಡ್ಡಿಗೆ ಕೊರತೆಯಿಲ್ಲ. ಯಾರಾದರೂ ಕುಲೀನರಾದ ಬಡವರ ಮನೆಯ ವರನಿಗೆ ಕನ್ಯಾದಾನ ಮಾಡಿ ಮಗಳು ಅಳಿಯನನ್ನು ನಿನ್ನ ಮನೆಯಲ್ಲಿಯೇ ಇರಿಸಿಕೋ. ಇದು ನೋಡುವುದಕ್ಕೂ ಚೆನ್ನಾಗಿರುತ್ತೆ; ಕೇಳುವುದಕ್ಕೂ ಚೆನ್ನಾಗಿರುತ್ತೆ. ಎಷ್ಟು ದೊಡ್ಡ ವಂಶ, ಎಷ್ಟು ಉತ್ತಮ ಕುಲ! ಅಂತಹ ಮನೆತನದ ಮರ್ಯಾದೆಯನ್ನು ನಷ್ಟಪಡಿಸಿಕೊಳ್ಳುವುದರಿಂದ ಒಳ್ಳೆಯದಾಯದಾಗುತ್ತದೆಯೇ ?” ಎಂದು ಅವರು ಹೇಳಿದರು. ಪ್ರಿಯನಾಥನು ಈ ಮಾತನ್ನು ಬಂದು ಮನೆಯಲ್ಲಿ ಹೇಳಿದ. ಅವನ ಹೆಂಡತಿಯು ಅತ್ಯಂತ ಸಂತೋಷದಿಂದ ತನ್ನ ಸಮ್ಮತಿ ಮುದ್ರೆಯೊತ್ತಿ, “ಹೌದು, ಹಾಗೆಯೇ ಮಾಡಿ. ನಾನೆಷ್ಟು ದಿವಸ ಜೀವಿಸಿದ್ದರೆ ಅಷ್ಟು ದಿವಸವೂ ಕಮಲಾ ನನ್ನ ಬಳಿಯೇ ಇರುತ್ತಾಳೆ” ಎಂದು ಹೇಳಿದಳು.

ಹಾಗೆಯೇ ಆಯಿತು. ಕುಲೀನರಾದ ಬಡವರ ಮನೆಯ ಹುಡುಗನಿಗೆ ಮಗಳನ್ನು ವಿವಾಹಮಾಡಿಕೊಟ್ಟು ಮಗಳು ಅಳಿಯನನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಳ್ಳುವ ವಿಚಾರ ನಿಶ್ಚಯಮಾಡಿಕೊಂಡನಂತರ ಒಂದು ದಿನ ಪ್ರಿಯನಾಥ ಬಾಬುವು ಪಂಡಿತ ಮಧುಸೂದನ ಮುಖೋಪಾಧ್ಯಾಯನ ಮನೆಗೆ ಬಂದನು. ಪಂಡಿತಮಹಾಶಯನು ತನ್ನ ಯಜಮಾನನ ಮನೆಗೆ ನಿತ್ಯಪೂಜೆ ಮಾಡಲೆಂದು ಆಗತಾನೆ ಹೊರಟಿದ್ದ. ಆಕಸ್ಮಾತ್ತಾಗಿ, ಸ್ವಯಂ ಜಮೀನುದಾರರೇ ದಯಮಾಡಿಸಿಬಿಟ್ಟಿದ್ದುದರಿಂದ ಅವನು ಬಹಳ ಇಕ್ಕಟ್ಟಿಗೆ

ಸಿಕ್ಕಿಹಾಕಿಕೊಂಡನು. ಪಾಪ ಆ ಬಡಪಾಯಿಗೆ, ಆ ಭಾರಿ ಜಮೀನುದಾರನನ್ನು ಎಲ್ಲಿ ಕುಳಿತುಕೊಳ್ಳಿರೆಂದು ಹೇಳಬೇಕು; ಹೇಗೆ ಗೌರವಿಸಬೇಕು ಎಂಬುದು ತಿಳಿಯಲಾರದೆ ಹೋಯಿತು. ಪ್ರಿಯನಾಥ ಬಾಬುವಿಗೆ, ಪಂಡಿತ ಮಧುಸೂಧನ ಮಹಾಶಯನು ಇಕ್ಕಟ್ಟಿಗೆ ಸಿಕ್ಕಿಕೊಂಡು ಸಂಕಟಪಡುತ್ತಿರುವನೆಂದು ಗೋಚರವಾಯಿತು. ಆದರಿಂದ ನಗುತ್ತಾ, "ನಿಮ್ಮ ಹತ್ತಿರ ಕೊಂಚ ಕೆಲಸವಿತ್ತು. ನಡೆಯಿರಿ, ಕೊಂಚ ಒಳಗೆ ಹೋಗಿ ಕುಳಿತುಕೊಳ್ಳೋಣ" ಎಂದನು.

"ಹೌದು, ನಡೆಯಿರಿ. ಆದರೆ .. .."

"ಆದರೆ ಗೀದರೆ ಏನೂ ಇಲ್ಲ-ನಡೆಯಿರಿ ಒಳಗೇ ಕುಳಿತುಕೊಂಡು ಎಲ್ಲವನ್ನೂ ಹೇಳುತ್ತೇನೆ."

ಇಬ್ಬರೂ ಚಂಡೀ ಮಂಟಪದಲ್ಲಿ ಹೋಗಿ ಕುಳಿತರು.

"ನಿಮ್ಮ ಸೋದರಳಿಯ ಎಲ್ಲಿ ?" ಎಂದು ಪ್ರಿಯನಾಥ ಬಾಬುವು ಕೇಳಿದನು.

"ಇನ್ನೆಲ್ಲಿರುತ್ತಾನೆ ? ಭಟ್ಟಾಚಾರ್ಯರ ಪಾಠಶಾಲೆಯಲ್ಲಿ ಓದುತ್ತಿರುತ್ತಾನೆ."

"ಕೊಂಚ ಅವನನ್ನು ಕರೆಸಿ ಮತ್ತೆ."

"ಕರೆಸುತ್ತೇನೆ. ಏನಾದರೂ ಅವಶ್ಯಕವಾದ ಕೆಲಸ ಇದೆಯೇನು ?"

"ಹೌದು. ಒಂದು ಅವಶ್ಯಕವಾದ ಕೆಲಸ ಇದೆ."

ಏನೂ ಕೆಲಸಕ್ಕೆ ಬಾರದ ಆ ಹುಡುಗನ ಹತ್ತಿರ ಈ ಭಾರಿ ಜಮೀನುದಾರರಿಗೆ ಏನಂತಹ ಕೆಲಸವಿದ್ದಾತೆಂಬುದು ಮಧುಸೂದನ ಮುಖೋಪಾಧ್ಯಾಯನ ಮನಸ್ಸಿಗೆ ಗೋಚರವಾಗದೆ ಹೋಯಿತು ! ಬದಲಾಗಿ ಆತನು ಕೊಂಚ ಹೆದರಿ, "ಅವನಿಂದ ಏನಾದರೂ ತಪ್ಪಾಗಿದೆಯೆ ?" ಎಂದು ಕೇಳಿದನು.

"ತಪ್ಪೇನಾಗುತ್ತೆ ?"

"ಹಾಗಾದರೆ ?"

ಪ್ರಿಯಬಾಬುವು ನಕ್ಕುಬಿಟ್ಟ. ನಂತರ, "ನಾನು ಅವನನ್ನು ನನ್ನ ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದ್ದೇನೆ. ಅಲ್ಲದೆ ಈ ಸಂಬಂಧದಿಂದ ನೀವು ನನ್ನ ಬಂಧುಗಳೂ ಆಗುವಿರಿ" ಎಂದು ಮತ್ತೆ ಗಟ್ಟಿಯಾಗಿ ನಗಲಾರಂಭಿಸಿದನು. ಯಾವ ವಿಚಾರವನ್ನು ಯೋಚಿಸಿ ಪ್ರಿಯನಾಥನಿಗೆ ಅಷ್ಟೊಂದು ನಗು ಬಂದಿತ್ತೆಂಬುದೇನಾದರೂ ಮಧುಸೂಧನ ಮುಖೋಪಾಧ್ಯಾಯನಿಗೆ ಗೊತ್ತಾಗಿ ಬಿಟ್ಟಿದ್ದಿದ್ದರೆ ಆತನು ಮತ್ತೇನನ್ನೂ ಹೇಳುತ್ತಿರಲಿಲ್ಲ ಅಂತ ಕಾಣುತ್ತೆ. ಆತನು ಆಶ್ಚರ್ಯದಿಂದ ಕಣ್ಣರಳಿಸಿ ಅರಳಿಸಿ ಜಮೀನುದಾರನ ಕಡೆಯೇ ನೋಡುತ್ತಿದ್ದು, ಕೊಂಚ ಹೊತ್ತಾದನಂತರ, "ಯಾರನ್ನ? ...... ಕಾಶೀನಾಥನನ್ನೇ ?" ಎಂದು ಪ್ರಶ್ನಿಸಿದನು.

"ಹೌದು"

"ಏತಕ್ಕೆ ?"

"ನಮ್ಮ ಅಂತಸ್ತು ಮಟ್ಟಕ್ಕೆ ಸರಿಸಮಾನನಾದ ಕುಲೀನ ವರ ಹುಡುಕಿದರೂ ನನಗೆ ದೊರಕಲಿಲ್ಲ. ಇದರಲ್ಲಿ ನಿಮ್ಮ ದೇನಾದರೂ ಅಡ್ಡಿ ಇದೆಯೇನು ?"

"ಅಡ್ಡಿ ? ಅಡ್ಡಿಯೇತರದು - ಇದು ನಿಜವಾಗಿಯೂ ನನ್ನ ಪರಮ ಸೌಭಾಗ್ಯ. ಆದರೆ ಅವನಿಗೆ ಹುಚ್ಚು."

"ಹುಚ್ಚು ಹೇಗೆ ? ನಾನು ಯಾವಾಗಲೂ ಕೇಳಿಯೇ ಇಲ್ಲ."

"ಅವನ ತಂದೆಗೆ ಹುಚ್ಚಿತ್ತು!"

ಕಾಶಿನಾಥನ ತಂದೆಯನ್ನು ಪ್ರಿಯಬಾಬುವು ಬಹಳ ಚೆನ್ನಾಗಿ ಬಲ್ಲನು ಮತ್ತು ಅನೇಕ ಜನಗಳು ಅವನನ್ನು ಹುಚ್ಚನೆಂದು ಕರೆಯುತ್ತಿದ್ದರೆಂಬುದೂ ಆತನಿಗೆ ಗೊತ್ತಿತ್ತು ಪ್ರಿಯಬಾಬುವು ಕೊಂಚ ಹೊತ್ತು ಯೋಚಿಸಿ, "ಹುಡುಗನ ಹೆಸರೇನು ?" ಎಂದು ಕೇಳಿದನು.

"ಕಾಶೀನಾಥ ವಂದ್ಯೋಪಾಧ್ಯಾಯ"

"ಅವನನ್ನು ಕೊಂಚ ಕರೆಸಿ. ನಾನು ಕೊಂಚ ನೋಡಬೇಕಾಗಿದೆ."

ಕಾಶೀನಾಥನನ್ನು ಕರೆಯಲು ಮಧುಸೂದನ ಮುಖ್ಯೋಪಾಧ್ಯಾಯನು ಹೇಳಿ ಕಳುಹಿಸಿದ. ಕರೆಯಲು ಹೋದವನು ಮಧುಸೂಧನನ ಕಿರಿಯಮಗ. ಅವನು ಹೋಗಿ "ಕಾಶೀನಾಥ ಅಣ್ಣಯ್ಯ" ಎಂದು ಕೂಗಿದ.

ಆಗ ಕಾಶೀನಾಥನು ತಲೆಯೆತ್ತಿ ನೋಡಿ "ಏನು ?" ಎಂದು ಕೇಳಿದ.

"ಅಪ್ಪ, ನಿನ್ನ ಕರೀತಾರೆ"

"ಏಕೆ ?"

"ಅದು ಗೊತ್ತಿಲ್ಲ. ಜಮೀನುದಾರರು ಬಂದಿದ್ದಾರೆ. ಅವರೇ ನಿನ್ನನ್ನು ಕರೆ ಹೇಳಿದವರು"

ಕಾಶೀನಾಥನು ನಿಧಾನವಾಗಿ ತನ್ನ ಪುಸ್ತಕದ ಕಡತವನ್ನು ಕಟ್ಟಿಕೊಂಡು ಹೊರಟು ಬಂದ. ಬಂದವನೇ ಜಮೀನುದಾರನ ಎದುರಿಗೆ ಹೋಗಿ ಕುಳಿತ. ಪ್ರಿಯನಾಥಬಾಬುವು ಅವನನ್ನು ಮೇಲಿನಿಂದ ಕೆಳಗಿನವರೆಗೂ ಚೆನ್ನಾಗಿ ದೃಷ್ಟಿಸಿ ನೋಡಿ, "ಕಾಶೀನಾಥ ನೀನೆಲ್ಲಿದ್ದೆ ?" ಎಂದು ಕೇಳಿದನು.

"ಭಟ್ಟಾಚಾರ್ಯರ ಪಾಠಶಾಲೆಯಲ್ಲಿ ಓದುತ್ತಿದ್ದೆ."

"ನೀನು ವ್ಯಾಕರಣ ಓದಿದ್ದೀಯಾ ?"

ಕಾಶೀನಾಥನು ತಲೆಹಾಕಿ "ಹೌದು ಓದಿದ್ದೇನೆ" ಎಂದು ಉತ್ತರಕೊಟ್ಟನು.

"ಸಾಹಿತ್ಯ ಓದಿದ್ದೀಯಾ ?"

"ಸಾಧಾರಣ ಓದಿದ್ದೇನೆ"

"ಈಗೇನು ಓದುತ್ತಿದ್ದೀಯೆ ?"

"ಸಾಂಖ್ಯ—ದರ್ಶನ"

"ಸರಿ ಹೋಗು—ಓದಿಕೋ ಹೋಗು" ಎಂದು ಪ್ರಿಯಬಾಬು ಹೇಳಿದನು.

ಕಾಶೀನಾಥನು ಹೊರಟುಹೋದನು. ತನ್ನನ್ನು ಏತಕ್ಕಾಗಿ ಕರೆಸಿದರು? ಏತಕ್ಕಾಗಿ ಹೋಗೆಂದು ಹೇಳಿದರೆಂಬುದೊಂದೂ ಅವನಿಗೆ ತಿಳಿಯಲಿಲ್ಲ. ಪಾಠಶಾಲೆಗೆ ಹೋಗಿ ಅವನು ಪುನಃ ತನ್ನ ಕಡತ ಬಿಚ್ಚಿಕೊಂಡು ಕುಳಿತುಬಿಟ್ಟ. ಅವನು ಹೊರಟು ಹೋದ ನಂತರ ಪ್ರಿಯಬಾಬುವು, "ಹೌದು, ನೀವೇನೋ ಹುಚ್ಚಿನ ವಿಚಾರವನ್ನು ಹೇಳುತ್ತಿದ್ದಿರಲ್ಲ" ಎಂದನು.

"ಇಲ್ಲ. ಹುಚ್ಚ ಅಂತಲೇ ಹೇಳುವುದಕ್ಕಾಗುವುದಿಲ್ಲ. ಆದರೆ, ಹೀಗೆ ಏನೋ ಒಂದು ವಿಚಿತ್ರ ಬಗೆಯಲ್ಲಿ ಇರುತ್ತಾನೆ ಆದರಿಂದ ಕೆಲಕೆಲವರು ಅವನನ್ನು ಹುಚ್ಚ ಅನ್ನುತ್ತಾರೆ" ಎಂದು ಮುಖ್ಯೋಪಾಧ್ಯಾಯನು ಹೇಳಿದ.

"ಅದು ಹೇಗೆ ?"

"ಯಾವಾಗಲೂ ಪುಸ್ತಕ ಹಿಡಿದುಕೊಂಡು ಕುಳಿತಿರುತ್ತಾನೆ. ಇಲ್ಲವೇ ಒಂಟಿಯಾಗಿ ತನ್ನ ಮನಸ್ಸಿಗೆ ಬಂದಲ್ಲಿ ಸುಮ್ಮನೆ ಸುತ್ತಾಡುತ್ತಿರುತ್ತಾನೆ. ಯಾವುದೊಂದು ಮಾತಿಗಾಗಲಿ, ಕೆಲಸಕ್ಕಾಗಲಿ, ಅವನು ಸೇರುವುದೇ ಇಲ್ಲ. ಹೀಗೆ ಏನೋ ಒಂದು ಬಗೆಯಾಗಿ ಒಂದು ತರಹ ವಿಚಿತ್ರವಾಗಿರುತ್ತಾನೆ."

"ಇನ್ನೇನಾದರೂ ಮಾಡುತ್ತಾನೆಯೋ ?"

"ಇಲ್ಲೇ ಯಾವಾಗಲಾದರೂ ಕತ್ತಲು ಮೂಲೆಯಲ್ಲಿ ಒಬ್ಬನೇ ಸುಮ್ಮನೆ ಅನೇಕ ಗಂಟೆಗಳು ಕುಳಿತಿರುತ್ತಾನೆ."

ಪ್ರಿಯ ಬಾಬು ನಗುತ್ತಾ, "ಇನ್ನೇನಾದರೂ ?" ಎಂದು ಕೇಳಿದನು.

ಈ ಸಲ ಈ ನಗುವಿನ ಅರ್ಥ ಮಧುಸೂದನ ಮುಖ್ಯೋಪಾಧ್ಯಾಯನಿಗೆ ಕೊಂಚ ಕೊಂಚ ಅರ್ಥವಾಗಿರಬೇಕು. ಅದಕ್ಕೆ ಕೊಂಚ ಹಾಗೆ ಹೀಗೆ ನೋಡಿ, "ಇಲ್ಲ. ಇನ್ನೇನೂ ಇಲ್ಲ" ಎಂದನು.

"ಹಾಗಾದರೆ ಒಳಗೆ ಹೋಗಿ ಕೊಂಚ ವಿಚಾರಿಸಿಕೊಂಡು ಬನ್ನಿ. ಅವರುಗಳದೂ ಒಪ್ಪಿಗೆಯಾಗಿಬಿಟ್ಟರೆ, ಈ ಮಾಸದಲ್ಲಿಯೇ ಮದುವೆಯನ್ನೂ ನೆರವೇರಿಸಿಬಿಡೋಣ"

ಒಳಗೆ ಹೋಗಿ ಪಂಡಿತ ಮಹಾಶಯನು ಸಮಸ್ತ ವಿಚಾರಗಳನ್ನೂ ತನ್ನ ಹೆಂಡತಿಗೆ ತಿಳಿಯಪಡಿಸಿದನು. ಆಕೆಯು ಆ ಮಾತನ್ನು ಕೇಳಿ ಆಕಾಶದಿಂದ ಕಳಚಿಬಿದ್ದಂತಾದಳು. ಆಶ್ಚರ್ಯದ ಹೊಡೆತವು ಕೊಂಚ ಕಡಿಮೆಯಾದನಂತರ, "ಏನು ? ಕಾಶಿಯ ಜೊತೆಯಲ್ಲಿ ಪ್ರಿಯ ಬಾಬುವಿನ ಮಗಳ ಲಗ್ನವೇ ! ನಿಮಗೇನು ಹುಚ್ಚು ಹಿಡಿಯಿತೆ ?" ಎಂದಳು.

"ಇದರಲ್ಲಿ ಹುಚ್ಚು ಹಿಡಿಯುವ ವಿಚಾರವೇನು ?"

"ಅಲ್ಲದೆ ಇನ್ನೇನು ?"

"ಕಾಶೀನಾಥ ಎಷ್ಟು ಉತ್ತಮಕುಲ ಪ್ರಸೂತನೆಂದು ಮೊದಲು ಯೋಚಿಸು."

ಆಕೆಯೊಂದು ದೀರ್ಘಶ್ವಾಸವೆಳೆದು, "ನಮ್ಮ ಹರಿಯೊಡನೆ ಆಗುವುದಿಲ್ಲವೇ ?"

ಎಂದು ಕೇಳಿದಳು.

ಅದು ಖಂಡಿತ ಸಾಧ್ಯವಿಲ್ಲವೆಂದು ಇಬ್ಬರಿಗೂ ಗೊತ್ತಿತ್ತು. ಪಂಡಿತ ಮಹಾಶಯನು ಒಂದು ಸಲ ಜೋರಾಗಿ ಉಸಿರೆಳೆದು, "ನಿನ್ನ ಸಲಹೆ ಏನು ಹೇಳು" ಎಂದು ಕೇಳಿದನು.

ಆಕೆಯು ವಿಷಾದಭರಿತ ಸ್ವರದಿಂದ, "ಸಲಹೆ ಏನು ?.......ಹು... ...ಮದುವೆ ಆಗಿಬಿಡಲಿ" ಎಂದಳು.

ಪಂಡಿತ ಮಹಾಶಯನು ಹೊರಗೆ ಬಂದು ಒಣ ನಗು ನಗುತ್ತಾ, ಮನೆಯಲ್ಲಿ ಹೆಂಗಸರ ಆನಂದಕ್ಕಂತೂ ಪಾರವೇ ಇಲ್ಲ-ಹಿಡಿಸಲಾರದಷ್ಟು ಹಿಗ್ಗಿಬಿಟ್ಟರು. ಕಾಶಿಯ ಮಾತೃ ಸ್ಥಾನದಲ್ಲಿ ಆಕೆಯೇ ಇದ್ದಾಳೆ. ಕಾಶಿಗೆ ಇನ್ನೂ ಎರಡು ವರ್ಷ ಕೂಡ ತುಂಬಿರಲಿಲ್ಲ. ನನ್ನ ತಂಗಿ ದೈವಾಧೀನವಾಗಿ ಬಿಟ್ಟಳು. ಆವಾಗಿನಿಂದಲೂ ಇವಳೇ ಒಂದು ರೀತಿಯಲ್ಲಿ ಲಾಲಿಸಿ ಪಾಲಿಸಿ, ಪೋಷಿಸಿ ದೊಡ್ಡವನನ್ನು ಮಾಡಿದ್ದಾಳೆ. ಆಮೇಲೆ ನನ್ನ ಭಾವ ತೀರಿ ಹೋದಮೇಲಿನಿಂದಂತೂ ಕಾಶಿಯು ಇಲ್ಲಿಯೇ ಇದ್ದಾನೆ" ಎಂದನು.

"ನನಗೆ ಎಲ್ಲಾ ಗೊತ್ತಿದೆ. ಸರಿ ಹಾಗಾದರೆ ಇವತ್ತೇ ಎಲ್ಲಾ ನಿಷ್ಕರ್ಷಿಸಿಬಿಡಿ" ಎಂದು ಪ್ರಿಯಬಾಬು ಹೇಳಿದ.

"ನಿಷ್ಕರ್ಷಿಸಬೇಕಾದದ್ದೇನಿದೆ. ತಮಗೆ ಯಾವಾಗ ಅನುಕೂಲವಾಗುತ್ತೋ ಆ ದಿವಸವೇ ನಾನು ಆಶೀರ್ವಾದ ಮಾಡುವುದಕ್ಕೆ ಸಿದ್ಧನಾಗಿದ್ದೇನೆ."

"ಅದಲ್ಲ ನಾನು ಕುಲಮರ್ಯಾದೆ, ಸಂಪ್ರದಾಯಗಳ ವಿಚಾರ ಕೇಳುತ್ತಿದ್ದೇನೆ"

"ಆ ವಿಚಾರದಲ್ಲಿ ನಾನಿನ್ನೇನುತಾನೆ ನಿಷ್ಕರ್ಷಿಸಬಲ್ಲೆ? ತಾವು ಹೇಗೆ ಅಪ್ಪಣೆ ಕೊಡಿಸಿದರೆ ಹಾಗೆಯೇ ಮಾಡುವುದು. ಆದರೂ ತಮ್ಮ ಭಾವೀ ಅಳಿಯನ ಸೋದರತ್ತೆ— ಅವಳೇ ಒಂದು ರೀತಿಯಲ್ಲಿ ಆವನ ತಾಯಿಯಾಗಿದ್ದಾಳೆ. ಕೊಂಚ ಅವಳೊಡನೆಯೂ ಮಾತನಾಡಿದರೆ ಒಳ್ಳೆಯದಾಗುತ್ತೆ"

"ನಿಜ ನಿಜ. ಆವಶ್ಯಕವಾಗಿ ಆಗಲಿ. ನಾನು ಹೇಳುತ್ತಾ ಇರುವುದೂ ಅದೇ !"

ಅನಂತರ ಹುಡುಗನ ಸೋದರತ್ತೆಯ ಸಲಹೆಯ ಮೇಲೆ, ಮುಖ್ಯೋಪಾಧ್ಯಾಯನ ಇಚ್ಛೆಯಂತೆ ಕಾಶೀನಾಥನ ಜನನೀ ಸ್ಥಾನವನ್ನು ಆಕ್ರಮಿಸಿಕೊಂಡಿರುವ ಅತ್ತೆಯು ನಗದು ಒಂದು ಸಾವಿರ ರೂಪಾಯಿ ಪಡೆದಲ್ಲದೆ ಯಾವ ರೀತಿಯಿಂದಲೂ ಮದುವೆಗೆ ಒಪ್ಪುವುದಿಲ್ಲವೆಂದು ನಿರ್ಣಯಿಸಲಾಯಿತು. ಕಡೆಗೆ ಹಾಗೆಯೇ ಆಯಿತು. ಪ್ರಿಯನಾಥ ಬಾಬುವು ಇದಕ್ಕೆ ಯಾವ ಅಡ್ಡಿಯನ್ನೂ ಒಡ್ಡಲಿಲ್ಲ.

—೩—

ಮೊದಲು ಏನೇ ಆಗಿರವಲ್ಲದೇಕೆ, ಈಗ ಮಾತ್ರ ಮಾತು ಕೊಟ್ಟದ್ದೂ ಅಲ್ಲದೆ, ನಿಶ್ಚಯ ರೂಪದಲ್ಲಿ ಜಮಿನಾನುದಾರನ ಅಳಿಯನಾಗಿ ಬಿಟ್ಟೆನೆಂದು ಕಂಡು ಬಂದ ಒಡನೆಯೇ ಕಾಶೀನಾಥನಲ್ಲಿ ಮಾನಸಿಕ ಸುಖ ಉಳಿಯಲಿಲ್ಲ ಈಗ ಅವನು ಮನಸ್ಸು ಬಂದಾಗ ಎಲ್ಲಿ

ಬೇಕಾದರಲ್ಲಿಗೆ, ಯಾವಾಗ ಬೇಕಾದರೆ ಆವಾಗ ಹೋಗಲು ಸಾಧ್ಯವಿಲ್ಲ. ಎಲ್ಲಿ ಇಷ್ಟ ಬಂದರೆ ಅಲ್ಲಿ ನಿಂತುಕೊಳ್ಳಲಾರ. ಎಲ್ಲಾ ಪದಾರ್ಥಗಳಿಂದಲೂ ತನ್ನನ್ನು ಬೇರೆಮಾಡಿ ಬಿಟ್ಟಿದ್ದಾರೆ, ದೂರಮಾಡಿ ಬಿಟ್ಟಿದ್ದಾರೆ ಎಂದವನಿಗನ್ನಿಸಿತು. ತಾನೆಲ್ಲಿಗಾದರೂ ಹೋಗಬೇಕೆಂದು ಇಷ್ಟಪಟ್ಟರೆ ಅಲ್ಲಿಗೆ ಹೋಗಲು, ಇಲ್ಲವೇ ಮಾವನವರ ಅನುಮತಿ ದೊರೆಯುತ್ತಿರಲಿಲ್ಲ; ಒಂದುವೇಳೆ ಅವೂ ಹೇಗಾದರೂ ದೊರೆತರೆ ಅತ್ತೆಯವರು ಕೋಪಿಸಿಕೊಂಡು, "ಏನಪ್ಪ—ಏನು ಕಡಿಯುವುದಕ್ಕೆ ಹೋಗಬೇಕು" ಎಂದುಬಿಡುತ್ತಿದ್ದರು. ಪಾಪ, ಅಳಿಯ ದೇವರು, ಪೆಚ್ಚುಮೋರೆ ಹಾಕಿಕೊಂಡು ಸುಮ್ಮನಿದ್ದುಬಿಡುತ್ತಿದ್ದ. ಹೀಗೇಕೆ ಆಯಿತು? ತನ್ನನ್ನು ಹೀಗೆ ಕಟ್ಟಿನಲ್ಲಿಡುವುದರಿಂದ ಯಾರ ಯಾವ ಉದ್ದೇಶ ಸಿದ್ಧಿಸುತ್ತದೆ? ಎಂಬುದೊಂದೂ ಅವನ ಬುದ್ಧಿಗೆ ಗೋಚರವಾಗುತ್ತಿರಲಿಲ್ಲ. ಒಂದೊಂದುಸಲ ಅವನೂ ಸಹ, ನಾನೇನು ಸಾಮಾನ್ಯ ಮನುಷ್ಯನೇ ಎಲ್ಲಂದರಲ್ಲಿ, ಹೇಗೆಂದರೆ ಹಾಗೆ, ಯಾವಾಗಂದರೆ ಆವಾಗ ತಿರುಗಾಡುವುದಕ್ಕೆ ಎಂದು ಮನಸ್ಸಿಗೆ ತಿಳಿವಳಿಕೆ ಹೇಳಿಕೊಳ್ಳುವನು. ಆದರೆ ಒಳಹೃದಯವು ಅತ್ತು ಅತ್ತು ಮೊರೆಯಿಡುತ್ತಿತ್ತು—ಮನಸ್ಸಿಗೆ ಆರಾಮವಿಲ್ಲ, ಸಮಾಧಾನವಿಲ್ಲ, ಶಾಂತಿಯಿಲ್ಲ! ಮೊದಲು ಕಲ್ಲುಮುಳ್ಳುಗಳ ಕಾಡಿನಲ್ಲಿ ತನ್ನ ಇಷ್ಟಾನುಸಾರ ಅವನು ತಿರುಗಾಡುತ್ತಿದ್ದ. ಆದರೆ ಈಗ ತಾನು ಬಂಗಾರದ ಪಂಜರದಲ್ಲಿ ಬಂದಿ ಎಂದು ತಿಳಿದುಕೊಳ್ಳಲಾರಂಭಿಸಿದ್ದಾನೆ. ಮೊದಲು ಅವನು ವಿಶಾಲವಾದ ಎಲ್ಲೆಯಿಲ್ಲದ ಸಮುದ್ರದಲ್ಲಿ ಈಜಾಡುತ್ತಿದ್ದ. ಈಗ ನಾಲ್ಕೂ ಕಡೆಯೂ ಎತ್ತರವಾದ ಗೋಡೆಗಳಿಂದ ಆವರಿಸಲ್ಪಟ್ಟ ಸಣ್ಣ ಪುಷ್ಕರಣಿಯಲ್ಲಿ ಅವನನ್ನು ಬಿಟ್ಟುಬಿಡಲಾಗಿದೆ. ಸಮುದ್ರದಲ್ಲಿ ಬಹಳ ಆನಂದದಿಂದ ಈಜಾಡುತ್ತಿದ್ದನೆಂದಲ್ಲ. ಅಲ್ಲಿ ಬಿರುಗಾಳಿ, ಅದ್ಭುತ ಅಲೆಗಳ ಹೊಯ್ದಾಟದಲ್ಲಿ ಸಿಕ್ಕಿ ಒದ್ದಾಡಬೇಕಾಗುತ್ತಿತ್ತು. ಆದರೂ ಅದಕ್ಕೆ ಹೋಲಿಸಿ ನೋಡಿದರೆ ಈ ನಿರ್ಮಲ ಶಾಂತ ಸರೋವರವು ಇನ್ನೂ ಅವನಿಗೆ ಹೆಚ್ಚು ಕಷ್ಟತರವೆಂದೆನಿಸಿತ್ತು. ಇದ್ದಕ್ಕಿದ್ದ ಹಾಗೆಯೇ ಬಿಸಿನೀರಿನ ಕಡಾಯಿಯಲ್ಲಿ ಅದ್ದಿದಂತೆ ಅವನಿಗೆ ಅನ್ನಿಸುತ್ತಿತ್ತು. ಎಲ್ಲರೂ ಸೇರಿ ಒಟ್ಟು ಸಲಹೆಯಿಂದ ತನ್ನ ದೇಹವನ್ನು ಕೊಂಡುಕೊಂಡುಬಿಟ್ಟಿದ್ದಾರೆ. ತಾನು ತನ್ನವನಾಗಿಲ್ಲ ಎಂದವನಿಗನ್ನಿಸಿತ್ತು. ತಲೆಯಮೇಲಿನ ಆ ಜುಟ್ಟು ಈಗಿಲ್ಲ. ಕಂಠದಲ್ಲಿದ್ದ ಆ ತುಲಸೀ ಹಾರವಿಲ್ಲ; ಬರಿಗಾಲಿಲ್ಲ; ಬರಿ ಮೈಯಿಲ್ಲ; ಧನಂಜಯಭಟ್ಟಾಚಾರ್ಯರ ಆ ಪಾಠಶಾಲೆಯಿಲ್ಲ; ನದೀ ದಡದ ಆ ಹಳೆಯ ಅತ್ತೀ ಮರವಿಲ್ಲ; ಚಂಡೀ ಮಂಟಪದ ಆ ಕತ್ತಲು ಮೂಲೆಯೂ ಇಲ್ಲ—ಇಲ್ಲ! ಯಾವುದೂ ಇಲ್ಲ!!

ಹೊಸ ಜನ್ಮವನ್ನು ಹೊತ್ತು ಹಳೆಯ ಜನ್ಮದ ಸಮಸ್ತ ವಸ್ತುಗಳನ್ನೂ ಒಮ್ಮೆ ದೂರ ಬಿಸಾಟಂತೆ ಅನ್ನಿಸಿತ್ತೋ ಅಥವಾ ಅವನ ದೇಹ ಮನಸ್ಸು ತಮ್ಮ ತಮ್ಮಲ್ಲಿಯೇ ಜಗಳವಾಡಿ ಬೇರೆಯಾಗಿಬಿಟ್ಟಿವೆ ಎಂಬಂತೆ ಭಾಸವಾಯಿತೋ. ಅಂತೂ ಸಂಜೆಯಾಗುತ್ತಲೇ ಅವನ ಮನಸ್ಸು ನದೀ ದಡದ ಆ ಹಳೆಯ ಅತ್ತೀಮರದಡಿಗೋ, ಇಲ್ಲವೇ ಹೊಲಗಳ ಆಜುಬಾಜಿನ ರೈತರಪಲ್ಲಿಯೋ ಅಲೆದಾಡುತ್ತಿದ್ದರೆ, ಬಹು ಅಮೂಲ್ಯವಾದ ವಸ್ತ್ರಾ

ಭರಣ ಭೂಷಣಾದಿಗಳಿಂದ ಅಲಂಕೃತವಾದ ಅವನದೇಹವು ಪೆಟ್ಟಿಗೆಯ ಗಾಡಿಯಲ್ಲಿ ಕುಳಿತು ವಾಯುಸೇವನೆ ಮಾಡುತ್ತಿತ್ತು. ಮನಸ್ಸು ಮಡಿ ಪಂಚೆಯುಟ್ಟು ನದಿಯಲ್ಲಿ ಮುಳುಗುತ್ತಾ ತೇಲುತ್ತಾ ಈಜುತ್ತಿದ್ದರೆ ದೇಹವು ಮನೆಯಲ್ಲಿ ಮಣೆಯಮೇಲೆ ಕುಳಿತು ನೌಕರ ಚಾಕರರಿಂದ ಎಣ್ಣೆನೀರು ಹಾಕಿಸಿಕೊಂಡು ತಿಕ್ಕಿಸಿಕೊಳ್ಳುತ್ತಿತ್ತು. ಈ ರೀತಿಯಲ್ಲಿ ಒಬ್ಬನೇ ಕಾಶೀನಾಥನು ಎರಡು ಸ್ಥಳಗಳಲ್ಲಿ ಎರಡು ಭಿನ್ನ ಭಿನ್ನ ಕೆಲಸವನ್ನು ಮಾಡುತ್ತಿದ್ದನು. ಆದರೂ ಅವನ ಯಾವ ಕೆಲಸವೂ ಪೂರ್ಣವಾಗಿಯಾಗಲಿ, ಅಥವಾ ಸರ್ವಾಂಗ ಸುಂದರವಾಗಿಯಾಗಲಿ ಆಗುತ್ತಿರಲಿಲ್ಲ

ಎಷ್ಟೋ ದಿನಗಳು ಹೀಗೆಯೇ ಕಳೆದು ಹೋದವು. ಮಾವನ ಮನೆಯಲ್ಲಿಯೇ ಒಂದಾಗುತ್ತಲೂ ಒಂದರಂತೆ ಹನ್ನೆರಡು ತಿಂಗಳುಗಳು ತಳ್ಳಿ ಹೋದವು. ಮೊದಲು ಕೆಲವು ತಿಂಗಳುಗಳು ಅಷ್ಟೇನು ಕೆಡಕೆನಿಸಲಿಲ್ಲ—ಸ್ಥಿತಿಗತಿಗಳು, ದೊಡ್ಡಸ್ತಿಕೆ ಮತ್ತು ಹೊಸತನದ ಮೋಹದಲ್ಲಿ ಅವನಿಗೆ ತನ್ನ ಅವಸ್ಥೆಯ ಗುಣಲೋಪ ದೋಷಗಳನ್ನು ಅರಿತುಕೊಳ್ಳಲು ಬಿಡುವೇ ಸಿಗಲಿಲ್ಲ. ಆದರೆ ಯಾವಾಗ ಬಿಡುವು ಸಿಕ್ಕಿತೋ ಆಗಿನಿಂದ ಅವನು ದಿನೇ ದಿನೇ ಸೊರಗ ತೊಡಗಿದ. ಇದು ಬೇರೆಯವರಿಗೆ ಗೊತ್ತಾಯಿತೋ ಇಲ್ಲವೋ ಕಮಲಾ ಮಾತ್ರ ಗ್ರಹಿಸಿಬಿಟ್ಟಳು. ಅವಳ ಕಣ್ಣುಗಳು ಪತಿಯ ಅವಸ್ಥೆಯನ್ನು ಅರಿತುಕೊಂಡವು. ಅವಳೊಂದು ದಿನ, "ನೀವು ದಿನೇ ದಿನೇ ಸೊರಗುತ್ತಿದ್ದೀರಲ್ಲ? ಎಂದು ಕೇಳಿದಳು.

"ಯಾರು ಹೇಳಿದರು?"

"ನನ್ನ ಕಣ್ಣುಗಳೇ!"

"ತಪ್ಪು ತಿಳಿವಳಿಕೆ"

ಅಲ್ಲಿಗೇ ಕಮಲಾ ಬಿಡಲಿಲ್ಲ. "ವಿಚಾರವೇನು? ನನ್ನೊಡನೆ ಹೇಳುವುದಿಲ್ಲವೋ?"

"ಏನೂ ಆಗಿಲ್ಲ, ನಾನಿನ್ನೇನು ತಾನೆ ಹೇಳಲಿ!"

"ಆಗಿದೆ!"

"ಇಲ್ಲ!"

"ಖಂಡಿತ ಆಗಿದೆ. ನನ್ನ ಮನಸ್ಸಿಗೆಲ್ಲಾ ಚೆನ್ನಾಗಿ ಮನವರಿಕೆಯಾಗಿದೆ."

ಕಾಶೀನಾಥನು ಮುಖ ತಿರುಗಿಸಿಕೊಂಡು, "ನೀನು ಬಹಳ ತೊಂದರೆ ಪಡಿಸುತ್ತೀಯೆ! ನಾನಿಲ್ಲಿಂದ ಹೋಗುತ್ತೇನೆ" ಎಂದ.

ಅವನು ಹೋಗತೊಡಗಿದ. ಕಮಲಾ ಅವನ ಕೈಹಿಡಿದೆಳೆದುಕೊಂಡು, "ಹೋಗಬೇಡಿ—ನಾನು ಇವತ್ತಿನಿಂದ ಏನನ್ನೂ ಕೇಳುವುದಿಲ್ಲ" ಎಂದು ವ್ಯಾಕುಲದಿಂದ ಹೇಳಿದಳು.

ಕಾಶೀನಾಥನು ಒಮ್ಮೆ ಕುಳಿತ. ಮತ್ತೆ ಮರು ಕ್ಷಣವೇ ಧಟ್ಟನೆದ್ದು ಹೊರಟು ಹೋದ. ಕಮಲಾ ಮತ್ತೆ ಅವನನ್ನು ಕುಳಿತುಕೊಳ್ಳ ಹೇಳಲಿಲ್ಲ. ಪತಿಯು ಈ ರೀತಿ

ಹೊರಟುಹೋದ್ದರಿಂದ ಅವಳು ದಿಂಬಿನಲ್ಲಿ ಮುಖ ಹುದುಗಿಕೊಂಡು ಅಳತೊಡಗಿದಳು.

ಕಾಶೀನಾಥನು ಹೊರಗೆ ಬಂದು ನೋಡಲು ತನ್ನ ಮೇಲೆ ಯಾರೂ ಕಣ್ಣಿಟ್ಟಿಲ್ಲ ವೆಂದು ಅವನಿಗನ್ನಿಸಿತು. ಆಗ ಅವನು ಮೆಲ್ಲಗೆ ಗೇಟು ತಟಾದು ಹೊರಗೆ ಬಂದು ರಸ್ತೆ ಯಲ್ಲಿ ನಡೆಯಲುಪಕ್ರಮಿಸಿದನು ಬಹಳ ದೂರ ಹೋದಮೇಲೆ ಹಿಂದೆಯೇ ಒಬ್ಬ, ಡವಾಲಿ ಜವಾನನು ಹಿಂಬಾಲಿಸಿ ಬರುತ್ತಿರುವುದನ್ನು ಕಂಡನು. ಕಾಶೀನಾಥನು ಕುಪಿತ ನಾಗಿ ಹಿಂತಿರುಗಿ, ''ನೀನೆಲ್ಲಿಗೆ ಹೋಗುತ್ತಿದ್ದೀಯೋ ?" ಎಂದು ಕೇಳಿದ.

ಅವನು ಪ್ರಣಾಮಮಾಡಿ—"ದೊರೆಗಳ ಜೊತೆಯಲ್ಲಿ" ಎಂದನು

"ನನ್ನ ಜೊತೆಗೇನು ಬರಬೇಕಾದ ಅವಶ್ಯಕತೆ ಇಲ್ಲ—ನೀನು ವಾಪಸ್ಸು ಹೊರಟು ಹೋಗು."

"ಸಂಜೆ ಹೊತ್ತು. ತಾವು ಒಬ್ಬಂಟಿಗರಾಗಿಯೋ ತಿರುಗಾಡುತ್ತೀರಾ ದೊರೆಗಳೇ ?"

ಮತ್ತೇನನ್ನೂ ಹೇಳದೆ ಕಾಶೀನಾಥನು ಪುನಃ ಮುಂದೆ ಹೋಗಲುಪಕ್ರಮಿಸಿದ. ಆ ಬಡಪಾಯಿ ಜವಾನನೇನು ತಾನೆ ಮಾಡಿಯಾನು ? ಅವನಿಗೇನೂ ತೋರಲಿಲ್ಲ. ಕೊಂಚ ಹೊತ್ತು ಅಲ್ಲಿಯೇ ನಿಂತಿದ್ದು ಕಡೆಗೆ ತನ್ನ ಸ್ವಂತ ಬುದ್ಧಿಯನ್ನು ಖರ್ಚುಮಾಡಿ ಹಿಂಬಾಲಿ ಸಲೇಬೇಕೆಂದು ಅವನು ನಿಶ್ಚಯಿಸಿದನು. ಕಾಶೀನಾಥನು ಪುನಃ ಇತ್ತ ಕಡೆ ಗಮನವೇ ಕೊಡಲಿಲ್ಲ. ತನ್ನ ಇಷ್ಟಾನುಸಾರ ನಡೆದು ನಡೆದು ಕಡೆಗೆ ತನ್ನ ಸೋದರಮಾವನ ಮನೆ ತಲುಪಿದನು. ಮನೆಯನ್ನು ಪ್ರವೇಶಿಸಿ ಮೌನವಾಗಿ ಮನೆಯ ಒಳಕೈಸಾಲೆಯಲ್ಲಿ ಕುಳಿ ತನು. ಬಹಳ ಹೊತ್ತು ಅವನು ಹೀಗೆಯೇ ಕುಳಿತಿದ್ದ. ಎಷ್ಟೋ ಹೊತ್ತಿನ ಮೇಲೆ ತಿರುಗಾಡಲೆಂದು ಹರಿಬಾಬುವು ಮನೆಯೊಳಗಿನಿಂದ ಹೊರಹೊರಟಾಗ ಇವನನ್ನು ನೋಡಿದ. ಆಗಲೇ ಕೊಂಚ ಕೊಂಚ ಕತ್ತಲಾಗುತ್ತಾ ಬಂದಿತ್ತು. ಅದರಿಂದ ಆ ಮುಸುಕಿನಲ್ಲಿ ಯಾರೆಂದು ಗುರುತು ಗೊತ್ತಾಗಲಿಲ್ಲ. ಅದಕ್ಕೆ ಹತ್ತಿರ ಹೋಗಿ, "ಯಾರು?" ಎಂದು ಕೇಳಿದನು.

"ನಾನು" ಎಂದು ಕಾಶಿನಾಥ ಹೇಳಿದ.

ಹರಿಬಾಬುವಿಗೆ ತುಂಬಾ ಆಶ್ಚರ್ಯವಾಯಿತು. "ಓ ಅಳಿಯದೇವರು ! ಅದೇನು ಇಲ್ಲಿ?"

ಕಾಶೀನಾಥನು ಮೌನವಾಗಿಯೇ ಇದ್ದನು. ಆಗ ಹರಿಬಾಬು ಗಟ್ಟಿಯಾಗಿ, "ಅಮ್ಮಾ, ನೋಡು, - ಜಮೀನುದಾರ ಸಾಹೇಬರ ಅಳಿಯದೇವರು ದಯಮಾಡಿಸಿದ್ದಾರೆ. ಅಯ್ಯೋ ಅವರಿಗೆ ಕುಳಿತುಕೊಳ್ಳಲು ಒಂದು ಆಸನವನ್ನು ಯಾರೂ ಕೊಟ್ಟಿಲ್ಲವೇ!" ಎಂದನು.

ಹರಿಯ ತಾಯಿಯು ಓಡಿಬಂದಳು. "ನನ್ನ ಅದೃಷ್ಟ! ಅಂತೂ ನಿನಗೆ ಕಡೆ ಗಾದರೂ ಸಂಕಟಪಡುತ್ತಿರುವ ಅತ್ತೆಯ ಜ್ಞಾಪಕ ಬಂತೇನಪ್ಪ ಮಗು."

ಕಾಶೀನಾಥನು ಈಗಲೂ ಸುಮ್ಮನಿದ್ದನು. ಅಮೇಲೆ ಅವನ ಸೋದರತ್ತೆಯು ತನ್ನ ಮಗಳು ಬಿಂದುವಾಸಿನಿಯನ್ನು ಕೂಗಿ "ಬಿಂದು, ಬೇಗ ಬಂದು ನೋಡೆ, ನಿನ್ನ ಕಾಶೀನಾಥ

ಭಾವಯ್ಯ ಬಂದಿದ್ದಾನೆ. ಕುಳಿತುಕೊಳ್ಳುವುದಕ್ಕೆ ಏನಾದರೂ ತೆಗೆದುಕೊಡು ಬಾ. ಅಷ್ಟರಲ್ಲಿ ನಾನೂ ಸಂಧ್ಯಾಪೂಜೆ ಮುಗಿಸಿ ದೇವರ ದೀಪ ಮುಡಿಸಿಬಿಡುತ್ತೇನೆ" ಎಂದಳು.

ಬಿಂದುವಾಸಿನಿಯು ಮಧುಸೂಧನ ಮುಖೋಪಾಧ್ಯಾಯನ ಕಿರಿಯ ಮಗಳು. ತುಂಬುಮನೆಯ ಸೊಸೆಯಾಗಿದ್ದುದರಿಂದ ಅವಳಿಗೆ ತವರುಮನೆಗೆ ವಿಶೇಷ ಬರಲಾಗುತ್ತಿರಲಿಲ್ಲ. ಅವಳು ಬಂದು ಇನ್ನೂ ಒಂದು ತಿಂಗಳು ಕಳೆದಿತ್ತು. ಆದರೂ ಈವರೆಗೂ ಅವಳು ತನ್ನ ಈ ಭಾವಯ್ಯನನ್ನು ನೋಡಿರಲಿಲ್ಲ. ಅವಳಿಗೆ ಭಾವಯ್ಯನನ್ನು ಕಂಡರೆ ತುಂಬಾ ಪ್ರೀತಿ. ಆದಕ್ಕೆ ಅವನ ಹೆಸರನ್ನು ಕೇಳುತ್ತಲೇ ಓಡಿಬಂದಳು. ಬಂದು ನೋಡಿದರೆ ಅಲ್ಲಿ ಯಾರೂ ಗುರುತಿದ್ದವರು ಕಾಣಿಸಲಿಲ್ಲ. ಕೇವಲ ಒಬ್ಬ ದೊಡ್ಡ ಮನುಷ್ಯರು ಕತ್ತಲು ಕೈಸಾಲೆಯಲ್ಲಿ ಕುಳಿತಿದ್ದಾರೆ. ಕೊಂಚ ಹೊತ್ತಾಗುತ್ತಲು ಆತನಾರೆಂದು ಗೊತ್ತಾಯಿತು. ಇಂತಹ ಭಾವಯ್ಯನನ್ನು ಹಿಂದೆ ಅವಳೆಂದೂ ನೋಡಿರಲಿಲ್ಲ! ದೊಡ್ಡ ಮನುಷ್ಯರ ಅಳಿಯನಾದ್ದರಿಂದ ಈಗ ಅವನೂ ದೊಡ್ಡ ಮನುಷ್ಯನಾಗಿ ಬಿಟ್ಟಿದ್ದಾನೆ. ಅವನೂ ದೊಡ್ಡ ಮನುಷ್ಯನಾಗಿ ಬಿಟ್ಟಿರುವ ರೀತಿ ನೋಡಿ ಅವಳಿಗೆ ಹಿಡಿಸಲಾರದ ನಗು ಬಂತು. ಆದರೆ ಅವಳು ಹತ್ತಿರ ಬಂದು ಆ ಮಸಕು ಕತ್ತಲಿನಲ್ಲಿ ಅವನ ಮಲಿನವಾದ ಒಣಕಲು ಮುಖವನ್ನು ನೋಡುತ್ತಲೇ ಆ ನಗು ಮಾಯವಾಗಿ ಹೋಯಿತು. ಕಾಶೀನಾಥನ ಮುಖಮಂಡಲವು ಮಲಿನವಾಗಿರುತ್ತಿದ್ದುದನ್ನು ಹಿಂದೆ ಯಾರೂ ಕಂಡಿರಲಿಲ್ಲ – ಆದರಲ್ಲೂ ಬಿಂದುವಾಸಿನಿಯು ಕಂಡಿರಲೇ ಇಲ್ಲ! ಇಡೀ ಈ ಮನೆಗೆಲ್ಲಾ ಅವಳೊಬ್ಬಳು ಮಾತ್ರ ಕಾಶೀನಾಥನನ್ನು ಕೊಂಚ ಅರಿತುಕೊಂಡವಳಾಗಿದ್ದಳು.

ಅವಳು ಹತ್ತಿರ ಬಂದು, ಬೆನ್ನಿನ ಮೇಲೆ ಕೈಯಾಡಿಸುತ್ತಾ ಅತಿಯಾದ ಸ್ನೇಹದಿಂದ, "ಯಾಕೆ ಭಾವಯ್ಯ, ಇಲ್ಲಿ ಒಂಟಿಯಾಗಿ ಕುಳಿತಿದ್ದೀಯೆ! ನಡಿ ಒಳಗೆ ಕುಳಿತುಕೋ. ಏಳು" ಎಂದಳು. ಕಾಶೀನಾಥನು ಸುಮ್ಮನೆ ಎದ್ದು ಒಳಕ್ಕೆ ಹೋಗಿ ಮಂಚದ ಮೇಲೆ ಕುಳಿತುಕೊಂಡನು.

"ನಾನಿಲ್ಲಿಗೆ ಬಂದು ಇಷ್ಟೊಂದು ದಿವಸಗಳಾದರೂ ನೀನು ಒಂದು ದಿವಸವಾದರೂ ನೋಡಲಿಕ್ಕೆ ಬರಲಿಲ್ಲವಲ್ಲ ಭಾವಯ್ಯ?"

"ಬರಲಾಗಲಿಲ್ಲವಮ್ಮ"

"ಆದೇಕೆ ಬರಲಾಗಲಿಲ್ಲ ಭಾವಯ್ಯ?"

ಕಾಶೀನಾಥನು ಕೊಂಚ ಅತ್ತ ಇತ್ತ ನೋಡಿ, "ಬರುವುದಕ್ಕೆ ಬಿಡುವುದಿಲ್ಲ" ಎಂದು ಹೇಳಿದನು.

"ಬರುವುದಕ್ಕೆ ಬಿಡುವುದಿಲ್ಲವೆ? ಆದೇಕೆ?"

ಕಾಶೀನಾಥನು ಅನ್ಯಮನಸ್ಕನಾಗಿ, "ಏಕೆ? ಹೀಗೆ.......ಹೀಗೆ......" ಎಂದನು.

ಬಿಂದುವಾಸಿನಿಯು ದುಃಖಿತಳಾಗಿ, "ನೀನೆಲ್ಲಿಗೆ ಹೋಗಬೇಕೆಂದರೆ ಅಲ್ಲಿಗೆ ಹೋಗುವುದಕೆ ಬಿಡುವುದಿಲ್ಲವೆ?" ಎಂದು ಕೇಳಿದಳು,

"ಇಲ್ಲ, ಹೋಗಲು ಬಿಡುವುದಿಲ್ಲ. ನಾನೆಲ್ಲಿಯಾದರೂ ಹೋಗಿ ಬರುವುದರಿಂದ ನನ್ನ ಮಾವನವರಿಗೆ ಅಪಮಾನವಾಗುತ್ತೆ."

ಈ ಮಾತುಗಳಿಂದ ಕಾಶೀನಾಥನಿಗೆ ಕಷ್ಟವಾಗುತ್ತಿದೆ ಎಂದು ಬಿಂದುವಾಸಿನಿಯು ತಿಳಿದುಕೊಂಡು ಬಿಟ್ಟಳು. ಆದರಿಂದಲೇ ಮಾತಿನ ವಿಸ್ತಾರ, ಧಾಟಿಗಳನ್ನೇ ಬದಲಾಯಿಸುತ್ತಾ, "ನಿನ್ನ ರಾಣೀ ಸಾಹೇಬರನ್ನು ತೋರಿಸಲೇ ಇಲ್ಲವಲ್ಲ, ಭಾವಯ್ಯ!" ಎಂದನು.

ಕಾಶೀನಾಥನು ಮೌನವಾಗಿದ್ದನು.

ಬಿಂದುವಾಸಿನಿಯು ಪುನಃ, "ಹೇಗಿದ್ದಾಳೆ ಭಾವಯ್ಯ ನಿನ್ನ ರಾಣಿ?" ಎಂದು ಕೇಳಿದಳು.

"ಚೆನ್ನಾಗಿದ್ದಾಳೆ!"

"ಹಾಗಾದರೆ ನಾನೆಂದಾದರೂ ನೋಡಿಕೊಂಡು ಬರಬಹುದೇನು?"

ಕಾಶೀನಾಥನು ಮುಖವೆತ್ತಿ ಬಿಂದುವಿನ ಮುಖದ ಕಡೆ ಒಮ್ಮೆ ನೋಡಿ ನಕ್ಕು, "ನೋಡಿ ಕೊಂಡು ಬರಬಹುದು" ಎಂದನು.

ಇಷ್ಟರಲ್ಲಿ ಹೊರಗಡೆ ಗಾಡಿಶಬ್ದ ಕೇಳಿಸಿತು. "ನಿನ್ನ ಗಾಡಿ ಬಂತೂ ಅಂತ ಕಾಣುತ್ತೆ" ಎಂದು ಬಿಂದು ಕೇಳಿದಳು.

"ಹೌದೂಂತ ಕಾಣುತ್ತೆ." ಅಲ್ಲಿಂದ ಹೋಗುವ ಮೊದಲು ಕಾಶೀನಾಥನು, "ಯಾವಾಗ ಬರುತ್ತೀಯಮ್ಮ?" ಎಂದು ಕೇಳಿದನು.

"ಎಲ್ಲಿಗೆ?"

"ನಿನ್ನ ಅಕ್ಕಯ್ಯನನ್ನು ನೋಡಲು."

ಬಿಂದು ಮುಗುಳು ನಗುತ್ತಾ, "ನಿನಗೆ ಯಾವತ್ತು ಬಿಡುವಾಗುತ್ತೋ ಅವತ್ತು ಬಂದು ಕರೆದುಕೊಂಡು ಹೋಗು" ಎಂದಳು.

"ನಾಳೆ ಬರಲೇ?"

"ಖಂಡಿತ ಬರಬೇಕು"

ಮಾರನೆಯ ದಿವಸ ಗಾಡಿ ಸಮೇತ ಸ್ವಯಂ ಕಾಶೀನಾಥನೇ ಬಂದ. ಬಿಂದುವು ಹೊರಡುವ ಹೊತ್ತಿಗೆ ಸರಿಯಾಗಿ ಎಲ್ಲಿಂದಲೋ ಹರಿಬಾಬು ಬಂದ. ಬರುವಾಗಲೇ ಬಾಗಿಲಲ್ಲಿ ಗಾಡಿ ನಿಂತದ್ದದನ್ನು ನೋಡಿ, ಕಾಶೀನಾಥನು ಬಂದಿರಬಹುದೆಂದು ಅನುಮಾನಿಸಿದ್ದ. ಒಳಗೆ ಬರುತ್ತಿದ್ದ ಹಾಗೆಯೇ, "ಬಿಂದು ಎಲ್ಲಿಗೆ ಹೋಗುತ್ತಾಳೆ, ಅಮ್ಮಾ?" ಎಂದು ತನ್ನ ತಾಯಿಯನ್ನು ಹರಿಬಾಬು ಕೇಳಿದ.

"ಸೊಸೆಯನ್ನು ನೋಡಿಕೊಂಡು ಬರಲು ಕೊಂಚ ಹೋಗಿ ಬರುತ್ತಾಳೆ" ಎಂದು ತಾಯಿ ಹೇಳಿದಳು.

"ಯಾವ ಸೊಸೆಯನ್ನು? - ಜಮೀನುದಾರರ ಮಗಳನ್ನೇ?"

ತಾಯಿಯು ಯಾವ ಉತ್ತರವನ್ನೂ ಕೊಡಲಿಲ್ಲ.

ಹರಿಬಾಬುವು ಅತ್ಯಂತ ಗಂಭೀರ ಮುಖಮುದ್ರೆಯಿಂದ, "ಅಲ್ಲಿಗೆ ಬಿಂದು

ಹೋದದ್ದೇ ಆದರೆ ನಾನು ಈ ಜನ್ಮ ವಿರುವವರೆಗೂ ಅವಳ ಮುಖನೋಡುವುದಿಲ್ಲ” ಎಂದ.

ತಾಯಿಯು ಆಶ್ಚರ್ಯಚಕಿತಳಾಗಿ. “ಏಕೆ? ಅವಳ ಭಾವನ ಹೆಂಡತಿಯನ್ನು ನೋಡುವುದಕ್ಕೆ ಹೋಗುತ್ತಾಳೆ. ಇದರಲ್ಲೇನು ತಪ್ಪಾಗಿ ಹೋಯಿತು?”

“ತಪ್ಪುನೆಪ್ಪು ತಿಳಿಯಹೇಳುವುದಕ್ಕೆ ನನಗೀಗ ಬಿಡುವಿಲ್ಲ. ಬಿಂದು ನನ್ನ ಮಾತು ಕೇಳದಿದ್ದರೆ ಮತ್ತೆ ಅವಳು ಈ ಮನೆಯಲ್ಲಿ ಕಾಲಿಡಕೂಡದು ಅಷ್ಟೆ.”

ಹರಿಬಾಬುವು ಎಂತಹ ಸ್ವಭಾವದವನೆಂದು ಬಿಂದುವಿಗೆ ಗೊತ್ತಿಲ್ಲದೇ ಇರಲಿಲ್ಲ. ಆದರಿಂದ ತೆಪ್ಪಗೆ ಬಟ್ಟೆಬರೆ ಎಲ್ಲಾ ತೆಗೆದಿಟ್ಟಳು. ಕಾಶೀನಾಥನು ನಿಂತುಕೊಂಡೇ ಇದೆಲ್ಲವನ್ನು ನೋಡುತ್ತಾ ಇದ್ದು ಆಮೇಲೆ ಚಿಕ್ಕಮೋರೆ ಮಾಡಿಕೊಂಡು ಗಾಡಿಯಲ್ಲಿ ಹೋಗಿ ಕುಳಿತುಕೊಂಡ.

ಸಂಜೆ ಕಮಲಾ ಬಂದು, “ಏಕೆ ನಿಮ್ಮ ನಾದಿನಿ ಬರಲಿಲ್ಲವೇ?” ಎಂದು ಕೇಳಿದಳು.

ಕಾಶೀನಾಥನು ದೀನಸ್ವರದಲ್ಲಿ “ಅವರುಗಳು ಕಳುಹಿಸಲಿಲ್ಲ” ಎಂದನು.

“ಏಕೆ?”

“ಗೊತ್ತಿಲ್ಲ. ಇಲ್ಲಿಗೆ ಕಳುಹಿಸುವುದು ನಾಚಿಕೆಗೇಡು ಅಂತ ಅವರು ತಿಳಿದಿದ್ದಾರೇನೋ!”

ಈ ಮಾತು ಹೋಗಿ ಕಮಲೆಯ ಹೃದಯದಲ್ಲಿ ನೆಟ್ಟುಕೊಂಡಿತು.

—೪—

ಕಮಲಾ ಜಮೀನುದಾರನ ಒಬ್ಬಳೇ ಒಬ್ಬ ಮಗಳು. ಜಮೀನುದಾರನು ಮೊದಲೆರಡು ಮದುವೆಗಳನ್ನು ಮಾಡಿಕೊಂಡಿದ್ದನು. ಆದರೆ ಆವರುಗಳ ಹೊಟ್ಟೆಯಲ್ಲಿ ಮಕ್ಕಳಾಗಲಿಲ್ಲ. ಆ ಇಬ್ಬರೂ ಸತ್ತಮೇಲೆ, ಅದೂ ಮಾನಸಿಕ ದುಃಖದಿಂದ ತುಂಬಿದ ವೃದ್ಧಾವಸ್ಥೆಯಲ್ಲಿ ಮೂರನೇ ವಿವಾಹವನ್ನು ಮಾಡಿಕೊಂಡದ್ದರ ಫಲರೂಪವೇ ಈ ಏಕಮಾತ್ರ ಪುತ್ರೀರತ್ನ ಕಮಲಾ. ಮಕ್ಕಳಿಲ್ಲದೆ ಇಲ್ಲದೆ ಮಕ್ಕಳಾಗಿಬಿಟ್ಟರೆ ಗಂಡು ಹೆಣ್ಣೆಂಬ ಭೇದವು ಮನಸ್ಸಿಗೆ ತಾಕುವುದಿಲ್ಲ. ಆದರಿಂದಲೇ ಮನೆಯಲ್ಲಿ ಕಮಲಾ, ಯಜಮಾನನ ಯಜಮಾನನೂ, ಯಜಮಾನಿಯ ಯಜಮಾನಿಯೂ ಆಗಿಬಿಟ್ಟಿದ್ದಳು. ಆವಳ ಮಾತನ್ನು ಎತ್ತಿಹಾಕಿ ಅಲಕ್ಷ್ಯಮಾಡುವುದಕ್ಕಾಗಲಿ, ಅವಳ ಇಷ್ಟಕ್ಕೆ ವಿರುದ್ಧವಾಗಿ ಕೆಲಸಮಾಡುವುದಕ್ಕಾಗಲಿ ಆ ಮನೆಯಲ್ಲಿ ಯಾರಿಗೂ ಶಕ್ತಿಯಾಗಲಿ, ಧೈರ್ಯವಾಗಲಿ ಇರಲಿಲ್ಲ. ಕಮಲಾ, ಧನವತಿ, ವಿದ್ಯಾವತಿ, ರೂಪವತಿ, ಗುಣವತಿ. ಇಷ್ಟೇ ಅಲ್ಲದೆ ಅವಳಿಗೆ ಈ ಮನೆಯಲ್ಲಿ ಎಲ್ಲ ವಿಷಯಗಳಲ್ಲಿಯೂ ಏಕಾಧಿಪತ್ಯವಿದೆ. ಆದರೂಕೂಡ ಅವಳಿಗೆ ಒಬ್ಬನನ್ನು ಮಾತ್ರ ಯಾವ ರೀತಿಯಿಂದಲೂ ತನ್ನ ಅಧಿಕಾರದಲ್ಲಿ ಹಿಡಿದು ನಿಲ್ಲಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆದಿನ್ನಾರೂ ಅಲ್ಲ ಅವಳ ಪತಿಯಾದ ಕಾಶೀನಾಥನೇ!

ಕಮಲಾ ಅನೇಕ ಉಪಾಯಗಳನ್ನು ಮಾಡಿ ನೋಡಿದಳು; ಕೋಪಿಸಿಕೊಂಡು

ಪ್ರಯತ್ನಿಸಿದಳು ; ದುಃಖಪ್ರದರ್ಶನಮಾಡಿ ನೋಡಿದಳು ; ಬಿಗುಮಾನ, ದೊಡ್ಡಸ್ತಿಕೆ, ಅಲಕ್ಷ್ಯಗಳನ್ನು ಪ್ರಯೋಗಿಸಿ ನೋಡಿದಳು ; ಸಂಪೂರ್ಣ ಪ್ರೇಮದಿಂದ ಪತಿಸೇವೆಯನ್ನು ಮಾಡಿ ನೋಡಿದಳು. ಆದರೂ ಸಹ ಅವಳಿಂದ ಪತಿಯಮೇಲೆ ಯಾವ ಬಗೆಯ ಹತೋಟಿ ಇಟ್ಟುಕೊಳ್ಳಲಾಗಲಿಲ್ಲ. ಅಷ್ಟೇ ಅಲ್ಲ ಅವನ ಮನಸ್ಸಿನ ಮೇಲೆ ಯಾವ ಬಗೆಯ ಪರಿಣಾಮವನ್ನೂ ಮಾಡಲಿಕ್ಕಾಗಲಿಲ್ಲ. ಮನಸ್ಸಿನ ಮೇಲೆ ಪರಿಣಾಮಮಾಡಿ, ಹತೋಟಿಯಲ್ಲಿಟ್ಟುಕೊಂಡು ಅಧಿಕಾರ ನಡೆಸುವುದು ಹಾಗಿರಲಿ ಕೇವಲ ಅವನ ಮನಸ್ಸಿನ ಹತ್ತಿರಕ್ಕೆ ಸಹ ಅವಳಿಂದ ಹೋಗಲಿಕ್ಕಾಗಲಿಲ್ಲ. ಕೇವಲ ಒಬ್ಬ ಬಡವನು ತನಗೆ ಎಟುಕಲಾರದ ಮನಸ್ಸುಳ್ಳವನಾಗಿ, ತನ್ನ ಪತಿಯಾಗಿ ಬಂದುಬಿಟ್ಟನಲ್ಲಾ ? ಹೇಗೆ ಸಾಧ್ಯವಾಯಿತು? ಎಂದು ಅವಳಿಂದ ನಿರ್ಣಯಿಸಲು ಸಾಧ್ಯವಾಗಲಿಲ್ಲ. "ಭಗವಂತ, ಅವರ ಮನಸ್ಸನ್ನು ನನ್ನ ಕೈಗೆ ಕೊಟ್ಟುಬಿಡು" ಎಂದು ದಿನವೂ ಎರಡು ಹೊತ್ತು ದೇವರಲ್ಲಿ ಪ್ರಾರ್ಥಿಸುತ್ತಿದ್ದಳು. ಪತಿಗೆ ಮನಸ್ಸೆಂಬುದೇ ಇಲ್ಲವೇನೋ, ಆದರಿಂದಲೇ ತಾನು ಅದನ್ನು ಪಡೆಯಲು ಸಾಧ್ಯವಾಗಿಲ್ಲ ಎಂದು ಆಗಾಗ ಅವಳಿಗೆ ಅನ್ನಿಸುತ್ತಿತ್ತು.

ಅವಳ ಪತಿಯು ಕಮಲೆಗೆ ಕಠಿಣವಾದ ರಹಸ್ಯಮೂರ್ತಿಯಾಗಿ ಕಾಣಿಸತೊಡಗಿದನು. ದಿನಗಳು ಕಳೆದಂತೆಲ್ಲಾ ಆ ರಹಸ್ಯ ಬೇಧಿಸುವ ಮಾರ್ಗ ಗೊತ್ತಾಗುವುದೊತ್ತಟ್ಟಿಗಿರಲಿ. ಅದು ದಿನೇ ದಿನೇ ಇನ್ನೂ ಕಠಿಣವಾಗತೊಡಗಿತು. ಪತಿಯ ಅಖಂಡ ಪ್ರೇಮವು ತನಗೆ ದೊರೆತಿರುವಷ್ಟು ಬೇರಾವ ಸ್ತ್ರೀಗೂ ದೊರೆತಿರಲಾರದು ಎಂದು ಅವಳಿಗೆ ಒಂದೊಂದು ಸಲ ಅನ್ನಿಸುವುದು. ಮತ್ತೊಮ್ಮೆ ಇಂತಹ ಭಯಂಕರ ಉಪೇಕ್ಷೆಯನ್ನು ಅನುಭವಿಸುವುದು ತನಗಲ್ಲದೆ ಬೇರಾವ ಸ್ತ್ರೀಯ ಭಾಗ್ಯಚಕ್ರದಲ್ಲಿಯೂ ಗಂಟು ಬಿದ್ದಿರಲಾರದೆಂದು ಯೋಚಿಸುವಳು. ಆದರೂ ಕಮಲೆಯ ದಿನಗಳು ಮಾತ್ರ ಕಳೆಯುತ್ತಿದ್ದವು. ಕೇವಲ ಕಾಶೀನಾಥನೊಬ್ಬನಿಗೆ ಮಾತ್ರ ದಿನಗಳು ಕಳೆಯುತ್ತಿರಲಿಲ್ಲ. ಅವನಿಗೆ ತನ್ನ ಹಳೆಯ ಕಡತದಲ್ಲಿ ಮನಸ್ಸು ನೆಡುತ್ತಿರಲಿಲ್ಲ ; ಸುಮ್ಮನೆ ಕುಳಿತುಕೊಳ್ಳುವುದರಲ್ಲಿಯೂ ಆನಂದ ದೊರೆಯುತ್ತಿರಲಿಲ್ಲ ; ಮಾತುಕತೆ, ಹಾಸ್ಯ ಕುಚೋದ್ಯಗಳಲ್ಲಿಯಾದರೂ ಸಂತೋಷವಾಗುತ್ತೆಂದರೆ ಅದರಲ್ಲೂ ಇಲ್ಲ. ಅವನ ಒಳ್ಳೆ ಬಲಿಷ್ಠವಾದ ಪುಷ್ಟದೇಹವು ಕೃಶವಾಗುತ್ತಾ ಬಂದಿತು. ಅವನ ಕಳೆಗೆಂಪು ಬಣ್ಣವು ಕಪ್ಪಿಟ್ಟಿತು. ದಿನೇ ದಿನೇ ಪತಿಯ ಸ್ಥಿತಿಯು ಹಿಗಾಗುತ್ತಿರುವುದನ್ನು ನೋಡಿ ಕಮಲಾ ತಲೆಯಮೇಲೆ ಕೈಹೊತ್ತು ಕೂತಳು ಈ ವಿಚಾರವಾಗಿ ಏನೊಂದನ್ನೂ ಕೇಳುವುದಿಲ್ಲವೆಂದು ಅವಳು ಮುಂಚೆಯೇ ಪ್ರತಿಜ್ಞೆಮಾಡಿದ್ದಳು. ಆದರೆ ಆ ಪ್ರತಿಜ್ಞಾಪಾಲನೆ ಮಾಡಲು ಅವಳಿಂದ ಸಾಧ್ಯವಾಗಲಿಲ್ಲ ಒಂದು ದಿನ ಪತಿಯು ಮನೆಗೆ ಬಂದೊಡನೆಯೇ ಅವನ ಕಾಲುಗಳ ಮೇಲೆ ತಲೆಯಿಟ್ಟು ಅಳತೊಡಗಿದಳು. ಕಾಶೀನಾಥನು ಗಾಬರಿಗೊಂಡು ಅವಳನ್ನು ಮೇಲಕ್ಕೆತ್ತುವ ಪ್ರಯತ್ನ ಮಾಡಿದನು. ಆದರೆ ಅವನಿಂದ ಎತ್ತಲಾಗಲಿಲ್ಲ.

"ಏನಾಯಿತು ? ಏತಕ್ಕೆ ಅಳುತ್ತಿದ್ದೀಯೆ ?"

ಕಮಲಾ ಯಾವ ಉತ್ತರವನ್ನೂ ಕೊಡಲಿಲ್ಲ. ಬಹಳಹೊತ್ತು ಅಳುತ್ತಲೇ ಇದ್ದಳು. ಆಮೇಲೆ ತಲೆಯನ್ನು ಅವನ ಕಾಲುಗಳ ಮೇಲೆ ಇನ್ನೂ ಭದ್ರವಾಗಿಟ್ಟು, "ನಿಜವಾಗಿ ನೀವು ನನ್ನನ್ನು ಒಂದೇ ಸಲ ಕೊಂದುಬಿಡಿ. ಹೀಗೆ ಕೊಂಚಕೊಂಚವಾಗಿ ಸುಡಬೇಡಿ" ಎಂದಳು.

ಕಾಶೀನಾಥನು ಅತ್ಯಂತ ವಿಸ್ಮಿತನಾದನು. "ವಿಚಾರವೇನು ? ಹೇಳಿಯಾದರೂ ಹೇಳು? ನಾನೇನನ್ನು ಮಾಡಿದ್ದೇನೆ ?"

"ಅದು ನಿಮಗೆ ಗೊತ್ತಿಲ್ಲವೇನು ?"

"ನನಗೊಂದೂ ಗೊತ್ತಿಲ್ಲ !"

"ನಿಮ್ಮ ಮನಸ್ಸಿಗೆ ಬಂದಂತೆಮಾಡಿ. ಆದರೆ ನನಗೂ ನಿಮ್ಮ ಹೃದಯದಲ್ಲಿ ಕೊಂಚ ಜಾಗವನ್ನು ಕೊಡಿ. ನನಗಿನ್ನೇನೂ ಬೇಕಿಲ್ಲ."

ಈ ಸಲ ಕಾಶೀನಾಥನು ಬಲವಂತವಾಗಿ ಮೇಲಕ್ಕೆತ್ತಿ ಹತ್ತಿರ ಕೂಡಿಸಿಕೊಂಡು, ಬಹಳ ಪ್ರೇಮದಿಂದ, "ಏನಾಗಿದೆಯೆಂಬುದನ್ನು ನನಗ ಸ್ಪಷ್ಟವಾಗಿ ಹೇಳು" ಎಂದು ಕೇಳಿದನು.

"ನೀವು ದಿನೇ ದಿನೇ ಹೀಗೇಕೆ ಆಗುತ್ತಿದ್ದೀರಿ ?"

"ಏನು ನಾನು ಬಹಳ ಬಡವಾಗಿದ್ದೀನೇನು ?"

ಕಮಲಾ ನೇಗಿನಿಂದ ಮುಖ ಮುಚ್ಚಿಕೊಂಡು ಅಳುತ್ತಿದ್ದಳು. ಅದೇ ಅವಸ್ಥೆಯಲ್ಲಿಯೇ ತಲೆಯಾಡಿಸಿ, "ಹೌದು ಬಡವಾಗಿದ್ದೀರಿ." ಎಂದಳು.

"ಅದು ನನಗೂ ಗೊತ್ತಿದೆ. ಆದರೆ ನಾನೇನು ಮಾಡಲಿ ನೀನೇ ಹೇಳು?"

ಕಮಲಾ ತಲೆಯೆತ್ತಿದಳು. "ಔಷಧಿ ತೆಗೆದುಕೊಳ್ಳಿ"

ಕಾಶೀನಾಥನು ನಗುತ್ತಾ, "ಔಷಧಿಯಿಂದ ನೆಮ್ಮದಿಯಾಗುವುದಿಲ್ಲ." ಎಂದನು.

"ಹಾಗಾದರೆ ಏತರಿಂದ ನೆಮ್ಮದಿಯಾಗುತ್ತೆ?"

"ಅದು ನನಗೆ ಗೊತ್ತಿಲ್ಲ."

"ಔಷಧಿಯಿಂದ ನೆಮ್ಮದಿಯಾಗುವುದಿಲ್ಲ. ಇನ್ನೇತರಿಂದ ಆಗುವುದೆಂಬುದನ್ನು ಹೇಳುವುದಿಲ್ಲ. ಹಾಗಾದರೆ ನನ್ನ ಅದೃಷ್ಟವನ್ನು ಪೂರ್ತಿಯಾಗಿ ಸುಟ್ಟು ಬೂದಿಮಾಡಿಬಿಡುತ್ತೀರೇನು?'

ಕಾಶೀನಾಥನು ಸಂಸ್ಕೃತ ಪಾಠಶಾಲೆಯಲ್ಲಿ ಓದಿದ ಸರ್ವಸಾಧಾರಣ ಮನುಷ್ಯ. ಪ್ರೀತಿ ಪ್ರೇಮಗಳ ರೀತಿನೀತಿಯೇನೆಂಬುದನ್ನು ಅವನು ಅರಿಯದವನು ಪ್ರೇಮ ಸಂಭಾಷಣೆಯನ್ನು ಮಾಡುವುದೂ ಅವನಿಗೆ ಬರುತ್ತಿರಲಿಲ್ಲ. ಆದರೂ ಸಹ ಈಗ ಸ್ವಾಭಾವಿಕಪ್ರೇಮ ಉಕ್ಕಿದ ಅವನು, ಕಮಲೆಯ ಕೈಯನ್ನು ಹಿಡಿದು ಅವಳ ಕಣ್ಣೀರೊರೆಸುತ್ತಾ, "ಇಲ್ಲಿ ನನಗೆ ಸುಖವಿಲ್ಲ—ಆದರಿಂದ ಹೀಗಾಗುತ್ತಿರಬಹುದು" ಎಂದನು.

"ಹಾಗಾದರೆ ಇಲ್ಲೇಕೆ ಇದ್ದೀರಿ ?"

"ಇಲ್ಲದಿದ್ದರೆ ಬೇರೆಲ್ಲಿಗೆ ಹೋಗಲಿ ?"

ಇಲ್ಲಲ್ಲದೆ ಬೇರೆಲ್ಲಿಯೂ ನಿಮಗೆ ಇರುವುದಕ್ಕೆ ಸ್ಥಳವಿಲ್ಲವೇ? ನಿಮಗೆಲ್ಲಿ ಸುಖ ಸಿಗುತ್ತದೆಯೋ ಅಲ್ಲಿಯೇ ಹೋಗಿ ಇರಿ.''

"ಹಾಗಾಗುವುದಿಲ್ಲ.''

"ಏಕಾಗುವುದಿಲ್ಲ?"

"ನಾನಿಲ್ಲಿಲ್ಲದಿದ್ದರೆ ಮಾವನವರಿಗೆ ಸರಿಯೆನಿಸುತ್ತದೆಯೇ?''

"ಹಾಗಾದರೆ ಹೀಗೆ ನೀವು ದಿನೇ ದಿನೇ ಒಣಗಿ ಕಡ್ಡಿಯಾಗುವುದು ಮಾತ್ರ ಅವರಿಗೆ ಸರಿಯೆನಿಸುತ್ತದೆಯೇನು?"

"ಸರಿಯೆನಿಸುವುದಿಲ್ಲ. ಆದರೆ ಅದಕ್ಕಿರುವ ಉಪಾಯವಾದರೂ ಏನು? ನಿನ್ನ ತಂದೆಯವರು ಬಡವನನ್ನು ನೋಡಿ ........"

ಕಮಲಾ ಅವನ ಬಾಯಿಮೇಲೆ ಕೈಯಿಟ್ಟು ಮುಂದೆ ಹೇಳದಂತೆ ತಡೆದಳು. "ರಾಮ ರಾಮ. ಇಂತಹ ಮಾತನ್ನೆಂದೂ ಆಡಬೇಡಿ. ನನ್ನ ಹತ್ತಿರ ಎಲ್ಲ ವಿಚಾರವನ್ನೂ ಬಿಚ್ಚಿ ಹೇಳಿ. ನಾನು ಏನಾದರೊಂದು ಉಪಾಯವನ್ನು ಹುಡುಕುತ್ತೇನೆ'' ಎಂದಳು.

ಕಾಶೀನಾಥನು ಯೋಚಿಸಿ, "ಎಲ್ಲವನ್ನೂ ನಿನ್ನಲ್ಲಿ ಬಿಚ್ಚಿಹೇಳಲು ಸಾಧ್ಯವಿಲ್ಲ" ಎಂದು ಕೊಂಚ ಹೊತ್ತು ಮೌನವಾಗಿದ್ದು, "ಇದನ್ನೆಲ್ಲ, ನೋಡಿ, ಕೇಳಿ ವಿಚಾರಮಾಡಿದರೆ ನನ್ನ ನಿನ್ನ ವಿವಾಹವಾಗದಿದ್ದಿದ್ದರೇ ಚೆನ್ನಾಗಿರುತ್ತಿತ್ತು ಅನ್ನಿಸುತ್ತದೆ" ಎಂದನು.

"ಏಕೆ?"

"ನೀನೇ ಹೇಳು. ನನ್ನನ್ನು ಮದುವೆಯಾದ ಮೇಲೆ ಒಂದು ದಿನವಾದರೂ ನೀನು ಸುಖವನ್ನು ಪಡೆದಿದ್ದೀಯಾ? ನನಗೆ ಪ್ರೀತಿಯ ರೀತಿಯೇನೆಂಬುದು ಗೊತ್ತಿಲ್ಲ. ಆದರ ಪ್ರೇಮಗಳೇನೆಂಬುದೂ ತಿಳಿಯದು. ಒಟ್ಟಿನಲ್ಲಿ ಹೇಳುವುದಾದರೆ, ವಾಸ್ತವವಾಗಿಯೂ ನನಗೇನೂ ಗೊತ್ತಿಲ್ಲ. ಈ ವಯಸ್ಸಿನಲ್ಲಿ ನಿನ್ನ ಮನಸ್ಸಿನಲ್ಲಿ ಎಷ್ಟೊಂದು ಬಯಕೆಗಳಿವೆಯೋ, ಎಷ್ಟೊಂದು ಆಶೆಗಳಿವೆಯೋ? ನೀನೇ ಹೇಳು ಅವುಗಳಲ್ಲಿ ಒಂದಾದರೂ ನನ್ನಿಂದ ನಿನಗೆ ಪೂರ್ಣವಾಯಿತೆ? ನಾನು ನಿನ್ನ ಪತಿಯಲ್ಲ ಕೇವಲ ಪತಿಯ ಛಾಯೆಯೆಂದು ತಿಳಿ."

ಕಮಲಾ ಕಣ್ಣುಗಳಿಂದ ನೀರು ಹರಿಯತೊಡಗಿತು. ಅವಳಿಂದ ಎಲ್ಲ ಮಾತುಗಳನ್ನೂ ಸರಿಯಾಗಿ ಅರ್ಥಮಾಡಿಕೊಳ್ಳಲಾಗಲಿಲ್ಲ. ಬಲವಂತದಿಂದ ವಾಯುಹೀನ ಕೊಠಡಿಯಲ್ಲಿ ಬಂಧಿಸಲ್ಪಟ್ಟು ಹೊರಕ್ಕೆ ಬರಲು ಹಾತೊರೆಯುವಂತೆ, ಒಂದು ವಿಚಾರ ಅವಳ ಹೃದಯಾಂತರಾಳದಿಂದ ಇದುವರೆಗೂ ಹೊರಹೊಮ್ಮಲು ಒದ್ದಾಡುತ್ತಿತ್ತು. ಅತಿಯಾದ ಬಲಪ್ರಯತ್ನದಿಂದ ಅದು ಈ ಸಲ ಹೊರಬಿತ್ತು. "ನೀವು ನನ್ನನ್ನು ತಿಳಿಯಕೊಳ್ಳಲಾರಿರಾ?" ಎಂದು ಕಮಲಾ ಕಂಪಿತ ಸ್ವರದಲ್ಲಿ ಕೇಳಿದಳು.

"ಈ ಮಾತನ್ನು ಇನ್ನೊಮ್ಮೆ ಹೇಳುತ್ತೇನೆ."

"ಹೇಳಬೇಡಿ--ನನ್ನನ್ನು ಮದುವೆಯಾಗಿ ನೀವು ಸುಖಿಯಾಗಲಿಲ್ಲವೇ?"

"ಏನು ಗೊತ್ತು—ಇಲ್ಲ ಅಂತ ಕಾಣುತ್ತೆ."

"ಮತ್ಯಾರನ್ನು ಮದುವೆಯಾದರೆ ಸುಖಿಯಾಗುತ್ತೀರಿ ?"

"ಅದನ್ನೂ ನಾನು ಸರಿಯಾಗಿ ಹೇಳಬಲ್ಲವನಾಗಿಲ್ಲ."

ಇವನ್ನು ಕೇಳಿ ಕಮಲೆಯ ಮೈಯೆಲ್ಲವೂ ಉರಿಯತೊಡಗಿತು. ಅಷ್ಟರಲ್ಲಿ ಪರಿಚಾರಿಕೆಯು ಹೊರಗಿನಿಂದ, "ಅವ್ವಾ, ದೊಡ್ಡವ್ವಾವರಿಗೆ ತುಂಬ ಜ್ವರ ಬಂದುಬಿಟ್ಟಿದೆ. ನಿಮ್ಮನ್ನ ಕರೀತಾ ಇದ್ದಾರೆ" ಎಂದು ಕೂಗಿದಳು.

—೫—

ಕಮಲಾ ಕಣ್ಣೊರಸಿಕೊಳ್ಳುತ್ತಾ ಹೊರಕ್ಕೆ ಹೊರಟುಹೋದಳು.

ಕಮಲೆಯ ತಾಯಿಗೆ ಬಂದ ಜ್ವರ ಗುಣವಾಗಲೇ ಇಲ್ಲ. ಹದಿನೈದು ದಿನಗಳು ಕಷ್ಟ ಅನುಭವಿಸಿ ಆಕೆಯು ಕಡೆಯಲ್ಲಿ ಎಲ್ಲರನ್ನೂ ದುಃಖದಲ್ಲಿ ಮುಳುಗಿಸಿ ತಾನು ಈ ಲೋಕದಿಂದ ಹೊರಟುಹೋದಳು. ಪತ್ನೀಶೋಕದಿಂದ ಪ್ರಿಯನಾಥ ಬಾಬುವಿಗೆ ಬಲವಾದ ಪೆಟ್ಟು ಬಿತ್ತು. ಆ ಮುದಿತನದಲ್ಲಿ ತಾನಿನ್ನು ಹೆಚ್ಚು ದಿನಗಳು ಜೀವಿಸುವುದಿಲ್ಲವೆಂದು ಅವನು ತಿಳಿದುಕೊಂಡನು. ಸರಿ ಎಲ್ಲ ಕೆಲಸ ಕಾರ್ಯಗಳ ಭಾರವೂ ಕಮಲೆಯ ಮೇಲೆ ಬಿತ್ತು. ಪ್ರಪಂಚದಲ್ಲಿ ಮನುಷ್ಯನಿಗೆ ತನ್ನ ಸುಖ ಚಿಂತನೆಯಿಲ್ಲದೆ ಇನ್ನೂ ಅನೇಕ ಕೆಲಸ ಕಾರ್ಯಗಳನ್ನು ಮಾಡಬೇಕಾಗಿ ಬರುತ್ತದೆ. ಕಮಲೆಯ ವೃದ್ಧ ತಂದೆಯು ದಿನೇದಿನೇ ದುರ್ಬಲನಾಗುತ್ತಿದ್ದನು. ಆದರಿಂದಲೇ ಕಮಲಾ ಯಾವಾಗಲೂ ತಂದೆಯ ಬಳಿಯೇ ಇರತೊಡಗಿದಳು. ಆದರೆ ಕಾಶೀನಾಥ ? 'ರಾಯನಿಗೆ ರಾಜ್ಯವಾದರೂ ರಾಗಿ ಬೀಸುವ ಚಪಲ ತಪ್ಪದು' ಎಂಬುದು ಅವನಿಗೆ ಗೊತ್ತಿತ್ತು.

ಅವನಿಗೆ ಅವಕಾಶ ದೊರೆಯಲು, ತನ್ನ ಪುಸ್ತಕಗಳ ಕಡತವನ್ನು ಬಿಚ್ಚಿ, ಬಾಗಿಲನ್ನು ಮುಚ್ಚಿಕೊಂಡು ಪುನಃ ಅಧ್ಯಯನಕ್ಕಾಗಿ ಕುಳಿತುಕೊಳ್ಳಲು ಪ್ರಾರಂಭಿಸಿದ. ಪುಸ್ತಕಗಳಿಂದ ಮನಸ್ಸು ಬೇಸರಗೊಂಡಾಗ ಹೊರಗೆ ಹೋಗಿ ವಾಯುಸೇವನೆಮಾಡಿ ಬರುತ್ತಿದ್ದ. ಕೆಲಕೆಲವು ವೇಳೆ ಹೊರ ಹೊರಟರೆ ಎರಡು ಮೂರು ದಿನಗಳವರೆಗೆ ಮನೆಗೇ ಬರುತ್ತಿರಲಿಲ್ಲ. ಊಟವೆಲ್ಲಿಯೋ ? ನಿದ್ದೆಯೆಲ್ಲಿಯೋ ?—ಒಂದೂ ಒಬ್ಬರಿಗೂ ಗೊತ್ತಾಗುತ್ತಿರಲಿಲ್ಲ. ಇದೆಲ್ಲವನ್ನೂ ನೋಡಿ, ಕೇಳಿ ಕಮಲಾ ಒಂದು ರೀತಿಯಿಂದ ತುಂಬಾ ಹತಾಶಳಾದಳು. ಅವಳು ಆಗ ಯುವತಿ ಎನಿಸಿಕೊಂಡಿದ್ದರೂ ಇನ್ನೂ ಬಾಲಿಕೆಯಾಗಿದ್ದಳು. ಪತಿಪ್ರೇಮ, ಸ್ವಾಮಿಭಕ್ತಿಗಳನ್ನು ಅವಳಿನ್ನೂ ಚೆನ್ನಾಗಿ ಅರಿತುಕೊಂಡವಳಾಗಿರಲಿಲ್ಲ. ಕಲಿಯುತ್ತಿದ್ದಳಾದರೂ ಅದಕ್ಕೂ ವಿಘ್ನವಾಯಿತು. ಅದೂ ಅವಳ ಪತಿಯ ಮುಖಾಂತರವೇ ! ಇದರಲ್ಲಿ ಅವಳ ದೋಷವಾದರೂ ಏನು ? ಅದೇನು ಅಲ್ಪಸ್ವಲ್ಪ ಕಲಿತುಕೊಂಡಿದ್ದಳೋ ಅದೂ ಸ್ವಲ್ಪ ಸ್ವಲ್ಪವಾಗಿ ನಿಧಾನವಾಗಿ ಮರೆಯುತೊಡಗಿದಳು. ಇದುವರೆಗೂ ಅವಳ ಹೃದಯದ

ಒರೆಗಲ್ಲಿನ ಮೇಲೆ ಒರೆಯಿಟ್ಟಿದ್ದ ಪ್ರೇಮದ ಸುವರ್ಣ ಗೆರೆಗಳು ಬೆಳಗಿ ಬೆಲೆ ಕೊಟ್ಟಿರಲಿಲ್ಲ - ಹೊರಗಿನ ಸುಂದರತೆಯು ಒಳಗೆ ಪ್ರತಿಬಿಂಬಿತವಾಗಿರಲಿಲ್ಲ ಸಹ. ಅಲಕ್ಷ್ಯ ಹಾಗು ಅಸಾವಧಾನೀಯತೆಯಿಂದ ಕ್ರಮೇಣ ಒರೆಗಲ್ಲಿನ ಮೇಲಿನ ಗೆರೆಗಳು ಮಾಸತೊಡಗಿದವು. ಕಡೆಗೆ, ಅದೆಂದು ಸಂಪೂರ್ಣವಾಗಿ ಗುರುತು ಸಹ ಇಲ್ಲದಂತೆ ಆಯಿತೋ ಅದು ಕಮಲೆಗೆ ಗೊತ್ತೂ ಆಗಲಿಲ್ಲ. ತನ್ನ ಪ್ರೇಮ ಕಟ್ಟಡವು ಮುರಿದು, ತುಂಡಾದ ನಾಲ್ಕಾರು ಇಟ್ಟಿಗೆ, ಕಲ್ಲು, ಮರದ ತುಂಡುಗಳು ಅಲ್ಲಿ ಇಲ್ಲಿ ಅಸ್ತವ್ಯಸ್ತವಾಗಿ ಬಿದ್ದಿದ್ದುದು ಕೆಲವು ವೇಳೆ ಅವಳಿಗೆ ಕಾಣಿಸುತ್ತಿತ್ತು. ಆದರೆ ಅವನ್ನು ಒಟ್ಟು ಸೇರಿಸಿ ಹೊಂದಿಸಿ ಮತ್ತೆ ಕಟ್ಟಡವನ್ನು ಕಟ್ಟುವ ಇಚ್ಛೆ ಅವಳಲ್ಲಿ ಉಂಟಾಗುತ್ತಿರಲಿಲ್ಲ. ಅಷ್ಟೊಂದು ಸಾಮರ್ಥ್ಯವೂ ಇರಲಿಲ್ಲ. ಅಲ್ಲೊಂದು ಪ್ರೇಮರಾಜ್ಯದ ಪ್ರಾಸಾದವಿತ್ತು ; ಪ್ರಮೋದ ವನವೂ ಇತ್ತು. ಇವೆಲ್ಲ ಸ್ವಪ್ನಾವಸ್ಥೆಯ ಮೈಮರೆವಿನಲ್ಲಿ ಕಂಡುಬಿದ್ದಿದ್ದವು. ಸ್ವಪ್ನವೊಡೆದವೊಡನೆಯೇ ಅವೆಲ್ಲ ಎಲ್ಲಿಯೋ ಕಣ್ಮರೆಯಾದವು. ಆ ಸ್ವಪ್ನವನ್ನು ಪುನಃ ನೋಡಬೇಕೆಂಬ ಬಯಕೆ ಸಹ ಅವಳಿಗುಂಟಾಗಲಿಲ್ಲ. ಹೋದದ್ದು ಹೋದ ಹಾಗೆಯೇ.

ವೃದ್ಧ ತಂದೆಯ ಸೇವೆ ಮತ್ತು ನೌಕರ ಚಾಕರರ ಮೇಲ್ವಿಚಾರಣೆ ಇವೇ ಮೊದಲಾದ ಕರ್ತವ್ಯ ಪಾಲನೆಯಲ್ಲಿ ಒಂದು ಬಗೆಯ ಸುಖದಲ್ಲಿ ಕಮಲೆಯ ದಿನಗಳು ಕಳೆಯುತ್ತಿದ್ದವು. ಒಂದು ಕೆಲಸದಲ್ಲಿ ಒಬ್ಬರಿಗೆ ಸುಖ ದೊರೆತರೆ ಇನ್ನೊಬ್ಬರಿಗೆ ಅದರಲ್ಲಿ ಸುಖ ದೊರೆಯಲಾರದು. ಯಾವುದರಿಂದ ಕಮಲಾ ಒಂದು ಬಗೆಯ ಸುಖವನ್ನು ಪಡೆಯುತ್ತಿದ್ದಳೋ ಅದರಿಂದ ವೃದ್ಧಪರಿಚಾರಿಕೆಯು ಒಳಗೇ ಒಂದು ಬಗೆಯ ಕ್ಲೇಶವನ್ನು ಅನುಭವಿಸಿದಳು. ಕಡೆಗೊಂದು ದಿನ, ಅದೂ ಬಹಳ ನೋಡಿ, ವಿಚಾರಮಾಡಿ ಅವಳು ಗುಟ್ಟಾಗಿ ಏಕಾಂತದಲ್ಲಿ ಪ್ರಿಯಬಾಬುವಿನೊಡನೆ, "ಅಳಿಯಂದಿರು ಹೇಗಾಗಿ ಹೋಗುತ್ತಿದಾರೆ. ಒಂದು ಸಲ ಮನೆಯಲ್ಲೇ ಇರುತ್ತಾರೆ. ಮತ್ತೊಂದು ಸಲ ಹೊರಕ್ಕೆ ಹೋಗಿಬಿಡುತ್ತಾರೆ. ಯಾವಾಗ ಏನು ಮಾಡುತ್ತಾರೆಂಬುದು ಮನೆಯಲ್ಲಿ ಯಾರಿಗೂ ಗೊತ್ತಾಗುವುದಿಲ್ಲ. ಚಿಕ್ಕಮ್ಮನವರ ಕೂಡ ಮಾತುಕತೆ ಇಲ್ಲ ಅಂತ ಕಾಣುತ್ತೆ" ಎಂದು ಹೇಳಿದಳು.

ಪ್ರಿಯಬಾಬುವಿಗೆ ತನ್ನ ಶರೀರ ಸ್ಥಿತಿಯೊಂದೇ ಬಹಳ ಬೇಸರಿಕೆಯನ್ನೂ, ಜಿಗುಪ್ಸೆಯನ್ನೂ ಉಂಟುಮಾಡಿತ್ತು. ಆದುದರಿಂದ ಇವುಗಳೊಂದರ ಕಡೆಗೂ ಅವನು ಲಕ್ಷ್ಯ ಕೊಡುತ್ತಿರಲಿಲ್ಲ. ಆ ವೃದ್ಧೆಯ ಮಾತಿನಿಂದ ಅವನ ಲಕ್ಷ್ಯವೆಚ್ಚೆತ್ತು ಅತ್ತ ತಿರುಗಿತು. ಕಮಲೆಯು ಬಂದ ಮೇಲೆ ಅವನು ಅತಿಯಾದ ಸ್ನೇಹದಿಂದ, "ಮಗು, ನಾನು ಕೇಳುವುದಕ್ಕೆ ಸರಿಯಾದ ಉತ್ತರವನ್ನು ಕೊಡುತ್ತಿ ತಾನೆ ?" ಎಂದನು.

ಕಮಲಾ ತಂದೆಯ ಚಹರೆಯ ಕಡೆ ನೋಡಿ, "ಯಾವುದಕ್ಕೆ ಅಪ್ಪಾ ?" ಎಂದು ಕೇಳಿದಳು.

"ನೋಡು ಮಗು, ನನ್ನಲ್ಲಿ ನಾಚಿಕೆಪಡಬೇಕಾದ ಪ್ರಮೇಯವೇನೂ ಇಲ್ಲ. ಆಪತ್ತುಗಳಲ್ಲಿ, ವಿಪತ್ತುಗಳಲ್ಲಿ, ಮಾನಸಿಕ ತೊಂದರೆಗಳಲ್ಲಿ ತಂದೆಯಿಂದ ಯಾವ ವಿಚಾರವನ್ನೂ

ಮುಚ್ಚಿಡುವುದು ಒಳ್ಳೆಯದಲ್ಲ. ಎಲ್ಲ ವಿಚಾರಗಳನ್ನೂ ಸ್ಪಷ್ಟವಾಗಿ ಬಿಚ್ಚಿ ಹೇಳುವು ದಿಲ್ಲವೇ, ಮಗೂ ?" ಎಂದು ಕೇಳಿದನು.

ಆದರೆ ಏನು ಹೇಳಲಾದೀತು ? ಕಮಲೆಗೆ ಕೊಂಚವಾದರೂ ತಿಳಿಯಲಿಲ್ಲ. ಪ್ರಿಯ ಬಾಬುವು ಕೊಂಚ ಹೊತ್ತು ಸುಮ್ಮನಿದ್ದು, "ಏನು ನಿಮ್ಮಿಬ್ಬರಲ್ಲಿ ಜಗಳವೇನಾದರೂ ಆಗಿದೆಯೋ ಮಗು ?" ಎಂದು ಮತ್ತೆ ಕೇಳಿದನು.

"ಹೋದುವಿಕೆಯೆಂದು ಹೇಳಿದಿತ್ತು ಇಂದು ಜಗಳವಾಗಲಿಕ್ಕೆ!" ಎಂದು ಕಮಲಾ ಮನದೊಳಗೇ ಅಂದುಕೊಂಡಳು. ತಲೆಯಲ್ಲಾಡಿಸಿ, "ಇಲ್ಲ" ಎಂದು ಉತ್ತರಕೊಟ್ಟಳು.

"ಜಗಳವಾಗಿಲ್ಲದಿದ್ದರೆ....ಹಾಗಾದರೆ ಅವನನ್ನು ಕಂಡರೆ ನಿನಗೇ ಇಷ್ಟವಿಲ್ಲವೋ ಹೇಗೆ ಹೇಳು ?"

"ಹೌದು, ಇಷ್ಟವಿಲ್ಲ !" ಎಂದು ಹೇಳಿ ಬಿಡಬೇಕೆಂದು ಒಮ್ಮೆ ಕಮಲಾ ಮನಸ್ಸಿಗೆ ಬಂತು. ಆದರೆ ಅವಳಿಂದ ಅದು ಸಾಧ್ಯವಾಗಲಿಲ್ಲ. ಗಂಡನು ತನಗೆ ಇಷ್ಟವಿಲ್ಲವೆಂದು ಹೇಳಿಕೊಳ್ಳಲು ಆವಳ ಮನಸ್ಸು ಸಿದ್ಧವಾಗಿರಲಿಲ್ಲ. ಮೇಲಾಗಿ ಮನಸ್ಸಿಗೆ ನೋವೂ ಉಂಟಾಯಿತು. ಆದರಿಂದ ಅವಳು ಸುಮ್ಮನೇ ಇದ್ದಳು. ಪ್ರಿಯಬಾಬುವಿನ ಮುಖವು ಕಳೆಗುಂದಿತ್ತಾದರೂ ಅವನು ನಗುತ್ತಾ "ಹಾಗಾದರೆ, ಅವನಿಗೇ ನಿನ್ನನ್ನು ಕಂಡರೆ ಇಷ್ಟ ವಿಲ್ಲವೇ ?" ಎಂದು ಕೇಳಿದನು.

ಕಮಲಾ ಯೋಚಿಸತೊಡಗಿದಳು—ಹೀಗೆಯೇ ಇರಬೇಕು. ಅವರಿಗೇ ನನ್ನನ್ನು ಕಂಡರೆ ಇಷ್ಟವಿಲ್ಲವೆಂದು ಕಾಣುತ್ತೆ. ಆದರೆ ಇದೆಂತಹ ಯೋಚನೆ? ನನ್ನನ್ನು ಕಂಡರೆ ನನ್ನ ಪತಿಗೆ ಇಷ್ಟವಿಲ್ಲವೆ? ಕಮಲಾ ನಡುಗಿದಳು. ತನ್ನ ಹೃದಯಮಂದಿರವನ್ನು ಒಳ ಹೊಕ್ಕು ನೋಡಲು ಪ್ರಯತ್ನಿಸಿದಳು. ಅಲ್ಲಿಯ ಸಂಗೀತವು ನಿಂತುಹೋಗಿದ್ದುದು ಕಂಡು ಬಂತು. ಕೇವಲ ಒಂದೆರಡು ವ್ಯಕ್ತಿಗಳು ಬಂದು ಸಂಗೀತ ಸಾಮಗ್ರಿಗಳನ್ನು ಸರಿಯಾಗಿ ಕಟ್ಟಿ ತೆಗೆದುಕೊಂಡು ಹೋಗಿಬಿಡಲು ಬಂದುದು ಕಂಡಿತು. ಅಲ್ಲದೆ ಅವರ ಅಲಕ್ಷ್ಯಸ್ಪರ್ಶದಿಂದ, ಕೈಯಾಡಿಸೋಣದರಿಂದ ಒಂದೊಂದು ಸಲ ಒಂದೊಂದು ಸ್ವರ ಹೊರಡುತ್ತಿತ್ತು. ಹೃದಯರಂಗದ ಅಭಿನೇತ್ರಿಯು ಒಂದಂಚಿನಲ್ಲಿ ಆಗಾಗ್ಗೆ ಇಣಿಕಿ ನೋಡು ತ್ತಿದ್ದುದೂ ಕಾಣಿಸಿತು. ಸಾಕು! ಕಮಲಾ ಅಳುತ್ತಾ ಮುಖವನ್ನು ಸೆರಗಿನಿಂದ ಮುಚ್ಚಿ ಕೊಂಡಳು. ಪ್ರಿಯಬಾಬುವು ಅತ್ಯಂತ ಕಾತರಭಾವದಿಂದ, "ಅಳಬೇಡಮ್ಮ, ಮಗು !" ಎಂದನು.

"ಅಪ್ಪಾ! ನಾವೀಗ ದಿಕ್ಕಿಲ್ಲದ ತಬ್ಬಲಿಗಳಂತೆ !"

ಪ್ರಿಯಬಾಬು ಮಗಳನ್ನು ಮೃದುವಾಗಿ ಬಳಿಗೆಳೆದು ತಂದೆಯ ಹಿರಿಯ ವಾತ್ಸಲ್ಯ ದಿಂದ ಅಪ್ಪಿಕೊಂಡು ಅತ್ಯಂತ ಕೋಮಲ ಸ್ವರದಿಂದ, "ಛೀ ! ಛೀ ! ಇಂತಹ ಮಾತನ್ನೆಲ್ಲಿ ಯಾದರೂ ಆಡುತ್ತಾರೆಯೇ ಮಗು ? ನಿನ್ನನ್ನು ಹೆತ್ತವಳು ನನ್ನ ಸರ್ವಸ್ವನಾಗಿದ್ದಳು. ಈಗಲೂ ಸಹ ಅವಳು ಪ್ರತಿದಿನ ರಾತ್ರಿ ಬಂದು ನನ್ನ ಕಾಲುಗಳ ಬಳಿಯಲ್ಲಿ ಕುಳಿತಿರುತ್ತಾಳೆ.

ಮಧ್ಯಾಹ್ನದ ಹೊತ್ತು ಕೇವಲ ನಿಮ್ಮಗಳ ಹೆದರಿಕೆಗಾಗಿ ಬರುವುದಿಲ್ಲ. ಕತ್ತಲಾಗುತ್ತಿದೆ. ಅವಳೊಂದು ವೇಳೆ ಬಂದು ನಿನ್ನೀ ಮಾತುಗಳನ್ನು ಕೇಳಿಬಿಟ್ಟರೆ ತುಂಬ ದುಃಖಿತಳಾಗುತ್ತಾಳೆ" ಎಂದನು.

ಇಳಿಸಂಜೆಯಾಗಿ ಬಿಟ್ಟಿತ್ತು. ಕೊಠಡಿಯಲ್ಲಿ ಕತ್ತಲು ಪವಡಿಸುತ್ತಿತ್ತು. ಕಮಲಾ ಬೆಚ್ಚಿದಳು. ನಿಜವಾಗಿಯೂ ಒಳಕ್ಕೆ ಯಾರಾದರೂ ಬಂದರೋ ಹೇಗೆಂದು ನಾಲ್ಕೂ ಕಡೆಯೂ ನೋಡಿದಳು! ಎಲ್ಲೂ ಯಾರೂ ಕಾಣಿಸಲಿಲ್ಲ. ಆಗ ಅವಳ ಮನಸ್ಸಿಗೆ ನೆಮ್ಮದಿಯಾಯಿತು. ಅವಳು ಕೊಠಡಿಯಿಂದ ಹೊರಕ್ಕೆ ಬಂದಾಗಲೂ ಇನ್ನೂ ಅವಳ ಕಾಲುಗಳು ನಡುಗುತ್ತಿದ್ದವು. ಇದ್ದಕ್ಕಿದ್ದ ಹಾಗೆಯೇ ತನ್ನ ಶರೀರ ಅರ್ಧರಕ್ತವನ್ನು ಹೀರಿಬಿಟ್ಟಷ್ಟು ದುರ್ಬಲವಾಗಿ ಕಂಡುಬಂತು. ತನ್ನೆಲ್ಲ ಕೆಲಸಕಾರ್ಯಗಳನ್ನು ಮುಗಿಸಿಕೊಂಡ ಮೇಲೆ ಅವಳು ಕಾಶೀನಾಥನ ಕೊಠಡಿಯೊಳಕ್ಕೆ ಹೋದಳು. ಅವನು ನೆಲದ ಮೇಲೆ ಆಸನವನ್ನು ಹಾಕಿಕೊಂಡು, ದೀಪ ಹಚ್ಚಿಕೊಂಡು, ತನ್ನ ವ್ಯಾಸಂಗದ ಕಡತವನ್ನು ತೆರೆದುಕೊಂಡು ಮಗ್ನನಾಗಿ ಕುಳಿತಿದ್ದನು. ಅವಳೂ ಅಲ್ಲೇ ನೆಲದಮೇಲೆ ಕುಳಿತುಕೊಂಡಳು. ಕಾಶೀನಾಥನು ತಲೆಯೆತ್ತಿ ನೋಡಿದ - ಕಮಲಾ! "ನೀನು ಬಂದಿದ್ದೀಯಾ?" ಎಂದು ಆಶ್ಚರ್ಯದಿಂದ ಕೇಳಿದನು.

"ಹೌದು, ನಾನು ಬಂದಿದ್ದೇನೆ."

"ಕುಳಿತುಕೋ" ಎಂದು ಕಾಶೀನಾಥನು ಪುನಃ ಓದುವುದರಲ್ಲಿ ಮಗ್ನನಾಗಿಬಿಟ್ಟನು. ಕಮಲ ಬಹಳ ಹೊತ್ತಿನವರೆಗೆ ಪತಿಯ ಅಧ್ಯಯನವನ್ನು ನೋಡುತ್ತಿದ್ದಳು. ಆಮೇಲೆ ಅವಳು ತನ್ನ ಕೈಯಿಂದಲೇ ಅವನು ಓದುತ್ತಿದ್ದ ಪುಸ್ತಕವನ್ನು ಮುಚ್ಚಿಬಿಟ್ಟಳು. ಕಾಶೀನಾಥನು ಆಶ್ಚರ್ಯದಿಂದ ತಲೆಯೆತ್ತಿ "ಮುಚ್ಚಿಬಿಟ್ಟೆ?" ಎಂದನು.

"ಏನಾದರೂ ಕೊಂಚ ಮಾತುಕತೆಯಾಡಿ. ದಿನವೂ ಓದುತ್ತೀರಿ. ಒಂದು ದಿನ ಓದದಿದ್ದರೆ ಏನೂ ತೊಂದರೆಯಾಗುವುದಿಲ್ಲ."

"ಅದಕ್ಕೆ ಪುಸ್ತಕ ಮುಚ್ಚಿಬಿಟ್ಟೆಯಾ?"

"ಅದಕ್ಕಷ್ಟೆ ಅಲ್ಲ. ಪುಸ್ತಕ ಮುಚ್ಚುವುದರಿಂದ ನೀವು ಕೋಪಿಸಿಕೊಳ್ಳುತ್ತೀರಿ. ಆಗಲಾದರೂ ಏನಾದರೂ ಮಾತನಾಡುತ್ತೀರಿ ಅದಕ್ಕೋಸ್ಕರ."

ಕಾಶೀನಾಥನು ಮುಗುಳುನಕ್ಕು, "ನಾನೇಕೆ ಕೋಪಿಸಿಕೊಳ್ಳುತ್ತೇನೆ ಕಮಲಾ? ನಿನ್ನ ಹತ್ತಿರ ಅಂತಹ ಒಂದರ್ಧ ಮಾತನ್ನಾದರೂ ನಾನು ಯಾವಾಗಲಾದರೂ ಆಡಿದ್ದೇನೆಯೇ? ನೀನು ಮಾತನಾಡುವುದಿಲ್ಲ; ಹತ್ತಿರ ಬರುವುದಿಲ್ಲ; ಹೀಗಿರುವಾಗ ನಾನು ಓದದೆಯೂ ಹೋದರೆ ನನ್ನ ದಿನಗಳನ್ನು ಹೇಗೆ ಕಳೆಯಲಿ ಹೇಳು?" ಎಂದು ಪುನಃ ಕೊಂಚ ನಕ್ಕು, "ಜ್ವರ ಬರುತ್ತಿದೆ. ಈಗೆರಡು ದಿನದಿಂದ ಹೊಟ್ಟೆಗೇನೂ ತೆಗೆದುಕೊಂಡಿಲ್ಲ. ಅದರೂ ನೀನು ಒಂದು ಸಲವಾದರೂ ವಿಚಾರಿಸಿಕೊಳ್ಳಲಿಲ್ಲ" ಎಂದನು.

ಕಮಲಾ ತಲೆಯೆತ್ತಿ ಅವನನ್ನು ನೋಡಿದಳು. ಪತಿಯ ಚಹರೆಯು ಒಣಗಿ ಕಪ್ಪಿಟ್ಟುಹೋಗಿದೆ. ಅವಳು ಅವನ ಹಣೆಯ ಮೇಲೆ ಕೈಯಿಟ್ಟಳು - ಬೆಂಕಿಯಾಗಿದೆ! ಅವಳು ರೋಧಿಸುತ್ತಾ ಪತಿಯ ತೊಡೆಯಲ್ಲಿ ಮುಖವನ್ನು ಹುದುಗಿಕೊಂಡಳು. ಲಜ್ಜೆಯಿಂದ ಅವಳಿಗೆ ಸಾಯಬೇಕೆನ್ನಿಸಿತು. "ನೀವು ನನ್ನ ತಪ್ಪನ್ನು ಮನ್ನಿಸಿ ಮತ್ತೊಂದು ಸಲ ನಿಮ್ಮವಳನ್ನಾಗಿ ಮಾಡಿಕೊಳ್ಳಿ. ನಿಮ್ಮೆಲ್ಲ ಭಾರವನ್ನು ನನ್ನ ಮೇಲೆ ಒರಗಿಸಿಬಿಡಿ." ಎಂದು ಕಮಲಾ ಬಿಕ್ಕುತ್ತಾ ಹೇಳಿದಳು.

"ನಾನೇನೋ ಒರಗಿಸುತ್ತೇನೆ. ಆದರೆ ನಿನ್ನಿಂದ ನೋಡಿಕೊಳ್ಳುವುದಕ್ಕೆ ಸಾಧ್ಯವೆ?"

"ಅದೇಕೆ ಸಾಧ್ಯವಿಲ್ಲ?"

"ನೋಡೋಣ"

"ನಿಮ್ಮವಳನ್ನಾಗಿ ಮಾಡಿಕೊಳ್ಳಿ"

"ಬಹಳ ದಿನಗಳಿಂದ ನನ್ನವಳನ್ನಾಗಿ ಮಾಡಿಕೊಂಡೆ ಆದರೆ ನೀನು ನನ್ನನ್ನು ಅರಿತುಕೊಳ್ಳಲಿಲ್ಲ. ಈಗಲೂ ಸಹ ಸಂಪೂರ್ಣವಾಗಿ ಚೆನ್ನಾಗಿ ನನ್ನನ್ನು ನೀನು ಯಾವತ್ತಿಗೂ ಅರಿತುಕೊಳ್ಳಲಾರೆ."

ಕಮಲಾ ದೀಪದ ಬೆಳಕಿನಲ್ಲಿ ಮನಃಪೂರ್ತಿಯಾಗಿ ಅವನ ಆ ಮುಖವನ್ನು ನೋಡಿದಳು. ಆ ಚಹರೆಯು ಬೂದಿ ಮುಚ್ಚಿದ ಕೆಂಡ; ಮೇಣದಿಂದ ಆವರಿಸಲ್ಪಟ್ಟ ಜೇನುತುಪ್ಪ ಎಂದು ಅವಳ ಮನಸ್ಸಿಗನ್ನಿಸಿತು. ಒಂದರೆಕ್ಷಣ ಅವಳು ತನ್ನನ್ನು ತಾನೇ ಮರೆತುಬಿಟ್ಟಂತಾದಳು. ಅವಳು ಪೂರ್ಣ ಆವೇಗದಿಂದ, "ನೀವು ಇಷ್ಟು ದಿನ ನಿಮ್ಮನ್ನು ಅರಿತುಕೊಳ್ಳುವ ಅವಕಾಶವನ್ನೇಕೆ ನನಗೆ ಕೊಡಲಿಲ್ಲ? ಇಷ್ಟು ದಿವಸವೂ ನಿಮ್ಮನ್ನು ಮರೆಮಾಡಿಕೊಂಡು ನನ್ನನ್ನು ಕಾಡುತ್ತಿದ್ದೀರಾ?" ಎಂದಳು. ಆನಂದೋದ್ರೇಕಿತಳಾದ ಕಮಲೆಯ ಕೋಮಲ ಬಾಹುಗಳು ಅವನ ಕೊರಳನ್ನು ಸುತ್ತುವರಿದವು. ಕಾಶೀನಾಥನ ಕಣ್ಣುಗಳಿಂದಲೂ ಆ ದಿನ ನೀರು ಹರಿಯತೊಡಗಿತು.

—೬—

ಮಾರನೆಯ ದಿನ ಪ್ರಿಯಬಾಬುವು ಕಾಶೀನಾಥನನ್ನು ಬಳಿಗೆ ಕರೆಸಿಕೊಂಡು "ನನ್ನದಿನ್ನೇನು ನೆಚ್ಚಿಕೆಯಪ್ಪಾ ಯಾವಾಗ ಹೋಗುತ್ತೇನೆಂಬುದೋ ಏನೋ! ನನಗೆ ಗಂಡು ಮಕ್ಕಳು ಇಲ್ಲ. ಇರುವ ಅಲ್ಪಸ್ವಲ್ಪ ಜಮೀನು ಮನೆ ಮಠ ಎಲ್ಲ ನಿನ್ನದೇ. ನಾನಿರುವಾಗಲೇ ಇವುಗಳಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನೂ ಚೆನ್ನಾಗಿ ತಿಳಿದುಕೊಂಡುಬಿಡು. ಇಲ್ಲವೆ ಹೋದರೆ ಆಮೇಲೆ ಒಂದೂ ಉಳಿಯುವುದಿಲ್ಲ. ಜನ ವಂಚಿಸುತ್ತಾರೆ" ಎಂದು ಹೇಳಿದನು

ತಲೆತಗ್ಗಿಸಿ ನಿಂತಿದ್ದ ಕಾಶೀನಾಥನು, "ಅಪ್ಪಣೆಯಾದಂತೆ ನಡೆಯುತ್ತೇನೆ" ಎಂದನು.

"ಅಪ್ಪಣೆ ಮಾಡುವುದೇನು ? ನಾಳೆಯಿಂದ ದಿನಾ ಬೆಳಿಗ್ಗೆ ಒಂದು ಸಲ ಹೋಗಿ ಕಛೇರಿಯಲ್ಲಿ ಕುಳಿತು ಬಾ."

"ಅಪ್ಪಣೆ" ಎಂದು ಕಾಶೀನಾಥನು ಹೊರಟು ಹೋದನು. ಪ್ರಿಯನಾಥನು ಮಗಳನ್ನು ಕರೆಸಿ "ಮಗು, ನಾನು ಮುದುಕನಾಗಿಬಿಟ್ಟೆ ನನ್ನಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಶಕ್ತಿಸಾಮರ್ಥ್ಯವಿಲ್ಲ. ಆದರಿಂದ ಜಮೀನುದಾರಿಯ ಸಮಸ್ತ ಭಾರವನ್ನೂ ಕಾಶೀನಾಥನಿಗೆ ಒಪ್ಪಿಸಿಬಿಟ್ಟೆ. ಆಮೇಲೆ ಕೆಲಸ ಕಾರ್ಯಗಳಲ್ಲಿ ಯಾವ ವಿಘ್ನವಾದ ತೊಂದರೆಯೂ ಆಗದಿರಲಿ ಅಂತ. ಅಲ್ಲದೆ ಆಗಾಗ್ಗೆ ನಾನೂ ತಿಳಿವಳಿಕೆ ಕೊಡುತ್ತಿರುತ್ತೇನೆ" ಎಂದನು.

ಕೆಲವು ದಿವಸಗಳವರೆಗೆ ಸ್ವತಃ ಪ್ರಿಯಬಾಬುವೇ ಕಾಶೀನಾಥನೊಡನೆ ಕಛೇರಿಗೆ ಹೋಗಿ ಬರುತ್ತಿದ್ದ. ಜಮೀನುದಾರಿಗೆ ಸಂಬಂಧಿಸಿದ ಅನೇಕ ವಿಚಾರಗಳ ತಿಳಿವಳಿಕೆಯನ್ನು ಚೆನ್ನಾಗಿ ಕೊಡುತ್ತ ಬಂದ. ಒಂದು ಉದ್ಯೋಗ ಮಾಡಬೇಕಾಗಿ ಬಂದದ್ದು ಕಾಶೀನಾಥನಿಗೆ ಆನಂದವನ್ನುಂಟುಮಾಡಿತು. ಮನೆಯೊಳಗೆ ಮೆಲ್ಲಗೆ ತಾನಾಗಿಯೇ ಹೊತ್ತಿಕೊಳ್ಳುತ್ತಿದ್ದ ಕಿಚ್ಚಿನ ಜ್ವಾಲೆಯು ಅಂತೂ ಬಹಳ ದಿನಗಳ ಮೇಲೆ ಕ್ರಮೇಣ ಕಡಿಮೆಯಾಗತೊಡಗಿತು.

ಈಗ ಕಾಶೀನಾಥನು ಸಂಪೂರ್ಣ ರೂಪದಲ್ಲಿ ಯಥಾರೀತಿಯಾಗಿ ಜಮೀನುದಾರಿಯ ಕೆಲಸ ಕಾರ್ಯಗಳನ್ನು ನೋಡತೊಡಗಿದ್ದಾನೆ. ಕಮಲೆಯೂ ಸಹ ಅದೇ ರೀತಿಯಲ್ಲಿ ಗೃಹಕಾರ್ಯವನ್ನೆಲ್ಲಾ ನೋಡಿಕೊಳ್ಳುತ್ತಿದ್ದಾಳೆ. ಸರಿ ಇತ್ತ ಪ್ರಿಯಬಾಬುವೂ ಯಥಾರೀತಿಯಾಗಿ ಹಾಸಿಗೆ ಹಿಡಿದೇ ಮಲಗಿರುತ್ತಾನೆ ಹೀಗೆ ಯಾವ ಸಂಘರ್ಷಣೆಯೂ ಇಲ್ಲದೆ ಒಂದು ಬಗೆಯ ಆನಂದದಿಂದ ಈ ಸಂಸಾರ ನಡೆಯುತ್ತಿದೆ.

ಆದರೆ ಕೆಲವು ದಿನಗಳ ಮೇಲೆ ಪ್ರಿಯಬಾಬುವಿನ ಶರೀರ ಸ್ಥಿತಿ ತೀರ ಹಾಳಾಗತೊಡಗಿತು. ಒಂದು ದಿನ ಅವನು ತನ್ನ ಮಗಳನ್ನು ಕರೆದು, "ಕಮಲಾ ನಾನು ಉಯಿಲನ್ನು ಬರೆಸಿದ್ದೇನೆ" ಎಂದು ದಿಂಬಿನ ಕೆಳಗಿನಿಂದ ಒಂದು ಕಾಗದವನ್ನು ಓದತೊಡಗಿದನು— "ನಾನು ನನ್ನ ಚರಸ್ಥಿರ ಸಂಪೂರ್ಣ ಸಂಪತ್ತಿನ ಸಮ ಅರ್ಧವನ್ನು ನನ್ನ ಅಳಿಯ ಕಾಶೀನಾಥನಿಗೂ, ಮತ್ತು ಉಳಿದ ಅರ್ಧವನ್ನು ನನ್ನ ಮಗಳು ಕಮಲಾದೇವಿಗೂ ಕೊಟ್ಟಿರುತ್ತೇನೆ— ಏನಮ್ಮ ಮಗು ಸರಿತಾನೆ ?"

ಕಮಲಾ ಏನೊಂದು ಉತ್ತರವನ್ನೂ ಕೊಡಲಿಲ್ಲ. ಪ್ರಿಯಬಾಬು ವಿಸ್ಮಿತನಾದನು. "ಏಕೆ ಮಗು ನಿನ್ನ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲವೇ ?" ಎಂದು ಕೇಳಿದನು. ಅವನು ಈ ಉಯಿಲನ್ನು ಕೇವಲ ಕಮಲಾಗೆ ಸಂತೋಷವಾಗಲೆಂದೇ ಬರೆಯಿಸಿದ್ದನು. ಸಂಪತ್ತಿನ ಸರ್ವಾಧಿಕಾರಿಯು ಕಾಶೀನಾಥನೇ ಆದರೂ ಕಮಲಾ ಸಂತೋಷಿಸುವಳೆಂದು ಅವನಂದುಕೊಂಡಿದ್ದನು. ಆದರೆ ಇತ್ತ ಮನದಲ್ಲಿ ಯೋಚಿಸಿದ್ದನ್ನು ಬಾಯಲ್ಲಿ ಹೇಳಲು ಕಮಲೆಗೆ ನಾಚಿಕೆಯೆನಿಸುತ್ತಿತ್ತು.

ಪ್ರಿಯಬಾಬುವು "ಏನಾದರೂ ಹೇಳವುದಿದೆಯೇನು" ಎಂದನು.

ಕಮಲಾ ತಲೆಹಾಕಿ, "ಹೌದು" ಎಂದಳು.

"ಏನು ಮಗು ?"

ಕಮಲಾ ಕೊಂಚ ಅತ್ತ ಇತ್ತ ನೋಡಿ, "ಎಲ್ಲವನ್ನೂ ನನ್ನ ಹೆಸರಿಗೇ ಬರೆದು ಬಿಡಪ್ಪಾ!" ಎಂದಳು.

"ಅದೇಕೆ ಮಗು ?"

ಕಮಲಾ ಮುಖ ತಗ್ಗಿಸಿ ಕುಳಿತ್ತಿದ್ದಳು.

ಪ್ರಿಯಬಾಬುವು ಹಳೆಯ ಕಾಲದ ಪಳಗಿದ ಕೈ. ಅವನು ಪ್ರಪಂಚವನ್ನು ಕಂಡಿದ್ದವನು. ಆದರಿಂದಲೇ ಕಮಲೆಯ ಮನಸ್ಸಿನ ವಿಚಾರವು ಅವನಿಗೆ ಹೊಳೆಯದೇ ಹೋಗಲಿಲ್ಲ. ಒಂದೊಂದಾಗಿ ಎಲ್ಲ ವಿಚಾರಗಳೂ ಹೇಗೆ ಹೇಗೆ ಅವನಲ್ಲಿ ಪ್ರವೇಶಿಸತೊಡಗಿದವೋ ಮತ್ತು ಮಾತಿನ ಆಳವನ್ನು ಅರಿತುಕೊಳ್ಳತೊಡಗಿದನೋ ಹಾಗೆಯೇ ಮೈಮುರಿವು ಕೊಂಚ ಕೊಂಚವಾಗಿ ಅವನ ಶರೀರವನ್ನು ಆವರಿಸತೊಡಗಿತು. ಅವನು ಯಾವ ದಿಂಬನ್ನು ಆಸರೆ ಪಡೆದು ಎದ್ದು ಕುಳಿತಿದ್ದನೋ ಅದರ ಮೇಲೆಯೇ ತಲೆಯಿಟ್ಟು ಕಣ್ಣುಮುಚ್ಚಿಕೊಂಡು ಮಲಗಿದನು.

ಹಾಗೆಯೇ ಬಹಳ ಹೊತ್ತು ಮೌನವಾಗಿದ್ದು, "ಮಗು, ನೀನು ನನ್ನ ಒಬ್ಬಳೇ ಮಗಳು. ನಿನ್ನ ಮನಸ್ಸಿಗೆ ನೋವುಂಟುಮಾಡಲು ನನಗೆ ಇಷ್ಟವಿಲ್ಲ. ಸಂಪತ್ತೆಲ್ಲವನ್ನೂ ನಾನು ನಿನ್ನೊಬ್ಬಳಿಗೇ ಕೊಟ್ಟು ಹೋಗುತ್ತೇನೆ. ಆದರೆ ನಿಜವಾಗಿಯೂ ಈ ಕೆಲಸ ಮಾತ್ರ ಒಳ್ಳೆಯದಾಗುವುದಿಲ್ಲ. ನೀನು ಸುಖಿಯಾಗಿರೆಂದು ಆಶೀರ್ವಾದ ಮಾಡುತ್ತೇನೆ. ಆದರೆ ಆ ವಿಚಾರದಲ್ಲಿ ಮಾತ್ರ ನನಗೆ ಭರವಸೆ ಕಡಿಮೆ. ನನ್ನ ಈ ದೀರ್ಘ ಜೀವನದಲ್ಲಿ ನಾನು ಬಹಳ ನೋಡಿದ್ದೇನೆ, ಕೇಳಿದ್ದೇನೆ, ನಾನೇ ಸ್ವತಃ ಮೂರು ಸಲ ಮದುವೆ ಮಾಡಿಕೊಂಡಿದ್ದೇನೆ. ಈ ಬಗೆಯ ಮನಸ್ಸುಳ್ಳ ಯಾವ ಸ್ತ್ರೀಯೂ ಪ್ರಪಂಚದಲ್ಲಿ ಎಂದೂ ಸುಖಿಯಾಗುವುದಿಲ್ಲ" ಎಂದು ಕೊಂಚ ಹೊತ್ತು ಸುಮ್ಮನಿದ್ದು ಮತ್ತೆ, "ನೋಡುವುದಕ್ಕೂ ಕೇಳುವುದಕ್ಕೂ ಚೆನ್ನಾಗಿರುತ್ತೆ ನಿನಗೂ ಸಂತೋಷವಾಗಿರುತ್ತೆ ಎಂದು ಆಲೋಚಿಸಿಯೇ ಇಬ್ಬರ ಹೆಸರಿನಲ್ಲಿಯೂ ಅರ್ಧ ಅರ್ಧ ಬರೆದಿದ್ದೆ. ನಿನ್ನಲ್ಲಿ ಅವನಲ್ಲಿ ಭಿನ್ನತೆ ಇಲ್ಲವೆಂದಿದ್ದೆ. ಒಳ್ಳೆಯದು,-ಅವನಿಗೆ ಕೊಡುವುದನ್ನು ನೀನೇತಕ್ಕೆ ತಡೆಯುತ್ತೀ ? ಅದನ್ನಾದರೂ ಹೇಳು" ಎಂದನು.

ಕಮಲಾ ಅಳುವ ಸ್ವರದಲ್ಲಿ, "ಸಂಪತ್ತು ದೊರೆತಮೇಲೆ ಯಾರೂ ನನ್ನ ಕಡೆ ಮುಖ ಕೂಡ ತಿರುಗಿಸಿ ನೋಡುವುದಿಲ್ಲ" ಎಂದಳು.

"ಸಂಪತ್ತು ದೊರೆಯದಿದ್ದರೆ"

"ನನ್ನ ಕೈಯಲ್ಲಿರುತ್ತಾರೆ"

"ನಾನು ಕಾಶೀನಾಥನನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಆದರೆ ನೀನು ತಿಳಿದು ಕೊಂಡಿಲ್ಲ. ಅವನು ಎಲ್ಲ ಅವನ ತಂದೆಯ ಹಾಗೆಯೇ. ನಿನ್ನ ಕಡೆ ಅವನು ನೋಡುವುದಿಲ್ಲ ವಾದರೆ ಸಂಪತ್ತು ದೊರೆತಮೇಲೂ ನೋಡುವವನಲ್ಲ. ಒಂದು ವೇಳೆ ಸಂಪತ್ತು ದೊರೆಯ ದಿದ್ದರೂ ಯಾವ ಬದಲಾವಣೆಯೂ ಆಗುವುದಿಲ್ಲ. ಅಷ್ಟೇ ಅಲ್ಲ, ಇನ್ನೂ ಕೇಳು. ಮಗು, ಈ ರೀತಿಯಾಗಿ ಪತಿಯನ್ನು ಹಿಡಿತದಲ್ಲಿ ಇಟ್ಟುಕೊಂಡಿರುವುದಕ್ಕಾಗುತ್ತದೆಯೇ? ಜೋರಿನಿಂದ, ಬಲವಂತದಿಂದ, ಅಧಿಕಾರದಿಂದ ಕಾಡಿನಲ್ಲಿರುವ ಸಿಂಹವನ್ನು ಹಿಡಿತಕ್ಕೆ ತರಬಹುದು. ಆದರೆ ಬಲವಂತದಿಂದ ಕೇವಲ ಒಂದು ಸಣ್ಣ ಮೊಗ್ಗನ್ನು ಸಹ ಅರಳು ವಂತೆ ಮಾಡಲಾಗುವುದಿಲ್ಲ."

ಕೊಂಚ ಹೊತ್ತು ಸುಮ್ಮನಿದ್ದು ಪ್ರಿಯಬಾಬು ಪುನಃ ದೇವರಲ್ಲಿ ಪ್ರಾರ್ಥಿಸುತ್ತೇನೆ ನೀನು ಸಫಲಳಾಗೆಂದು. ಆದರೆ ಇದು ಸರಿಯಾದ ದಾರಿಯಲ್ಲ. ಅವನು ನಿನ್ನನ್ನು ತನ್ನವಳನ್ನಾಗಿ ಮಾಡಿಕೊಳ್ಳದೇ ಹೋದರೆ ನಿನ್ನ ಬಳಿ ಆಗ ಉಳಿದಿರುವುದಾದರೂ ಏನು? ಏನು ಉಳಿದಿರುತ್ತದೆಯೋ ಅಷ್ಟಕ್ಕೆ ನನ್ನ ಸಂಪತ್ತಿನ ಅರ್ಧ ಸಾಲದೆ? ಇನ್ನೂ ಒಂದು ಮಾತು ಇದೆ. ಪತಿಗೆ ಶರೀರ, ಮನಸ್ಸು, ಆತ್ಮ, ಇಹಪರ ಎಲ್ಲವನ್ನೂ ಕೊಟ್ಟುಬಿಡು ತ್ತಾರೆ. ತನ್ನ ಸರ್ವಸ್ವವನ್ನೇ ಕೊಟ್ಟುಬಿಡಬೇಕಾದ ಅವನಿಗೆ ಕೇವಲ ತನ್ನ ಸಂಪತ್ತಿನ ಅರ್ಧವನ್ನು ಕೊಡಲಾಗುವುದಿಲ್ಲವೇ? ಕಮಲಾ, ಮಗು ಹೀಗೆ ಮಾಡಬೇಡ! ಇದೆಂದಾ ದರೂ ಅವನಿಗೆ ಗೊತ್ತಾದರೆ ಅವನಿಗೆ ತುಂಬಾ ದುಃಖವಾಗುತ್ತದೆ" ಎಂದನು.

ಕಮಲಾ ಯಾವ ಉತ್ತರವನ್ನೂ ಕೊಡಲಿಲ್ಲ. ಪ್ರಿಯಬಾಬು ಮತ್ತೇನನ್ನೂ ಹೇಳಲಿಲ್ಲ. ಇಬ್ಬರೂ ಅರ್ಧ ಘಂಟೆ ಹಾಗೆಯೇ ಮೌನವಾಗಿದ್ದರು. ಕತ್ತಲಾಗುತ್ತಾ ಬಂದಿತ್ತು. ಕೆಲಸದವಳು ದೀಪಹಚ್ಚಿ ಕೊಠಡಿಯಲ್ಲಿಟ್ಟು ಹೋದಳು. ಕಮಲಾ ಕಣ್ಣೊರಸಿಕೊಂಡು ತನ್ನ ಕೆಲಸಕ್ಕೆ ಹೊರಟುಹೋದಳು.

ಮಾರನೆಯ ದಿವಸ ಪ್ರಿಯಬಾಬು ತನ್ನ ವಕೀಲನನ್ನು ಕರೆಸಿ, "ನಾನು ನನ್ನ ಉಯಿ ಲನ್ನು ಬದಲಾಯಿಸುತ್ತೇನೆ" ಎಂದನು.

"ಏನು ಬದಲಾಯಿಸಬೇಕು?" ಎಂದು ಕೇಳಿದನು.

"ಅಳಿಯನ ಹೆಸರನ್ನು ಹೊಡೆದು ನನ್ನ ಸಂಪತ್ತನ್ನೆಲ್ಲಾ ಮಗಳ ಹೆಸರಿಗೇ ಬರೆಯು ತ್ತೇನೆ."

"ಏಕೆ?"

"ಈ ಪ್ರಶ್ನೆ ಬೇಕಿಲ್ಲ. ಹೇಳಿದಂತೆ ಬರೆದುಬಿಡಿ."

—೭—

ಪ್ರಿಯಬಾಬುವಿನ ಮರಣಾನಂತರ ಶ್ರಾದ್ಧಕರ್ಮಾದಿಗಳೆಲ್ಲ ಮುಗಿದಮೇಲೆ ಕಾಶೀ ನಾಥನು ಉಯಿಲನ್ನು ನೋಡಿದನು. ಅದನ್ನು ನೋಡಿ ಅವನಿಗೆ ಕೊಂಚವಾದರೂ

ದುಃಖವಾಗಲಿ, ವಿಸ್ಮಯವಾಗಲಿ ಉಂಟಾಗಲಿಲ್ಲ. ಈ ಪ್ರಪಂಚದಲ್ಲಿ ಪ್ರತಿನಿತ್ಯ ಯಾವುದು ಆಗುತ್ತಿದೆಯೋ, ಯಾವುದು ಆಗಬೇಕೋ ಅದೇ ಆಗಿದೆ. ಇದರಲ್ಲಿ ದುಃಖಪಡುವಂತಹ ಅಥವಾ ವಿಸ್ಮಯಪಡುವಂತಹ ವಿಚಾರವಾದರೂ ಏನಿದೆ ? ಆದರೂ ಸಹ ಜಮೀನುದಾರನ ಕಛೇರಿಯ ಮುಖ್ಯ ಗುಮಾಸ್ತನು ಏಕಾಂತದಲ್ಲಿ, "ಧಣಿಗಳೇ, ದೊಡ್ಡ ಯಜಮಾನರು ಇಂತಹ ಉಯಿಲನ್ನು ಬರೆದು ಹೋಗುತ್ತಾರೆಂದು ನಾನು ಸ್ವಪ್ನದಲ್ಲಿಯೂ ಯೋಚಿಸಿರಲಿಲ್ಲ. ಈ ಮೊದಲೇ ಅವರೊಂದು ಉಯಿಲನ್ನು ಬರೆದಿದ್ದರು. ಅದರಲ್ಲಿ ತಮಗೂ ಅಮ್ಮಾವರಿಗೂ ಇಬ್ಬರಿಗೂ ಸರಿಸಮವಾಗಿ ಹಂಚಿದ್ದರು. ಅದನ್ನು ಏತಕ್ಕೆ ಬದಲಾಯಿಸಿದರೋ, ಯಾರ ಸಲಹೆಯಿಂದ ಅವರ ಮನಸ್ಸು ಬದಲಾಯಿಸಿಬಿಟ್ಟಿತೋ, ಒಂದೂ ಗೊತ್ತಾಗುವುದಿಲ್ಲ" ಎಂದು ಕಾಶೀನಾಥನೊಡನೆ ಉಸುರಿದನು.

ಕಾಶೀನಾಥನು ಕೊಂಚ ಮುಗುಳುನಕ್ಕು, "ಗೊತ್ತಾಗಬೇಕಾದ ಅವಶ್ಯಕತೆಯಾದರೂ ಏನಿದೆ ? ಆಸ್ತಿ ಯಾರದ್ದೋ ಅವರಿಗೆ ಸೇರಿತು. ಅದರಲ್ಲಿ ನನ್ನದೇನಿದೆ ? ನಿಮ್ಮದೇನಿದೆ ?" ಎಂದನು.

ಗುಮಾಸ್ತನು ಕೊಂಚ ಪೆಚ್ಚಾದನು. "ಆದರೂ ......ಆದರೂ..... "

"ಆದರೂ .. ....ಅಂತ ...... ಇದರಲ್ಲಿ ಚೌಕಾಶಿಮಾಡಬೇಕಾದದ್ದೇನಿಲ್ಲ. ನಿಜವಾಗಿ ನೋಡಿದರೆ ಈ ಆಸ್ತಿಯಲ್ಲಿ ನನಗಿರುವ ಅಧಿಕಾರವಾದರೂ ಏನು ? ಬದಲಾಗಿ ಅವರು ನನ್ನ ಹೆಸರಿನಲ್ಲಿ ಅರ್ಧ ಬರೆದಿದ್ದರೆ ಆಗ ನಿಜವಾಗಿಯೂ ಆಶ್ಚರ್ಯಪಡಬೇಕಾಗುತ್ತಿತ್ತು. ನನಗೆ ಅರ್ಧ ಕೊಡುವುದೆಂದರೂ ಒಂದೇ, ಅವಳಿಗೆ ಪೂರ್ತಿಕೊಡುವುದೆಂದರೂ ಒಂದೇ. ಒಂದಕ್ಕೊಂದರಲ್ಲಿ ಭೇದವೇನಿದೆ."

ಆತನಿನ್ನೂ ಪೆಚ್ಚಾದನು. ಅದೇ ಪೆಚ್ಚುಮುಖದಿಂದ "ಇಲ್ಲ ಇಲ್ಲ ಭೇದವೇನಿಲ್ಲ— ನಾನು ಕೇವಲ ಯಜಮಾನರ ವಿಚಾರ ಹೇಳುತ್ತಿದ್ದೆ. ಅವರ ಅಭಿಪ್ರಾಯ ನನಗೆ ಚೆನ್ನಾಗಿ ಗೊತ್ತಿತ್ತು. ಅದಕ್ಕೋಸ್ಕರವೇ ನಾನು ಈ ವಿಚಾರವನ್ನು ತಮಗೆ ಹೇಳಿದ್ದು" ಎಂದು ಗುಮಾಸ್ತ ಹೇಳಿದನು.

"ಅವರು ತಮ್ಮ ಕರ್ತವ್ಯವನ್ನು ಮಾಡಿದರು. ಯೋಚಿಸಿನೋಡಿ. ಹೆಂಗಸರಿಗೆ ಪತಿಯಲ್ಲದೆ ಬೇರೆಗತಿ ಇಲ್ಲ. ಆದರೆ ಗಂಡಸಿಗೆ ಬೇರೆ ಗತಿಗಳೂ ಇವೆ. ನಾನು ಬಡವ. ಒಂದೇಸಲ ಇಷ್ಟೊಂದು ಸಂಪತ್ತು ನನ್ನ ಕೈಗೆ ಸಿಗುವುದರಿಂದ ಕೆಡಕಾಗಲೂಬಹುದು. ಈ ಕಾರಣದಿಂದಲೇ ಅವರು ಉಯಿಲನ್ನು ಬದಲಾಯಿಸಿರಬಹುದು."

ಆ ವೃದ್ಧ ಗುಮಾಸ್ತನು ಕಾಶೀನಾಥನನ್ನು ಇದುವರೆಗೂ ವಜ್ರಶುಂಠನೆಂದು ತಿಳಿದಿದ್ದನು. ಈ ದಿನ ಕಾಶೀನಾಥನ ಬಾಯಿಂದ ಈ ಬುದ್ಧಿವಂತಿಕೆಯ ಮಾತುಗಳನ್ನು ಕೇಳಿ, ಅವನಿಗೆ ಧನ್ಯವಾದಗಳನ್ನು ಅರ್ಪಿಸದೆ ಸುಮ್ಮನಿರಲು ಅವನ ಮನವೊಪ್ಪಲಿಲ್ಲ.

ಒಂದುಕಡೆ ಮುದಿಗುಮಾಸ್ತನು ಕ್ರಮೇಣ ಕಾಶೀನಾಥನ ಬುದ್ಧಿಜ್ಞಾನದ ಪರಿಚಯ ಮಾಡಿಕೊಳ್ಳತೊಡಗಿದನು. ಇನ್ನೊಂದು ಕಡೆ ಕಮಲಾ, ಕಾಶೀನಾಥನು ಅಜ್ಞಾನಿಯೆಂದು

ಮೊದಲೇ ಅಂದುಕೊಂಡಿದ್ದಂತೆ, ಮತ್ತು ಅವೇ ತಳಹದಿಯಮೇಲೆ ಅವನ ಅಜ್ಞಾನದ ಆಳವನ್ನು ದಿನೇದಿನೇ ಅಳೆಯತೊಡಗಿದಳು. ಹಗಲೆಲ್ಲಾ ನೂರಾರು ಸಲ "ಇವರೆಂತಹವರು ?" ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುವಳು. ನೂರಾರು ಸಲವೂ ಅದೇ ಪ್ರಶ್ನೆಗಳೇ ಪೆಚ್ಚುಮೋರೆ ಹಾಕಿಕೊಂಡು ಹಿಂತಿರುಗಿ, "ಗೊತ್ತಿಲ್ಲ" ಎಂದು ಹೇಳುತ್ತಿದ್ದವು.

ಸಾವಿರಾರು ಬಗೆಯಲ್ಲಿ, ಸಾವಿರಾರು ರೀತಿಯಲ್ಲಿ ಪ್ರಯತ್ನಪಟ್ಟಾಗ್ಯೂ, ಈ ಎರಡು ಕೈಕಾಲುಗಳ ಮನುಷ್ಯನು ಏತರಿಂದ ಮಾಡಲ್ಪಟ್ಟಿದ್ದಾನೆಂದು ಕಮಲಾ ನಿಶ್ಚಯಿಸಲಾರದೆ ಹೋದಳು. ಅವನು ತನ್ನ ಮನಸ್ಸನ್ನು ಒಳಗೇ ಹುದುಗಿಟ್ಟುಕೊಂಡಿದ್ದಾನೆಯೋ ಅಥವಾ ಬೇರೆಲ್ಲಿಯಾದರೂ ಅಡವಿಟ್ಟಿದ್ದಾನೆಯೋ, ಪ್ರಪಂಚವೆಲ್ಲ ಏನನ್ನು ಮಾಡುತ್ತದೆಯೋ ಅದನ್ನು ತನ್ನ ಪತಿಯು ಮಾಡುತ್ತಿರುವುದನ್ನಷ್ಟನ್ನಂತೂ ನೋಡಿದಳು. ಅವನು ಊಟ ಮಾಡುತ್ತಿದ್ದನು; ಮಲಗುತ್ತಿದ್ದನು; ಜಮೀನುದಾರಿಯ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದನು; ಮನೆಯ ಮೇಲ್ವಿಚಾರಣೆಯನ್ನೆಲ್ಲಾ ಮಾಡುತ್ತಿದ್ದನು; ಅವನು ಎಲ್ಲ ವಿಷಯಗಳಲ್ಲಿಯೂ ಆಸಕ್ತಿಯನ್ನು ತೋರಿಸುತ್ತಿದ್ದನು; ಜೊತೆಯಲ್ಲಿಯೇ ಉದಾಸೀನನೂ ಆಗಿರುತ್ತಿದ್ದನು. ತನ್ನ ಪತಿಗೆ ಯಾವುದು ಮೆಚ್ಚಿಗೆ, ಯಾವ ಪದಾರ್ಥದಲ್ಲಿ ಹೆಚ್ಚು ಪ್ರೇಮವೆಂಬುದನ್ನು ಸಹ ಅವಳಿಂದ ಈವರೆಗೆ ತಿಳಿಯಲಾಗಲಿಲ್ಲ. ಕಮಲೆ ಗಂಡಾದರೂ ಖಾಯಿಲೆ ಬಂದರೆ ಅವನು ರಾತ್ರಿಯೆಲ್ಲಾ ಅವಳ ಪಕ್ಕದಲ್ಲಿಯೇ ಕುಳಿತು ಅರೆದೆರವ ಕಣ್ಣಿನಲ್ಲಿಯೇ ಸೂರ್ಯನನ್ನು ಮೂಡಿಸುತ್ತಿದ್ದನು ಅವನ ಮುಖಚಹರೆಯಲ್ಲಿನ ವಿಷಾದ, ಹೃದಯದಲ್ಲಿನ ಸ್ನೇಹ-ಪ್ರೇಮಗಳು ಉಕ್ಕಿ ಘೇಘಿಸಿಕೊಂಡು ಹೊರಚಿಮ್ಮುವಂತೆ ಭಾಸವಾಗುತ್ತಿತ್ತು. ಸರಿ ಅವಳಿಗೆ ಖಾಯಿಲೆ ವಾಸಿಯಾಗಿ ಕೊಂಚ ಓಡಾಡತೊಡಗಿದಳೆಂದರೆ ಸಾಕು, ಎದುರಿಗೆ ಇದ್ದರೂ ಸಹ ಅವನು ಕಣ್ಣೆತ್ತಿ ನೋಡುತ್ತಿರಲಿಲ್ಲ. ಅವನು ಕೇವಲ ತನ್ನ ಕೆಲಸಕ್ಕಾಗಿ ಹೊರಟುಹೋಗುತ್ತಿದ್ದ. ಕಮಲಾ ಕೋಪಿಸಿಕೊಂಡು ಮತ್ತೆರಡು ದಿನ ಮಾತುಬಿಟ್ಟು ನೋಡಿದಳು. ಏನೂ ಪ್ರಯೋಜನವಾಗಲಿಲ್ಲ. ಕಾಶೀನಾಥನು ಹತ್ತಿರ ಬಂದವನು ಮತ್ತೆ ಹಿಂತಿರುಗಿದ. ಅವಳು ಬೇಡವೆನ್ನಲಿಲ್ಲ; ಅಳಲಿಲ್ಲ; ಮಾತನಾಡಲಿಲ್ಲ! ಇಷ್ಟಾದಮೇಲೂ ಕಮಲಾ ಮಾತನಾಡಿಸತೊಡಗಿದರೆ ಅವನು ಮುಗುಳುನಗೆಯಿಂದೊಡಗೂಡಿ ಮೊದಲಿನಂತೆಯೇ ಪ್ರಸನ್ನತೆಯಿಂದ ಮಾತನಾಡುತ್ತಿದ್ದನು. ಅವನೆಂದೂ ಕೋಪ ಪ್ರಕಟಮಾಡಲಿಲ್ಲ. ಎರಡು ದಿನದವರೆಗೆ ಮಾತನ್ನೇಕೆ ಬಿಟ್ಟಿದ್ದೆ? ಏಕೆ ಕೋಪಿಸಿಕೊಂಡಿದ್ದೆ? ಎಂದು ಕೂಡ ಅವಳನ್ನು ಕೇಳಲಿಲ್ಲ. ಕಮಲಾ ಕೆಲವು ದಿನಗಳ ನಂತರ ತನ್ನಲ್ಲಿ ತಾನೇ ವಿಚಾರಮಾಡಿಕೊಂಡಳು—ಅವರು ನನ್ನನ್ನು ಗಣನೆಗೆ ತಂದುಕೊಳ್ಳದಿದ್ದರೆ ನನಗೂ ಅವರನ್ನು ಗಣನೆಗೆ ತಂದುಕೊಳ್ಳದಿರುವುದು ಬರುತ್ತೆ. ಅವರು ಕಾಲಿನ ಕೆಳಗೆ ಹಾಕಿಕೊಂಡು ನನ್ನನ್ನು ಹೊಸಕಿ ಹಾಕುತ್ತಿದ್ದರೂ ಪಾದವೇ ಗತಿಯೆಂದು ಪಾದ ಹಿಡಿದು ಅವರ ಹಿಂದೆ ಹಿಂದೆಯೇ ತಿರುಗುವಷ್ಟು ನಾನೇನು ಪತಿಯನ್ನು ಪ್ರೀತಿಸ್ತುವುದಿಲ್ಲ. ನಾನು ಅವರನ್ನು ಪತಿಯಾಗಿ ಸ್ವೀಕರಿಸಿರುವುದೇ ಅವರಿಗೆ ದೊಡ್ಡ ಉಪಕಾರ

ಮಾಡಿದಂತೆ. ಪತಿಯಾದಾಕ್ಷಣಕ್ಕೆ ನನ್ನ ಪ್ರಾಣ ಅವರ ಪಾದಗಳಲ್ಲಿ ಬಂಧಿತವೆಂದು ತಿಳಿದು, ಬಂದೊಡನೆಯೇ ನಾನು ನಲಿಯುತ್ತಾ, ಮುಗುಳುನಗೆಯಿಂದ ಪ್ರೀತಿಯ ಮಾತುಗಳನ್ನು ಆಡಬೇಕೆಂದು ಅವರು ಖಂಡಿತ ತಿಳಿದುಕೊಳ್ಳಕೂಡದು. ನನ್ನ ಕೆಲಸ ಕಾರ್ಯಗಳ ಸಮಯದಲ್ಲಿ ಅವರು ನನ್ನ ಮುಂದೆ ಬಂದು ನಿಂತರೆ ನಾನೂ ಅವರನ್ನು ಕಣ್ಣೆತ್ತಿ ನೋಡುವುದಿಲ್ಲ— ಈ ವಿಚಾರಗಳನ್ನೆಲ್ಲ ತನ್ನ ಉದಾಸೀನ ಪತಿಗೆ ತಿಳಿಯಹೇಳಬೇಕೆಂದು ಕಮಲಾ ನಿಶ್ಚಯಿಸಿಕೊಂಡಳು.

ಕಮಲಾ ಯಾವಾಗಲಾದರೂ ನೌಕರ ಚಾಕರರನ್ನು ಬೈಯುತ್ತಿದ್ದಾಗ ದುರದೃಷ್ಟವಶಾತ್ ಏನಾದರೂ ಆ ಸಮಯದಲ್ಲಿ ಕಾಶೀನಾಥನ ಬಾಯಿಂದ ಮಾತು ಹೊರಬಿದ್ದದ್ದೇ ಆದರೆ ಅವಳು ಕೇಳಿಯೂ ಕೇಳದಂತೆ ಇರುತ್ತಿದ್ದಳು. ಮತ್ತು ಮೊದಲಿನಂತೆಯೇ ಬೈಗಳ ಸುರಿಮಳೆಗರೆಯುತ್ತಾ - ನನ್ನ ನೌಕರ, ಚಾಕರರು, ನನ್ನ ಮನೆ, ನನ್ನ ಇಷ್ಟ ಏನೋ ಅದೇ ಮಾಡುತ್ತೇನೆ. ಕರೆಸಿಕೊಳ್ಳದೆ ಮಧ್ಯಸ್ತಿಕೆಗೆ ಬರಲು ನೀವಾರು — ಎನ್ನುವಂತೆ ಹೊರಟು ಹೋಗುತ್ತಿದ್ದಳು.

ಆದರೆ ಇದಿಷ್ಟರಿಂದ ನಿಜವಾಗಿಯೂ ತೃಪ್ತಿಯಾಗುತ್ತದೆಯೇ? ಈ ರೀತಿಯಲ್ಲಿ ಚಪಲ ಪೂರ್ತಿಯಾಗುತ್ತದೆಯೇ? ಹೌದು — ಇದರಿಂದ ಕಾಶೀನಾಥನನ್ನು ಎಳ್ಳಷ್ಟಾದರೂ ಅಲುಗಿಸಲು ಸಾಧ್ಯವಾಗಿದ್ದಿದ್ದರೆ ತೃಪ್ತಿಯಾಗುತ್ತಿತ್ತು. ಯಾರೇನಾದರೂ ಮಾಡಲಿ, ಅವನು ಮಾತ್ರ ತನ್ನ ಪ್ರಶಾಂತ ಗಂಭೀರ ಚಹರೆಯಿಂದ ಸ್ಪಷ್ಟವಾಗಿ, —"ನಾನು ನನ್ನಷ್ಟಕ್ಕೆ ನಿಶ್ಚಲನಾಗಿದ್ದೇನೆ. ಮೇರುಪರ್ವತದ ಶಿಖರದಂತೆ ಕೊಂಚ ಕೂಡ ಅಲುಗಾಡಿಸುವ ಶಕ್ತಿ ನಿನ್ನಲ್ಲಿಲ್ಲ. ಬೇಕಾದಷ್ಟು ಬಿರುಗಾಳಿ, ಸುಂಟರಗಾಳಿಗಳನ್ನೆಬ್ಬಿಸು, ಬೇಕಾದಷ್ಟು ಅಡ್ಡದಾರಿಗಳನ್ನು ಹಿಡಿ. ನಿನ್ನಿಂದ ನನ್ನನ್ನು ಅಲುಗಾಡಿಸಲು ಸಾಧ್ಯವಿಲ್ಲ" ಎಂದು ತಿಳಿಯಹೇಳಿದನು.

ಒಳ್ಳೆಯದು! ಹಾಗಾದರೆ ಕಮಲಾ ಅವನನ್ನು ಪ್ರೀತಿಸುವುದಿಲ್ಲವೇ? ಪ್ರೀತಿಸುತ್ತಾಳೆ. ಆದರೆ ಆ ಪ್ರೀತಿ - ಪ್ರೇಮ ಅನಂತವಾದದ್ದಲ್ಲ; ಆಳವಾದದ್ದಲ್ಲ! ನೀವು ಇದನ್ನು ದಾಟಿಹೋಗಬೇಡಿ. ಹೋದರೆ ನಾನು ಸಹಿಸಲಾರೆ. ಆಗಲೂ ನಿಮ್ಮನ್ನು ಪ್ರೀತಿಸುವ ಸಂಭವವಿರಬಹುದು. ಆದರೆ ನಿಮ್ಮ ಸ್ಥಾನಗೌರವ ರಕ್ಷಣೆಮಾಡುವುದಿಲ್ಲ" ಎಂದು ಒಂದು ಗೆರೆ ಎಳೆದು ಅವಳೇ ಕಾಶೀನಾಥನಿಗೆ ಹೇಳಬೇಕೆಂದು ಇಷ್ಟಪಟ್ಟಳು.

ಒಂದು ದಿನ ಅವಳು ತನ್ನ ನೆಚ್ಚಿನ ವೃದ್ಧದಾಸಿಯಲ್ಲಿ ತನ್ನ ದುಃಖವನ್ನು ತೋಡಿಕೊಂಡಳು. "ಅಪ್ಪ, ನನ್ನನ್ನು ಒಂದು ಮೃಗದ ಕೈಯಲ್ಲಿ ಹಾಕಿಹೋಗಿದ್ದಾರೆ.

"ಅದು ಹೇಗೆ ತಾಯಿ ?"

"ಹೇಗೆಂದು ನನ್ನನ್ನು ಕೇಳುತ್ತೀಯಾ ?" ನೀವೆಲ್ಲ ಸೇರಿಕೊಂಡು ನನ್ನ ಕೈಕಾಲು ಕಟ್ಟಿ ಕೆರೆಯಲ್ಲೇಕೆ ಹಾಕಲಿಲ್ಲ ?"

"ಇಂತಹ ಮಾತನಾಡಬಾರದು ತಾಯಿ !"

"ಅದೇಕೆ ಆಡಬಾರದು. ನೀವೆಲ್ಲ ಮಾಡಿರುವ ಕೆಲಸವನ್ನು ನಾನು ಒಂದು ಸಲ ಕೂಡ ಬಾಯಲ್ಲಿ ಹೇಳಲಾರೆ."

"ಅಲ್ಲ ತಾಯಿ, ಅಲ್ಲ-ಹಾಗಲ್ಲ. ಅವರು ಬಹಳ ಒಳ್ಳೆಯವರು. ಆದರೆ ನಿಜ ಕೊಂಚ ಕೊಂಚ ಹುಚ್ಚಿನ ಸೋಂಕು ಇದೆ. ತಂದೆಯಲ್ಲೂ ಇತ್ತು. ಆದರಿಂದ ಅದೇ ಇವರಲ್ಲೂ ......"

"ಸಾಕು ಸುಮ್ಮನಿರು. ಹುಚ್ಚು ಅಂತ ಬಾಯಲ್ಲಿ ಹೇಳಬೇಡ. ತಂದೆ ಹುಚ್ಚಾದರೆ ಮಗನೂ ಹುಚ್ಚಾಗುವುದಿಲ್ಲ. ನಿಜವಾಗಿ ಹುಚ್ಚಿಲ್ಲ. ಮೈಮರೆತು ನನ್ನನ್ನು ಸತಾಯಿಸುತ್ತಾರೆ!"

ತನ್ನ ಪತಿಯು 'ಹುಚ್ಚನೆಂದು ಒಪ್ಪಿಕೊಳ್ಳಲು ಕಮಲಾ ಹೃದಯದಲ್ಲಿ ಪೆಟ್ಟು ತಾಕಿತು.

* * *

ಇಂದಿಗೆ ಮೂರು ದಿವಸವಾಯಿತು. ಕಾಶೀನಾಥನು ಪತ್ತೆಯಿಲ್ಲ. ಎರಡು ದಿನ ಕಮಲಾ ಎಲ್ಲೋ ಯಾವುದೋ ಜ್ಞಾನದಿಂದ ವಿಚಾರಿಸಲಿಲ್ಲ. ಆದರೆ ಮೂರನೆಯ ದಿನ ಅವಳು ಗಾಬರಿಗೊಂಡು ಹೊರಗಿನ ಕಾವಲುಗಾರನಿಗೆ ಹೇಳಿಕಳುಹಿಸಿ, "ರಾಯರು, ಎರಡು ದಿನದಿಂದ ಮನೆಗೆ ಬಂದಿಲ್ಲ. ನೀವು ಯಾರೂ ವಿಚಾರಿಸಲಿಲ್ಲ. ನೀವುಗಳಿರುವುದೇತಕ್ಕೆ?" ಎಂದಳು.

ಕಾವಲುಗಾರ ಯೋಚಿಸತೊಡಗಿದ—"ಇದೀಗ ಚೆನ್ನಾಯಿತು! ಯಾರೆಲ್ಲಿ ಹೋದರು, ಯಾರು ಬಂದರು, ಅಂತ ನಾವು ಹೇಗೆ ತಿಳಿದುಕೊಂಡಿರುವುದಕ್ಕೆ ಆಗುತ್ತೆ!" ಮೂರು ಸಾವಿರ ರೂಪಾಯಿ ತೆಗೆದುಕೊಂಡು ಹೋದನೆಂದು ಆಮೇಲೆ ಖಜಾಂಚಿಯಿಂದ ಗೊತ್ತಾಯಿತು. ಎಲ್ಲಿಗೆ ಹೋದ, ಯಾವಾಗ ಹಿಂತಿರುಗುತ್ತಾನೆ ಎಂಬುದೊಂದೂ ಯಾರೊಡನೆಯೂ ತಿಳಿಸಿರಲಿಲ್ಲ.

ಕಮಲಾ ಕೊಂಚ ಹೊತ್ತು ಹಣೆಯಮೇಲೆ ಕೈಹೊತ್ತು ಕುಳಿತಿದ್ದಳು. ಆಮೇಲೆ ತನ್ನ ತಂದೆಯ ವಕೀಲರನ್ನು ಕರೆಸಿ, "ನನ್ನ ಜಮೀನುದಾರಿಯ ಕೆಲಸಗಳನ್ನು ನಿಭಾಯಿಸುವ ಒಬ್ಬ ಯೋಗ್ಯನಾದ ಕೆಲಸಗಾರನನ್ನು ಒಂದು ವಾರದ ಒಳಗಾಗಿ ಕರೆದು ತನ್ನಿ. ಸಂಬಳ ಎಷ್ಟು ಕೇಳಿದರೂ ಕೊಡುತ್ತೇನೆ" ಎಂದು ಕಮಲಾ ಹೇಳಿದಳು.

—೮—

ಕಾಶೀನಾಥನು ಕಲ್ಕತ್ತೆಯನ್ನು ಸೇರಿದನು. ಬೆಳಗಿನಿಂದ ಸಂಜೆಯವರೆಗೂ ಮಳೆಯಲ್ಲಿ ನೆನೆದು, ಹರಿವ ಮಳೆನೀರು, ಕೆಸರು ಕೊಚ್ಚೆಗಳನ್ನು ತಟಾದು ತಟಾದು ಕಡೆಗೆ ಒಂದು ಸಣ್ಣ ಗಲ್ಲಿಯನ್ನು ಪ್ರವೇಶಿಸಿ ಅಲ್ಲಿಯ ಒಂದು ಸರ್ವಸಾಧಾರಣ ಪುಟ್ಟಮನೆ

ಯೊಳಗೆ ಹೋದನು. ಅವನ ಕೈಯಲ್ಲಿ ಎರಡು ಸೀಸೆ ಔಷಧಿ, ಒಂದು ಬಿಸ್ಕತ್ ಡಬ್ಬ ಮತ್ತು ಹಣ್ಣುಹಂಪಲುಗಳ ಒಂದು ಬುಟ್ಟಿ ಇದ್ದವು.

ಆ ಮನೆಯ ಒಂದು ಕೊಠಡಿಯಲ್ಲಿ ಒಬ್ಬ ರೋಗಿಯು ಮಂಚದ ಮೇಲೆ ಮಲಗಿದ್ದನು. ಅವನ ತಲೆಯ ಬಳಿ ಒಬ್ಬ ಹೆಂಗಸು ಕುಳಿತು ರೋಗಿಯ ಹಣೆಯ ಮೇಲೆ ಮೆಲ್ಲಗೆ ಕೈಯಾಡಿಸುತ್ತಿದ್ದಳು. ಕಾಶೀನಾಥನು ಒಳಗೆ ಪ್ರವೇಶಿಸುತ್ತಿದ್ದ ಹಾಗೆಯೇ ಅವಳು, "ಅಯ್ಯೋ, ಇಷ್ಟೊಂದು ಮಳೆಯಲ್ಲಿ ನೆನೆದುಕೊಂಡು ಏಕೆ ಬಂದೆ? ಎಲ್ಲಿಯಾದರೂ ನಿಂತುಕೊಳ್ಳಬಾರದಾಗಿತ್ತೆ?" ಎಂದಳು.

"ಹೇಗೆ ಸಾಧ್ಯ ತಂಗಿ. ಬೆಳಗಿನಿಂದ ಈಗಿನವರೆಗೂ ಎಲ್ಲಿಯಾದರೂ ನಿಂತುಬಿಟ್ಟಿದ್ದರೆ ಎಷ್ಟು ನಷ್ಟವಾಗುತ್ತಿತ್ತೋ ಅಷ್ಟು ನಷ್ಟ ನಾನು ನೆನೆದದ್ದರಿಂದ ಆಗಲಿಲ್ಲ"

ಬಿಂದುವಾಸಿನಿಗೆ ಕಾಶೀನಾಥನ ಮಾತು ಸುಳ್ಳಲ್ಲವೆನ್ನಿಸಿತು. ಆದರಿಂದಲೇ ಸುಮ್ಮನಾದಳು.

ಈಚಿನ ಕೆಲವು ವರ್ಷಗಳಿಂದ ಬಿಂದು ಅನುಭವಿಸುತ್ತಿರುವ ದುಃಖ ಅವಳೊಬ್ಬಳಿಗೇ ಗೊತ್ತು. ಅವಳನ್ನು ಅವಳ ತಾಯಿಯ ಮನೆಯಲ್ಲಿ ನೋಡಲಾಗಿತ್ತು. ಪುನಃ ಈಚೆಗೆ ನೋಡಿಲ್ಲ. ಈ ಸಮಯದಲ್ಲಿ ಅವಳ ವಿಚಾರ ಕೊಂಚ ತಿಳಿಯುವುದು ಒಳ್ಳೆಯದು. ಅಂದು ಅವಳು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡು ಜಮೀನುದಾರನ ಮಗಳನ್ನು-ತನ್ನ ಕಾಶೀಭಾವಯ್ಯನ ಮಡದಿಯನ್ನು - ನೋಡಲು ಹೋಗಬೇಕೆಂದು ಹಾತೊರೆದಿದ್ದರೂ ಹೋಗಲಾಗಲಿಲ್ಲ ಆ ಮಾರನೆಯ ದಿವಸವೇ ಅವಳ ಮಾವ ಗೋಪಾಲಬಾಬುವಿಗೆ ವಿಪರೀತ ಖಾಯಿಲೆಯೆಂಬ ಸಮಾಚಾರ ತಿಳಿದು, ಆ ದಿವಸವೇ ಮಾವನ ಮನೆಗೆ ಹೋಗಿಬಿಡಬೇಕಾಗಿ ಬಂದಿತು. ಬಂದು ನೋಡಲಾಗಿ ಮಾವನಿಗೆ ತುಂಬ ವಿಷಮ ಖಾಯಿಲೆಯಾಗಿತ್ತು. ಎಲ್ಲರೂ ಸೇರಿ ತಮ್ಮ ಕೈಲಾದಷ್ಟು ಸೇವೆ ಶುಶ್ರೂಷೆ ಮಾಡಿದರು; ಔಷಧೋಪಚಾರ ನಡೆಸಿದರು. ಆದರೆ ಯಾವುದರಿಂದಲೂ ಗೋಪಾಲಬಾಬುವನ್ನು ಉಳಿಸಲು ಸಾಧ್ಯವಾಗಲಿಲ್ಲ. ಖಾಯಿಲೆಯು ತೀರಿ ಮಿಂಚಿಹೋಯಿತೆಂದು ತಿಳಿದಾಗ ಗೋಪಾಲಬಾಬುವು, "ಚಿಕ್ಕ ಸೊಸೆಯನ್ನು ನನ್ನ ಬಳಿ ಕಳುಹಿಸಿ - ಅವಳನ್ನೊಮ್ಮೆ ನೋಡಿ ಬಿಡುತ್ತೇನೆ" ಎಂದನು.

ಆ ಚಿಕ್ಕಸೊಸೆಯೇ ನಮ್ಮ ಈ ಬಿಂದುವಾಸಿನಿ. ಸಾಯುವ ಒಂದೆರಡು ದಿನ ಮುಂಚೆ ಗೋಪಾಲಬಾಬು, "ತೆಗೆದುಕೋ ಮಗು, ಇದು ಬೀಗದ ಕೈ. ಪೆಟ್ಟಿಗೆಯಲ್ಲಿ ಉಳಿದಿರುವುದನ್ನೆಲ್ಲ ನಿನಗೇ ಕೊಡುತ್ತೇನೆ" ಎಂದು ಬಿಂದುವಿಗೆ ಹೇಳಿದನು.

ಬಿಂದುವಾಸಿನಿಯು ಕೈಚಾಚಿ ಬೀಗದ ಕೈಯನ್ನು ತೆಗೆದುಕೊಂಡಳು. ಇತರ ಸೊಸೆಯರು ಮುದುಕ ಸಾಯುವಾಗ ಆಸ್ತಿಯೆಲ್ಲವನ್ನೂ ಚಿಕ್ಕಸೊಸೆಗೆ ಕೊಟ್ಟುಹೋದರೆಂದು ತಿಳಿದರು! ಬೀಗದ ಕೈಯನ್ನು ಚಿಕ್ಕ ಸೊಸೆಗೆ ಕೊಟ್ಟಿದ್ದರ ಜೊತೆಗೆ ಗೋಪಾಲಬಾಬುವು ಒಂದು ದಿನ ತನ್ನ ನಾಲ್ಕು ಮಕ್ಕಳನ್ನು ಕರೆಸಿ, "ಇಲ್ಲಿ ನೋಡಿ, ನಿಮ್ಮಗಳಲ್ಲಿ

ಅಣ್ಣ ತಮ್ಮಂದಿರಲ್ಲಿ ಕೊಂಚವಾದರೂ ಹೊಂದಾಣಿಕೆಯಿಲ್ಲ. ಅಲ್ಲದೆ ನಿಮ್ಮ ತಾಯಿಯೂ ಬದುಕಿಲ್ಲ. ಆದುದರಿಂದ ನಾನು ಸತ್ತಮೇಲೆ ನೀವುಗಳು ಒಟ್ಟು ಸಂಸಾರವನ್ನು ಖಂಡಿತ ಮಾಡಬೇಡಿ. ಸುಳ್ಳು ಜಗಳ ಕದನ ಆಗುವುದಕ್ಕೆ ಬೇಡ, ಅಂದರೆ ಇನ್ನೂ ಸ್ವಲ್ಪ ಮಾಧುರ್ಯ ಇರುವಾಗಲೇ ಬೇರೆ ಬೇರೆಯಾಗಿದ್ದುಬಿಟ್ಟರೆ ನಿಮಗೂ ಚೆನ್ನ ನೋಡುವವರಿಗೂ ಚೆನ್ನ. ನಾನು ಬಿಟ್ಟುಹೋಗಿರುವ ಸ್ವಲ್ಪದರ ಜೊತೆಗೆ ನೀವು ಸ್ವಲ್ಪ ಸ್ವಲ್ಪ ಸ್ವಂತ ಸಂಪಾದನೆಮಾಡಿಕೊಂಡರೆ ಸುಖವಾಗಿ ನಿಮ್ಮ ಸಂಸಾರ ಸಾಗುತ್ತೆ" ಎಂದು ಹೇಳಿದನು.

ತಂದೆಯ ಮರಣಾನಂತರ ಅಣ್ಣತಮ್ಮಂದಿರು ಬೇರೆ ಬೇರೆಯಾಗಿ ಹೋದರು. ಆಮೇಲೆ ಬಿಂದುವು ಒಂದು ದಿನ ತನ್ನ ಮಾವನವರು ಕೊಟ್ಟ ಪೆಟ್ಟಿಗೆಯನ್ನು ತೆಗೆದು ನೋಡಲಾಗಿ ಅದರಲ್ಲಿ, ಒಂದು 'ರಾಮಾಯಣ' ಒಂದು 'ಮಹಾಭಾರತ' ಗ್ರಂಥಗಳ ವಿನಹ ಬೇರೇನೂ ಇರಲಿಲ್ಲ! ಮನದೊಳಗಿನ ಆಸೆ ನಿರಾಸೆಯಾದರೂ ಬಿಂದು ಸ್ವರ್ಗವಾಸಿ ಮಾವನ ಆ ದಾನವನ್ನು ತಲೆಗೊತ್ತಿಕೊಂಡಳು. ಅವಳ ಬಾಯಿಂದ ಅಸ್ಫುಟವಾಗಿ, "ಇದು ಅವರ ಪ್ರೇಮದಾನ-ಇದೇ ನಮ್ಮ ಭಾಗಕ್ಕೆ ರತ್ನ!" ಎಂದು ಹೊರಬಿತ್ತು.

ಆಮೇಲಿನ ಕೆಲವು ದಿನಗಳು ಮಾತ್ರ ಬಿಂದುವಾಸಿನಿಗೆ ಸುಖದಾಯಕವಾಗಿತ್ತು. ಆಮೇಲೆ ವಿಪತ್ತುಗಳ ಸುರಿಮಳೆಗಾರಂಭವಾಯಿತು. ಅವಳ ಗಂಡ ಯೋಗೇಶಬಾಬು ಹಾಸಿಗೆ ಹಿಡಿದನು. ಅವಳು ತನ್ನ ಶರೀರವನ್ನು ಲೆಕ್ಕಿಸದೆ ಪೂರ್ಣಶ್ರದ್ಧೆಯಿಂದ ಪತಿ ಸೇವಾ ಶುಶ್ರೂಷೆಗಳನ್ನು ಮಾಡಿದಳು. ಭೂಮಿ ಕಾಣಿಯನ್ನು ಆಧಾರಮಾಡಿ ಔಷಧೋಪಚಾರ ಮಾಡಿಸಿದಳು. ಆದರೆ ಯಾವುದರಿಂದಲೂ ಅವನಿಗೆ ಉತ್ತಮವಾಗಲಿಲ್ಲ. ಊರಿನಲ್ಲಿ ಅಕ್ಕಪಕ್ಕದವರು ಕಲ್ಕತ್ತೆಗೆ ಕರೆದುಕೊಂಡು ಹೋಗಿ ಔಷಧಿ ಕೊಡಿಸಿದರೆ ಒಳ್ಳೆಯದೆಂಬ ಅಭಿಪ್ರಾಯದ ಸಲಹೆಕೊಟ್ಟರು; ಆಗ ಬಿಂದು, ತನ್ನ ಮೈಮೇಲಿದ್ದ ಕೆಲವೇ ಒಡವೆಗಳನ್ನೂ ಮಾರಿ ಪತಿಯನ್ನು ಕಲ್ಕತ್ತೆಗೆ ಕರೆದೊಯ್ದಳು. ಅಲ್ಲೂ ಸಹ ಅನೇಕ ತರಹ ಔಷಧೋಪಚಾರವಾಯಿತು. ಇನ್ನೂ ಉಳಿದಿದ್ದ ಕೊಂಚ ಭೂಮಿಯನ್ನು ಆಧಾರಮಾಡಬೇಕಾಯಿತು. ಆದರೂ ಹಾಯಿಲೆ ಕೊಂಚವಾದರೂ ಇಳಿಯಲಿಲ್ಲ. ತನ್ನ ಹಿರಿಯ ಭಾವನಿಗೆ ಎಲ್ಲ ವಿಚಾರಗಳನ್ನೂ ಬಿಂದು ಬರೆದು ಕಳುಹಿಸಿದಳು. ಆದರೆ ಅವನಿಂದ ಯಾವ ಸಹಾಯವೂ ಆಗಲಿಲ್ಲವಷ್ಟೇ ಅಲ್ಲ ಆ ಕಾಗದಕ್ಕೆ ಒಂದು ಉತ್ತರವಾದರೂ ಬರಲಿಲ್ಲ. ಆಮೇಲೆ ಬಿಂದು ಇನ್ನಿಬ್ಬರು ಭಾವಂದಿರುಗಳಿಗೂ ಬರೆದಳು. ಅವರುಗಳೂ ತಮ್ಮ ಹಿರಿಯಣ್ಣನ ಆದರ್ಶನವನ್ನೇ ಮುಂದಿಟ್ಟುಕೊಂಡು ಮೌನಧಾರಣೆ ಮಾಡಿದರು. ಇನ್ನು ಉಪವಾಸದಿಂದ ಬಿದ್ದಿರಬೇಕು ಇಲ್ಲದಿದ್ದರೆ ವಿಷನುಂಗಿ ಸಾಯಬೇಕೆಂದು ಬಿಂದು ತಿಳಿದುಕೊಂಡಳು.

ಹೆಂಡತಿಯ ಮುಖಚಹರೆಯನ್ನು ನೋಡಿದೊಡನೆಯೇ ಯೋಗೇಶಬಾಬು ಸಮಸ್ತ ವಿಚಾರಗಳನ್ನೂ ಊಹಿಸಿಬಿಡುತ್ತಿದ್ದನು. ಒಂದು ದಿನ ಅವನು ಬಿಂದುವನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು ಪ್ರೀತಿಯಿಂದ ಅವಳ ಕೈಯನ್ನು ತನ್ನ ಕೈಯಲ್ಲಿಟ್ಟುಕೊಂಡು, "ಬಿಂದು,

ನನ್ನನ್ನು ಊರಿಗೆ ಕರೆದುಕೊಂಡು ಹೋಗಿ ಬಿಡು. ಸಾಯುವದಿದ್ದರೆ ಅಲ್ಲೇ ಸಾಯೋಣ. ಇಲ್ಲಿ ಸತ್ತರೆ ಸಾಗಿಸುವವರು ಸಹ ಸಿಗುವುದಿಲ್ಲ" ಎಂದನು.

ಇದನ್ನು ಕೇಳಿದ ಮೇಲಂತೂ ನಿಜವಾಗಿಯೂ ಬಿಂದುವಿಗೆ ಸಾಯಲೇ ಬೇಕೆನ್ನಿಸಿತು. ಬೇರೆ ಉಪಾಯವಾದರೂ ಏನು? ಊರಿಗೆ ಪತಿಯನ್ನು ಕರೆದೊಯ್ಯಲು ಸಾಧ್ಯವಿರಲಿಲ್ಲ. ಪತಿಯನ್ನು ಆ ಸ್ಥಿತಿಯಲ್ಲಿ ಬಿಟ್ಟು ತಾನು ಸಾಯುವುದಾದರೂ ಹೇಗೆ? ಹಾಗೆ ಅವಳು ಸಾಯಲೇ ಬೇಕಾದರೆ ನಾಚಿಕೆ, ಲಜ್ಜೆಯಿಂದೇನು ಪ್ರಯೋಜನ? ಬಹಳ ಹೊತ್ತು ಅವಳು ಯೋಚಿಸಿದಳು. ಕಡೆಗೆ ನಾಚಿಕೆ, ಲಜ್ಜೆಯಿಂದ ಪ್ರಯೋಜನವಿಲ್ಲವೆಂಬು, ಅವನ್ನೂ ದೂರ ತಳ್ಳಿ, ಅವಳು ಕಾಶೀನಾಥನಿಗೆ ಎಲ್ಲ ಸಮಾಚಾರಗಳನ್ನೂ ಕಾಗದ ಬರೆದು ತಿಳಿಸಿದಳು ಮುಂದೆ ಗೊತ್ತೇ ಇದೆ.

ಬರುವಾಗ ಕಾಶೀನಾಥನು ಬೇಕಾದಷ್ಟು ಹಣ ತಂದಿದ್ದ. ಆ ಹಣದಿಂದ, ಕಲ್ಕತ್ತೆಯ ಅತ್ಯುತ್ತಮ ಡಾಕ್ಟರುಗಳಿಂದ ಔಷಧೋಪಚಾರಮಾಡಿಸಿದ. ಕೊಂಚ ಗುಣ ಮುಖವಾದಮೇಲೆ ಅವರುಗಳು, "ಇನ್ನು ಹವಾ ಬದಲಾಯಿಸಬೇಕು. ಹಾಗೆ ಬದಲಾಯಿಸದ ವಿನಹ ಸಂಪೂರ್ಣ ಗುಣವಾಗುವುದಿಲ್ಲ" ಎಂದು ಸಲಹೆಯಿತ್ತರು. ಕಾಶೀನಾಥನು ಎಲ್ಲರನ್ನೂ ಕರೆದುಕೊಂಡು ವೈದ್ಯನಾಥಕ್ಕೆ ಹೋದ. ಅಲ್ಲೆರಡು ತಿಂಗಳಿದ್ದರು. ಯೋಗೇಶಬಾಬುವು ಸಂಪೂರ್ಣ ಗುಣಹೊಂದಿದನು—ಉಳಿದುಕೊಂಡನು. ಆದರೂ ಅಲ್ಲಿಂದ ಊರಿಗೆ ಹಿಂತಿರುಗಲು ಇನ್ನೂ ವಾಯಿದೆ ಇತ್ತು. ಅದಕ್ಕೆ ಅವರನ್ನು ಅಲ್ಲಿಯೇ ಬಿಟ್ಟು ಕಾಶೀನಾಥನು ತನ್ನೂರಿಗೆ ಹಿಂತಿರುಗಿ ಬಂದನು.

* * *

ಬೆಳಗ್ಗೆ ಕಮಲೆಯೊಡನೆ ಭೇಟಿಯಾಗುತ್ತಲೇ ಅವಳು, "ಯಾವಾಗ ಬಂದಿರಿ?" ಎಂದು ಕೇಳಿದಳು.

"ರಾತ್ರಿ"

ಕಮಲಾ ತನ್ನ ಕೆಲಸಕ್ಕೆ ಹೊರಟು ಹೋದಳು. ಕಾಶೀನಾಥನು ಕಛೇರಿ ಕಡೆ ಹೊರಟನು. ಬಹಳ ದಿನಗಳನಂತರ ಇದ್ದಕ್ಕಿದ್ದ ಹಾಗೆಯೇ ಯಜಮಾನರನ್ನು ನೋಡಿ ಕೆಲಸಗಾರರೆಲ್ಲ ಒಮ್ಮೆಲೇ ಎದ್ದುನಿಂತರು. ಕೇವಲ, ಒಬ್ಬ ಪಾಶ್ಚಿಮಾತ್ಯ ಉಡುಪು ಧರಿಸಿದ್ದ ಯುವಕನು ಮಾತ್ರ ತನ್ನ ಕೆಲಸದಲ್ಲಿ ಮಗ್ನನಾಗಿ ಕುರ್ಚಿಯ ಮೇಲೆ ಕುಳಿತಿದ್ದನು. ಅಲ್ಲಿನ ಕೆಲಸಗಾರರೆಲ್ಲರೂ ಒಟ್ಟಿಗೆ ಒಬ್ಬ ಆಗಂತುಕನಿಗೆ ತೋರ್ಪಡಿಸಿದ ಗೌರವವು ಈ ಹೊಸ ರಾಯನಿಗೆ ಗೋಚರವಾಗಿಲ್ಲದಿರಬಹುದು ಕಾಶೀನಾಥನು ತನ್ನ ಕೈಯಿಂದ ಒಂದು ಆರಾಮ ಕುರ್ಚಿಯನ್ನು ಎಳೆದುಕೊಂಡು ಅದರಮೇಲೆ ಕುಳಿತ. ಹೊಸದಾಗಿ ಮ್ಯಾನೇಜರ್ ಆಗಿ ಬಂದಿರುವ ಆ ರಾಯನ ಹೆಸರು ವಿಜಯಕಿಶೋರದಾಸ. ಅವನು ಕಲ್ಕತ್ತಾ ವಿಶ್ವವಿದ್ಯಾಲಯದ ಪಟ್ಟಗಳಿಸಿಕೊಂಡಿದ್ದನು. ಅಲ್ಲದೆ ಉತ್ತಮ ಕಾರ್ಯದಕ್ಷನೂ ಹೌದು! ಅದರಿಂದಲೇ ವಕೀಲ ವಿನೋದಬಾಬು ಅವನನ್ನು ಮ್ಯಾನೇ

ಜರ್ ಪಟ್ಟಕ್ಕೇರಿಸಿದ್ದನು. ಆ ಮ್ಯಾನೇಜರನು ಬಹಳ ಹೊತ್ತಾದಮೇಲೆ ಕಾಶೀನಾಥನ ಕಡೆ ನೋಡಿ, "ತಾವು ಯಾವುದಾದರೂ ಕೆಲಸದ ನಿಮಿತ್ತ ಬಂದಿದ್ದೀರೇನೋ ?" ಎಂದನು.

"ಇಲ್ಲ ಕೆಲಸವೇನೂ ಇಲ್ಲ. ಇಲ್ಲಿನ ಕೆಲಸ ಕಾರ್ಯಗಳನ್ನು ನೋಡಿಕೊಂಡು ಹೋಗಲು ಬಂದಿದ್ದೇನೆ."

ಆಗ ಮುಖ್ಯ ಗುಮಾಸ್ತನು ಎದ್ದು, "ಧಣಿಗಳು - ನಮ್ಮ ಜಮೀನುದಾರರ ಅಳಿಯಂದಿರು" ಎಂದನು.

ಆಗ ವಿಜಯಬಾಬು ಎದ್ದು ತಾನೂ ಗೌರವ ಪ್ರದರ್ಶನಮಾಡಿದನು. ಅಷ್ಟರಲ್ಲಿ ಒಬ್ಬ ನೌಕರನು ಬಂದು ವಿಜಯಬಾಬುವಿನೊಡನೆ, "ಒಳಗೆ ನಿಮ್ಮನ್ನು ಯಜಮಾನಮ್ಮನವರು ಬರಹೇಳುತ್ತಾರೆ" ಎಂದನು.

ವಿಜಯಬಾಬು ಹೊರಟು ಹೋದಮೇಲೆ ಕಾಶೀನಾಥನು ಮುಖ್ಯ ಗುಮಾಸ್ತನನ್ನು "ಈತನಾರು ?" ಎಂದು ಕೇಳಿದನು.

"ಹೊಸ ಮ್ಯಾನೇಜರ್ !"

"ಯಾರು ಇಟ್ಟರು ?"

"ಅಮ್ಮಾ ಅವರು"

"ಏತಕ್ಕೆ ?"

"ಕೆಲಸಕಾರ್ಯ ಸರಿಯಾಗಿ ಆಗುತ್ತಿರಲಿಲ್ಲ ಅಂತ ಕಾಣುತ್ತೆ. ಅದಕ್ಕೆ"

"ಈಗೆಲ್ಲಿಗೆ ಹೋದ"

"ಒಳಗೆ-ಕೊಠಡಿಗೆ"

ಕಾಶೀನಾಥನು ಮುಂದೇನನ್ನೂ ಕೇಳದೆ ಒಳಕ್ಕೆ ಹೊರಟುಹೋದನು. ಕೊಠಡಿಯ ಪರದೆಯ ಹೊರಭಾಗದಲ್ಲಿ ವಿಜಯಬಾಬು ನಿಂತಿದ್ದುದನ್ನು ಅವನು ನೋಡಿದನು. ಪರದೆಯ ಒಳಗಿನಿಂದ ಯಾರೋ ಮೃದುಸ್ವರದಲ್ಲಿ ಮಾತನಾಡುತ್ತಿರುವುದನ್ನು ಕೇಳಿದನು. ಯಾರು ಮಾತನಾಡುತ್ತಿರುವರೆಂಬುದೂ ಕಾಶೀನಾಥನಿಗೆ ಗೊತ್ತಾಗಿಹೋಯಿತು. ಆದರೆ ಅವನು ಯಾವ ಮಾತನ್ನೂ ಆಡದೆ, ಏನೂ ವಿಚಾರಿಸದೆ, ಅತ್ತ ಕಣ್ಣೆತ್ತಿ ಸಹ ನೋಡದೆ ತನ್ನ ಪಾಡಿಗೆ ತಾನು ಹೊರಟು ಹೋದನು. ಮಧ್ಯಾಹ್ನ ಪುನಃ ಅವನಿಗೆ ಕಮಲಾ ಭೇಟಿಯಾಯಿತು. ಕಮಲಾ ಗಂಭೀರ ಮುಖಮುದ್ರೆಯಿಂದ, "ಆರೋಗ್ಯವಾಗಿದ್ದೀರಿ ತಾನೆ ?" ಎಂದು ಕೇಳಿದಳು.

ಕಾಶೀನಾಥನೂ ಅದೇ ರೀತಿಯಲ್ಲಿಯೇ, "ಹು, ಇದ್ದೇನೆ" ಎಂದು ಉತ್ತರ ಕೊಟ್ಟನು.

ಕಮಲಾ ಮತ್ತೇನನ್ನೂ ಹೇಳದೆ ಕೇಳದೆ ಹೊರಟು ಹೋದಳು. ನಿಂತು ಮಾತನಾಡುವುದಕ್ಕೆ ಹರಟೆ ಕೊಚ್ಚುವುದಕ್ಕೆ ಅವಳಿಗೀಗ ಪುರಸತ್ತಿಲ್ಲ. ಸಾವಿರಾರು ಕೆಲಸಗಳು

ಬಿದ್ದಿರುತ್ತವೆ. ಜಮೀನುದಾರಿಯ ಸಮಸ್ತ ಕಾರ್ಯಭಾರಗಳ ನಿರ್ವಹಣೆಯನ್ನು ತಾನೇ ವಹಿಸಿಕೊಂಡಮೇಲೆ ಅವಳಿಗೆ ಉಸಿರಾಡಲು ಸಹ ಅವಕಾಶ ದೊರೆಯುತ್ತಿರಲಿಲ್ಲ.

ಒಂದು ದಿನ ಬೆಳಗ್ಗೆ ಕಾಶೀನಾಥನು ಮ್ಯಾನೇಜರನ್ನು ಬರಹೇಳಿ ಕಳುಹಿಸಿದನು. ಆ ಮ್ಯಾನೇಜರರು ನೌಕರನೊಡನೆ, "ಈಗ ಪುರಸತ್ತಿಲ್ಲ. ಪುರಸತ್ತು ಆಗುತ್ತಲೂ ಬರುತ್ತೇನೆ" ಎಂದು ಹೇಳಿ ಕಳುಹಿಸಿದನು. ಆಗ ಸ್ವತಃ ಕಾಶೀನಾಥನೇ ಕಛೇರಿಗೆ ಹೋಗಿ ವಿಜಯಬಾಬುವನ್ನು ಬೇರೆ ಕರೆದು, "ನಿಮಗೆ ಪುರಸತ್ತು ಇರಲಿಲ್ಲವಾದ್ದರಿಂದ ನಾನೇ ಬಂದೆ. ನನಗೆ ಈಗ ಐದುನೂರು ರೂಪಾಯಿ ಬೇಕು ಪುರಸತ್ತು ಆದೊಡನೆಯೇ ಮೇಲಕ್ಕೆ ಕಳುಹಿಸಿಬಿಡಿ" ಎಂದನು.

"ಏತಕ್ಕೆ ಬೇಕು ?"

"ಅದನ್ನು ತಿಳಿಯುವ ಅವಶ್ಯಕತೆ ನಿಮಗಿಲ್ಲ."

"ನಾನು ತಿಳಿಯಬೇಕಾದದ್ದಿಲ್ಲ ಅಂತ ಒಪ್ಪಿಕೊಂಡೆ. ಆದರೆ ಮಾಲೀಕರ ಅಪ್ಪಣೆ ಇಲ್ಲದೆ ನಾನು ಹೇಗೆ ಕೊಡಬಲ್ಲೆ ?"

ವಿಚಾರವೇ ಬೇರೆಯಾಗಿ ಹೋಗಿದೆಯೆಂದು ಕಾಶೀನಾಥನಿಗೆ ಗೊತ್ತಾಯಿತು. "ನಾನು ಹೇಳುತ್ತಿರುವುದೇ ಸಾಕು ಅಂತ ಕಾಣುತ್ತೆ. ಬೇರೆಯವರ ಅಪ್ಪಣೆಯೂ ಆವಶ್ಯಕತೆಯೂ ಇದೆಯೇನು ?"

ವಿಜಯಬಾಬು ಧೃಢತೆಯಿಂದ, "ಹೌದು, ಇದೆ ! ಯಾರಂದರವರಿಗೆ, ಯಾವುದಂದರದಕ್ಕೆ ರೂಪಾಯಿ ಕೊಡುವುದಕ್ಕೆ ಅಡ್ಡಿಯಿದೆ" ಎಂದನು

ಕಾಶೀನಾಥನು ಕಮಲೆಯ ಭೇಟಿಮಾಡಿ, "ನೀನು ನಿನ್ನ ಹೊಸ ಮನುಷ್ಯನನ್ನು ಕಳುಹಿಸಿಬಿಡು" ಎಂದನು.

"ಯಾರನ್ನು ?"

"ನಿನ್ನ ಹೊಸ ಮ್ಯಾನೇಜರ್ ಆಗಿ ಬಂದಿದ್ದಾನಲ್ಲಾ !"

"ಏಕೆ ? ಆತನೇನು ತಪ್ಪುಮಾಡಿದ ?"

"ನನ್ನೊಡನೆ ಸರಿಯಾಗಿ ವರ್ತಿಸಲಿಲ್ಲ."

"ಏನು ಮಾಡಿದ ?"

"ನಾನು ಹೇಳಿಕಳುಹಿಸಿದರೆ ಸ್ವತಃ ಬರದೆ ಜವಾನನೊಂದಿಗೆ, 'ಈಗ ನನಗೆ ಪುರಸತ್ತಿಲ್ಲ. ಆದಾಗ ಬರುತ್ತೇನೆ ಎಂದು ಹೇಳಿಕಳುಹಿಸಿದ."

ಕಮಲಾ ನಗುತ್ತಾ, "ಪುರಸತ್ತು ಇಲ್ಲದೆ ಇರಬಹುದು. ಪುರಸತ್ತು ಇಲ್ಲದೆ ಆತ ಹೇಗೆ ತಾನೆ ಬರುತ್ತಾನೆ ?" ಎಂದಳು.

ಕಾಶೀನಾಥನು ಹೆಂಡತಿಯ ಮುಖದ ಕಡೆ ನೋಡುತ್ತಾ ಹೇಳಿದ—"ಒಪ್ಪಿದೆ. ಪುರಸತ್ತು ಇರಲಿಲ್ಲ ಆದ್ದರಿಂದ ಬರಲಾಗಲಿಲ್ಲ. ಆದರೆ ನಾನೇ ಸ್ವತಃ ಹೋಗಿ ರೂಪಾಯಿ ಕೇಳಿದರೆ 'ಮಾಲೀಕರ ಅಪ್ಪಣೆ ಇಲ್ಲದೆ ಕೊಡಲಾರೆ' ಎಂದ."

ಕಮಲಾ ಇನ್ನೂ ಹೆಚ್ಚಾಗಿ ನಗುತ್ತಾ, "ಎಷ್ಟು ರೂಪಾಯಿ ಕೇಳಿದಿರಿ ?" ಎಂದೂ ಕೇಳಿದಳು.

"ಐನೂರು"

"ಕೊಡಲಿಲ್ಲವೇ ?"

"ಇಲ್ಲ. ನನಗೆ ದುಡ್ಡು ಕೊಡಕೂಡದೆಂದು ನೀನು ಹೇಳಿದ್ದೀಯೋ ಏನು ?"

"ಹೌದು ಈರೀತಿ ರೂಪಾಯಿ ಹಾಳುಮಾಡುವುದು ನನ್ನ ಮನಸ್ಸಿಗೆ ಒಪ್ಪುವುದಿಲ್ಲ."

ಕಾಶೀನಾಥನಿಗೆ—ಕಲ್ಲಿನಂತಹ ಕಾಶೀನಾಥನಿಗೆ ಸಹ ಒಳಗೆ ಸಹಿಸಲಸಾಧ್ಯವಾದ ದುಃಖವಾಯಿತು. ಇಂತಹ ವ್ಯವಹಾರವನ್ನಾಗಲಿ, ಈ ಬಗೆಯ ಮಾತುಗಳನ್ನಾಗಲಿ ಅವನು ಹಿಂದೇದೂ ನೋಡಿಯೂ ಇರಲಿಲ್ಲ; ಕೇಳಿಯೂ ಇರಲಿಲ್ಲ. ತುಂಬ ದುಃಖಿತನಾದ ಅವನು, "ನನಗೆ ಕೊಡುವುದೆಂದರೆ ಹಾಳುಮಾಡುವುದೇ ?" ಎಂದನು.

"ಹೇಗಾದರೂ ಸರಿ, ಸಿಕ್ಕಿದ್ದಕ್ಕೆಲ್ಲ ಖರ್ಚು ಮಾಡುವುದೆಲ್ಲ ಹಾಳುಮಾಡುವುದೆಂದೇ!"

"ನಿಜವಾಗಿ ಅವಶ್ಯಕವಾಗಿದ್ದಾಗ ಖರ್ಚುಮಾಡುವುದು, ಎಂದಿಗೂ ಹಾಳು ಮಾಡುವುದಲ್ಲ."

"ಅದೆಂತಹ ಅವಶ್ಯಕತೆ ?"

"ಯಾರಿಗೋ ಕೊಡಬೇಕಾಗಿದೆ."

"ಕೊಡಬೇಕು ನಿಜ. ಆದರೆ ನಿಮಗೆ ಸಂಪಾದನೆಯಿಲ್ಲ ? ನಿಮ್ಮಲ್ಲಿ ಇದ್ದರೆ ಹೋಗಿ ಕೊಡಿ, ನಾನೇನು ಬೇಡವೆನ್ನುವುದಿಲ್ಲವಲ್ಲ."

ಕಾಶೀನಾಥನು ಸುಮ್ಮನಾದ. ಈ ಮಾತುಗಳು ಅವನ ಕಿವಿಗಳನ್ನು ಕಾದ ಸಲಾಕಿಗಳಂತೆ ಪ್ರವೇಶಿಸಿದವು. ಹೊರಗೆ ಬಂದು ಅವನು ತನ್ನ ಗಡಿಯಾರ, ಉಂಗರ ಮೊದಲಾದವುಗಳನ್ನು ಮಾರಿ ಐನೂರು ರೂಪಾಯನ್ನು ವೈದ್ಯನಾಥಕ್ಕೆ ಕಳುಹಿಸಿದನು. ಅಲ್ಲದೆ, "ಮತ್ತೆ ನನ್ನನ್ನು ಕೇಳಬೇಡ ತಂಗಿ ! ನನ್ನಲ್ಲೇನೂ ಉಳಿದಿಲ್ಲ" ಎಂಬು ಕಾಗದವನ್ನು ಬರೆದನು.

ಅಂದಿನಿಂದ ಕಾಶೀನಾಥನು ಪುನಃ ಅವಳ ಕೊಠಡಿಯೊಳಕ್ಕೆ ಪ್ರವೇಶಿಸಲಿಲ್ಲ. ಕಮಲಾ ಸಹ ಏಕೆ ಏನು ಎಂದು ಸಹ ವಿಚಾರಿಸಲಿಲ್ಲ. ಹೀಗೆಯೇ ಕೆಲವು ದಿನಗಳು ತಳ್ಳಿಹೋದವು. ಒಂದು ದಿನ ಒಬ್ಬ ನೌಕರನು ಬಂದು, "ಒಬ್ಬ ಬ್ರಾಹ್ಮಣನು ತಮ್ಮನ್ನು ನೋಡುವುದಕ್ಕೆ ಬಂದಿದ್ದಾನೆ" ಎಂದನು.

ಮರುಕ್ಷಣವೇ ಕಾಶೀನಾಥನು ಆಶ್ಚರ್ಯಚಕಿತನಾಗಿ ನೋಡಿದನು. ಒಬ್ಬ ವೃದ್ಧ ಬ್ರಾಹ್ಮಣನು ಕೈಯಲ್ಲಿ ಜನಿವಾರ ಹಿಡಿದು ಹತ್ತಿರ ಬಂದು ನಿಂತುಕೊಂಡು, "ತಾವು ಮಹಾತ್ಮರು ! ಬ್ರಾಹ್ಮಣನ ಸರ್ವಸ್ವವನ್ನೂ ಸೆಳೆದುಕೊಳ್ಳಬೇಡಿ" ಎಂದನು.

ಕಾಶೀನಾಥನು ಗಾಬರಿಯಿಂದ, "ಏನಾಯಿತು ?" ಎಂದು ಕೇಳಿದನು.

"ತನಗೆ ಪರಮಾತ್ಮ ಬೇಕಾದಷ್ಟು ಕೊಟ್ಟಿದ್ದಾನೆ. ಆದರೆ ನನ್ನಲ್ಲಿ ಒಂದಷ್ಟು ಜಮೀನಲ್ಲದೆ ಬೇರೇನೂ ಇಲ್ಲ. ಅದನ್ನು ತಾವು ಕಿತ್ತುಕೊಂಡು ಬಿಡಬೇಡಿ" ಎಂದು ಹೇಳುತ್ತಾ ಹೇಳುತ್ತಾ ಬ್ರಾಹ್ಮಣನು ಅಳತೊಡಗಿದನು.

ಕಾಶೀನಾಥನಿಗೆ ಏನೂ ತೋಚಲಿಲ್ಲ. ಸುಮ್ಮನೆ ಬ್ರಾಹ್ಮಣನ ಕೈಹಿಡಿದು ಪಕ್ಕದಲ್ಲಿ ಕೂಡಿಸಿಕೊಂಡನು. ಆಮೇಲೆ "ಎಲ್ಲಾ ವಿಚಾರವನ್ನೂ ಸ್ಪಷ್ಟವಾಗಿ ಹೇಳಿ" ಎಂದನು

ಬ್ರಾಹ್ಮಣನು ಬಿಕ್ಕುತ್ತಾ, "ತಾವು ಧರ್ಮಾತ್ಮರು, ತಾವು ಆಣೆ ಇಟ್ಟು ಹೇಳಿ ನೋಡೋಣ ಆರ್ಜಕ ಇನಾಮತಿ ನನ್ನದಲ್ಲವೆಂದು" ಎಂದನು.

"ನಿಮ್ಮದಲ್ಲವೆಂದು ಯಾರು ಹೇಳುತ್ತಾರೆ.

"ಹಾಗಾದರೆ ವಿಜಯಬಾಬುಗಳು - ನಿಮ್ಮ ಹೊಸ ಮ್ಯಾನೇಜರು ನನ್ನ ಮೇಲೇಕೆ ದಾವಾ ಮಾಡಿದ್ದಾರೆ ?"

"ದಾವಾ ಮಾಡಿದ್ದಾನೆಯೋ ? ನನಗೆ ಗೊತ್ತಿಲ್ಲ."

"ಅವರು ದಾವಾ ಮಾಡಿರುವುದೇ ಉಂಟೇತೆ. ನಾನು ತಾನೆ ಏಕೆ ಸುಮ್ಮನೆ ಬಿಡಲಿ. ನಾನೂ ಹೊಡೆದಾಡುತ್ತೇನೆ. ನಿಮ್ಮನ್ನೇ ನನ್ನ ಸಾಕ್ಷಿಯಾಗಿ ಕರೆಯುತ್ತೇನೆ. ನಾನು ಬಡವ. ನಿಮ್ಮೊಡನೆ ಹೊಡೆದಾಡುವುದು ನನಗೆ ಶೋಭಿಸುವುದಿಲ್ಲ. ನಾನು ಭಿಕಾರಿಯಾಗಿ ಬಿಡುತ್ತೇನೆ. ಆದರಿಂದ ನಾನು ಆಸ್ತಿಯನ್ನು ಬಿಡಿಸಿಕೊಳ್ಳದೇ ಬಿಡುವುದಿಲ್ಲ" ಎಂದು ತನ್ನ ಮನೋನಿರ್ಧಾರವನ್ನು ತೋರಿದನು.

"ಬ್ರಾಹ್ಮಣನು ಕುಪಿತನಾಗಿ ಹೊರಡಲನುವಾದದ್ದನ್ನು ಕಂಡು ಕಾಶೀನಾಥನು ಕೈಹಿಡಿದು ಅವನನ್ನು ಕೂಡಿಸಿಕೊಂಡು, ನಿಮಗೆ ಒಳ್ಳೆಯದಾಗುವುದನ್ನೇ ನಾನು ಮಾಡಲು ಪ್ರಯತ್ನಿಸುತ್ತೇನೆ. ನಂತರ ನಿಮ್ಮ ಮನಸ್ಸಿಗೆ ತೋಚಿದುದನ್ನು ಮಾಡಿರಿ" ಎಂದನು.

ಕಾಶೀನಾಥನು ಬ್ರಾಹ್ಮಣನನ್ನು ಬೀಳ್ಕೊಟ್ಟನಂತರ ವಿಜಯಬಾಬುವನ್ನು ಕರೆಸಿ, "ಆ ಜಮೀನು ಆರ್ಜಕ ಇನಾಮತಿ ನಮ್ಮದಲ್ಲ. ವ್ಯರ್ಥವಾಗಿ ಆ ಬ್ರಾಹ್ಮಣನನ್ನೇಕೆ ಗೋಳು ಹೊಯ್ದುಕೊಳ್ಳಬೇಕು?" ಎಂದನು.

"ಮಾಲೀಕರ ಅಪ್ಪಣೆ ಇದೆ"

ಕಾಶೀನಾಥನು ಕುಪಿತನಾಗಿ, "ಬೇರೊಬ್ಬರ ವಸ್ತುವನ್ನು ಕಸಿದುಕೊಳ್ಳುವುದನ್ನು ನಿಮ್ಮ ಮಾಲೀಕರು ಕಲಿಸಿದ್ದಾರೇನು ?" ಎಂದನು.

"ಆ ಜಮೀನು ನಮಗೆ ಸೇರಿದ್ದು"

"ಅಲ್ಲ - ಅದು ನಮ್ಮದಲ್ಲ"

ವಿಜಯಬಾಬು ಕೊಂಚ ಸುಮ್ಮನಿದ್ದ. ಆಮೇಲೆ, "ನಾನು ಕೇವಲ ನೌಕರ. ಹೇಗೆ ಅಪ್ಪಣೆಯಾಗಿದೆಯೋ ಹಾಗೆ ಮಾಡಿದೆ ಮತ್ತು ಹಾಗೆ ಮಾಡುತ್ತೇನೆ" ಎಂದನು.

ಈ ವಿಚಾರವನ್ನು ಕಮಲಾಗೆ ಹೇಳಲು ಕಾಶೀನಾಥನ ಮನಸ್ಸು ಹಿಮ್ಮೆಟ್ಟುತ್ತಿತ್ತು;

ನಾಚುತ್ತಿತ್ತು. ಆದರೂ ಸಹ ಅವನು, "ಆ ಜಮೀನು ನಿನ್ನದಲ್ಲ. ಬ್ರಾಹ್ಮಣನ ಸ್ವತ್ತನ್ನು ಕಿತ್ತುಕೊಳ್ಳಬೇಡ" ಎಂದನು.

"ಕಿತ್ತುಕೊಳ್ಳುತ್ತೇನೆಂದು ಯಾರು ಹೇಳಿದರು ?"

ಯಾರಾದರೂ ಹೇಳಿರಲಿ - ಅದು ನಿನ್ನ ಜಮೀನಂತೂ ಅಲ್ಲ. ವಿಜಯಬಾಬುವಿಗೆ ಸುಳ್ಳು ದಾವಾ ಮಾಡದಿರುವಂತೆ ಹೇಳಿಬಿಡು."

"ವಿಜಯಬಾಬು ನಿಜವಾದ ಕೆಲಸಗಾರ. ಆತನಿಗೆ ತನ್ನ ಕೆಲಸವೇನೆಂಬುದು ಗೊತ್ತು. ಆತನ ಕೆಲಸದಲ್ಲಿ ನಿಮಗೇನು ಬುದ್ಧಿ ಹೇಳುವ ಕೆಲಸವಿಲ್ಲ" ಎಂದು ಕಮಲಾ ಅತೃಪ್ತಿಯಿಂದ ಹೇಳಿದಳು.

ಕೆಲವು ದಿವಸಗಳ ಮೇಲೆ ದಾವಾ ದಾಖಲು ಆಯಿತು. ವಿಚಾರಣೆಗೆ ಬಂದಾಗ ಸಾಕ್ಷಿ ಸ್ಥಾನದಲ್ಲಿ ನಿಂತು ಕಾಶೀನಾಥನು, "ನಾನು ನನ್ನ ಮಾಪನಪದು . ಸ್ವರ್ಗೀಯ ಪ್ರಿಯನಾಥಬಾಬುಗಳ ಕಾಲದಿಂದಲೂ ಜಮೀನುದಾರಿಯ ಕೆಲಸ ಕಾರ್ಯಗಳನ್ನು ನೋಡಿಕೊಂಡು ಬರುತ್ತಿದ್ದೇನೆ. ಅಲ್ಲದೆ ಅವರ ಮರಣಾನಂತರವೂ ಸಹ ನಾನೇ ಸ್ವತಃ ಅನೇಕ ದಿನಗಳವರೆಗೆ ಎಲ್ಲ ಕೆಲಸವನ್ನೂ ನೋಡಿಕೊಂಡಿದ್ದೆ. ಆ ಜಮೀನು ಕಮಲಾದೇವಿಗೆ ಸೇರಿದ್ದಲ್ಲವೆಂದು ನನಗೆ ಖಚಿತವಾಗಿ ಗೊತ್ತು" ಎಂದು ಹೇಳಿದನು.

ವಿಜಯಬಾಬುವಿನ ದಾವಾ ಕೈತಪ್ಪಿ ಹೋಯಿತು. ಸಪ್ಪೆಮೋರೆ ಹಾಕಿಕೊಂಡು ಅವನು ಮನೆಗೆ ಹಿಂತಿರುಗಿದ. ಪ್ರತಿವಾದಿಯಾಗಿದ್ದ ಆ ವೃದ್ಧ ಬ್ರಾಹ್ಮಣನು ಎರಡೂ ಕೈಗಳನ್ನೂ ಎತ್ತಿ ಕಾಶೀನಾಥನಿಗೆ ಆಶೀರ್ವಾದಮಾಡಿ ತನ್ನ ಮನೆಗೆ ಹೊರಟು ಹೋದನು.

—೯—

ಪರದೆಯ ಹೊರಗೆ ನಿಂತು ವಿಜಯಬಾಬು ಕೋರ್ಟಿನಲ್ಲಿ ನಡೆದದ್ದನ್ನೆಲ್ಲಾ ವಿಶದೀಕರಿಸಿ ತನ್ನ ಟೀಕೆ ಟಿಪ್ಪಣಿಗಳ ಸಮೇತ ಎಲ್ಲವನ್ನೂ ತನ್ನ ಮಾಗಿನ ನೇರಕ್ಕೆ ಹೇಳಿಕೊಂಡು ಕಡೆಗೆ "ಕೇವಲ ಯಜಮಾನರ ಸಾಕ್ಷಿಯಿಂದ ನಮ್ಮ ದಾವಾ ಕೈತಪ್ಪಿ ಹೋಯಿತು" ಎಂದನು

ಪರದೆಯ ಒಳಗಿದ್ದ ಕಮಲಾ ಒಂದಕ್ಕೆ ಹತ್ತಾಗಿ ಊದಿದಳು. ಬಹಳ ಹೊತ್ತಿನ ನಂತರ, "ಒಳಕ್ಕೆ ಬನ್ನಿ, ಬಹಳ ಮಾತನಾಡಬೇಕಾದದ್ದಿದೆ" ಎಂಬ ಕರೆ ಒಳಗಿನಿಂದ ಬರಿತು ವಿಜಯಬಾಬು ಒಳಗೆ ಪ್ರವೇಶಿಸಿದನು. ಬಹಳ ಹೊತ್ತು ಪಿಸುಮಾತುಗಳಾದ ಮೇಲೆ ವಿಜಯಬಾಬು ಹೊರಬಿದ್ದನು.

ಈ ದಿವಸ, ಅದೂ ಬಹಳ ದಿವಸಗಳ ಮೇಲೆ ಕಾಶೀನಾಥನು ಊಟಮಾಡುತ್ತಿರುವಾಗ ಕಮಲಾ ಬಂದು ಹತ್ತಿರ ಕುಳಿತಳು. ಮೊದಲಿನಂತೆ ಅವಳು ಉಗ್ರಮೂರ್ತಿಯಾಗಿರಲಿಲ್ಲ. ಬದಲಾಗಿ ಶಾಂತವಾದ ಸ್ತಬ್ಧಮೂರ್ತಿಯಾಗಿದ್ದಳು. ಕೊಂಚ

ಹೊತ್ತಾದನಂತರ, "ಮನೆಮಾರಿ ವಿಭೀಷಣನಿಂದ ಬಂಗಾರದಂತಹ ಲಂಕಾಪುರಿ ಭಸ್ಮವಾಗಿ ಹೋಯಿತು—ಗೊತ್ತೆ ?" ಎಂದು ಕೇಳಿದಳು ಕಮಲಾ.

ಕಾಶೀನಾಥನು ಊಟಮಾಡುತ್ತಲೇ "ಗೊತ್ತು" ಎಂದನು.

"ಅದು ಹೇಗೆ ಗೊತ್ತಿಲ್ಲದೆ ಹೋದೀತು ಅದೂ ಅಲ್ಲದೆ ಇನ್ನೊಬ್ಬರ ಅನ್ನವನ್ನು ತಿಂದಲ್ಲವೇ ನೀವೂ ಒಬ್ಬ ಮನುಷ್ಯರಾಗಿರುವುದು."

ಕಾಶೀನಾಥನು ಯಾವ ಉತ್ತರವನ್ನೂ ಕೊಡಲಿಲ್ಲ.

ಕಮಲಾ ಕೊಂಚ ಹೊತ್ತು ಸುಮ್ಮನಿದ್ದು ಮತ್ತೆ "ಯಾವಾಗಲೂ ಇನ್ನೊಬ್ಬರ ಅನ್ನದಿಂದಲೇ ಮೈಬೆಳೆಸಿಕೊಂಡವರಿಗೆ ಈಗಲೂ ಇನ್ನೊಬ್ಬರ ಅನ್ನ ತಿನ್ನದಿದ್ದರೆ ಉಪವಾಸವಿರಬೇಕಾಗಿರುವವರಿಗೆ, ನಿಜ ಹೇಳುವ ಹವ್ಯಾಸವೇಕೆ ? ಅಲ್ಲದೆ ಇಷ್ಟೊಂದು ಅಹಂಕಾರ ಪಡಲು ಇರುವ ಅಧಾರವೂ ಏನು ? ಎಂದು ಯೋಚಿಸುತ್ತೇನೆ" ಎಂದಳು.

ಕಾಶೀನಾಥನು ಒಂದಾಗುತ್ತಲೂ ಒಂದು ತುತ್ತನ್ನು ಬಾಯೊಳಕ್ಕೆ ತುರುಕುತ್ತಿದ್ದನು.

"ಕಟುಕ ಕೂಡ, ಯಾವನ ಅನ್ನವನ್ನು ತಿನ್ನುತ್ತಾನೆಯೋ, ಅವನ ಮೇಲೆಯೇ ಚೂರಿ ಎತ್ತಲು ಹಿಂದೆ ಮುಂದೆ ನೋಡುತ್ತಾನೆ."

"ಕಮಲಾ !"

"ಹೆಂಡತಿಯ ಅನ್ನದಿಂದ ಜೀವಿಸುವವರಿಗೆ ಇಷ್ಟೊಂದು ಓಟವಿರಬಾರದು, ಇದು ಕಳೆಗೊಡುವುದಿಲ್ಲ. ದಿನೇ ದಿನೇ ನಿಮ್ಮ ಈ ವ್ಯವಹಾರವನ್ನು ನೋಡುತ್ತಾ ನೋಡುತ್ತಾ ವಿಶಾಲದೃಷ್ಟಿ ಇಲ್ಲದೆ ಹೋಗಿದ್ದರೆ ಆಗ......"

ಕಾಶೀನಾಥನು ನಗುತ್ತಾ, "ಮನೆಬಿಟ್ಟು ಹೊರಗೆ ಹಾಕುತ್ತೀಯೇನು ?"

"ಹೌದು, ಹೊರಗೆ ಹಾಕುತ್ತೇನೆ."

ಅರ್ಧ ಊಟಮಾಡಿದ ತಟ್ಟೆಯನ್ನು ಪಕ್ಕಕ್ಕೆ ತಳ್ಳಿ ಕಾಶೀನಾಥನು ಒಂದೇ ಸಮನೆ ಕಮಲಾ ಕಡೆ ನೋಡುತ್ತಾ, "ಕಮಲಾ, ಹಿಂದೆಂದೂ ನಾನು ನಿನ್ನ ಮೇಲೆ ಕೋಪಿಸಿಕೊಳ್ಳಲಿಲ್ಲ. ನಿನ್ನೊಡನೆ ಯಾವ ಮಾತನ್ನೂ ಹೇಳಲಿಲ್ಲ. ಆದರೆ ನೀನು ಈಗ ಹೇಳಿರುವ ಈ ಮಾತು, ಇಂತಹ ಮಾತನ್ನು ಹಿಂದೆ ಎಂದೂ ಯಾರೂ ಹೇಳಿರಲಿಲ್ಲ. ಇಂದಿನಿಂದ ನಾನು ನಿನ್ನ ಅನ್ನವನ್ನು ತಿನ್ನುವುದಿಲ್ಲ. ಆಗಲಿ ನೋಡು, ಇದರಿಂದ ನಿನಗೆ ಸುಖವಾದಿತೇನೋ" ಎಂದು ಕಾಶೀನಾಥನು ಎದ್ದು ನಿಂತನು.

ಕಮಲೆಯೂ ಗರ್ವದಿಂದ ಎದ್ದು ನಿಂತು, "ನೀವು ಸತ್ಯವಾದಿಯಾದರೆ - ಮನುಷ್ಯರಾದರೆ, ನಿಮ್ಮ ಪ್ರತಿಜ್ಞೆಯನ್ನು ಪೂರೈಸಿ" ಎಂದಳು.

"ಖಂಡಿತವಾಗಿ ಪೂರೈಸುತ್ತೇನೆ. ನೀನು ಹೇಳಿದ - ನಿನ್ನ ಬಾಯಿಂದ ಬಂದ ಮಾತೇ ನಿನಗೆ ಚಿರಶತ್ರುವಾಗಿ ಉಳಿಯುತ್ತೆ. ನಾನು ನಿನ್ನನ್ನು ಕ್ಷಮಿಸಿದ್ದೇನೆ. ಆದರೆ ಜಗದೀಶ್ವರನು ನಿನ್ನನ್ನು ಕ್ಷಮಿಸುತ್ತಾನೆಯೇ ?"

ಕಮಲಾ ಇನ್ನೂ ಕಂಪಿಸುತ್ತಿದ್ದಳು. "ನಿಮ್ಮ ಶಾಪದಿಂದ ನನ್ನದೇನೂ ಹಾಳಾಗುವುದಿಲ್ಲ."

"ಹಾಗೆಯೇ ಆಗಲಿ. ನಾನು ನಿನಗೆ ಶಪಿಸಲಿಲ್ಲವೆಂದು ಭಗವಂತನು ಬಲ್ಲ. ಧರ್ಮಬುದ್ಧಿಯುಳ್ಳವಳಾಗಿ ಸುಖಿಯಾಗೆಂದು ಆಶೀರ್ವದಿಸುತ್ತೇನೆ"

ಹೊರಗೆ ಬಂದು ಕಾಶೀನಾಥನು ವ್ಯಾಕರಣ, ಸಾಹಿತ್ಯ, ದರ್ಶನ, ಸ್ಮೃತಿ ಇವುಗಳೆಲ್ಲವನ್ನೂ ಒಂದೊಂದಾಗಿ ಹರಿದು ಎಸೆದುಬಿಟ್ಟನು. ತನ್ನದೇನೆನಿದ್ದವೋ ಅವೆಲ್ಲವನ್ನೂ ನೌಕರರುಗಳನ್ನು ಕರೆದು ಅವನು ಹಂಚಿಬಿಟ್ಟನು. ರಾತ್ರಿ ಕಮಲೆಯ ಕೋಣೆಯ ಬಾಗಿಲು ತಟ್ಟಿ "ಕಮಲಾ !" ಎಂದು ಕೂಗಿದನು.

ಕಮಲಾ ಎದ್ದಿದ್ದಳು. ಆದರೆ ಉತ್ತರ ಕೊಡಲಿಲ್ಲ. ಬಾಗಿಲು ತೆರೆದಿದ್ದಿತು. ಕಾಶೀನಾಥನು ಅದನ್ನು ತಳ್ಳಿ ಒಳಕ್ಕೆ ಬಂದು ನೋಡಿದನು. ಕಮಲಾ ಕಣ್ಣು ಮುಚ್ಚಿಕೊಂಡು ಮಂಚದ ಮೇಲೆ ಮಲಗಿದ್ದಳು. ಹತ್ತಿರ ಕುಳಿತು ಅವಳ ಹಣೆಯ ಮೇಲೆ ಕೈಯಿಟ್ಟು ಮೃದುವಾಗಿ ಆಡಿಸುತ್ತಾ ಕಾಶೀನಾಥನು ಮತ್ತೆ, "ಕಮಲಾ" ಎಂದನು.

ಆಗಲೂ ಏನೊಂದು ಉತ್ತರವೂ ಇಲ್ಲ. ಆಗ ಕಾಶೀನಾಥನು, "ಹೋಗುವಾಗ ಆಶೀರ್ವಾದಮಾಡಿ ಹೋಗುತ್ತೇನೆ, ಕಮಲಾ" ಎಂದು ಹೊರಹೊರಟನು.

ಕಾಶೀನಾಥನು ಹೊರಟು ಹೋದಮೇಲೆ ಕಮಲಾ ಹಾಸಿಗೆಯಿಂದೆದ್ದು ಕಿಟಕಿಯ ಬಳಿ ಹೋಗಿ ಕುಳಿತಳು. ಬಹಳ ಹೊತ್ತು ಅಲ್ಲೇ ಹಾಗೆಯೇ ಕುಳಿತಿದ್ದಳು. ಕುಳಿತು ನೋಡುತ್ತಿದ್ದ ಹಾಗೆಯೇ ಬೆಳಗಾಗುವುದೂ ಗೋಚರಿಸಿತು. ಮತ್ತೆ ಅವಳು ಹೋಗಿ ಹಾಸಿಗೆಯ ಮೇಲೆ ಮಲಗಿದಳು. ಎಚ್ಚರವಾದಾಗ ಹೊತ್ತು ಬಹಳ ಏರಿದ್ದಂತೆ ಕಂಡು ಬಂತು.

ಆಗಲೇ ಮನೆಯಲ್ಲೆಲ್ಲಾ ಗುಲ್ಲೋ ಗುಲ್ಲು. ಇನ್ನೂ ಕಮಲಾ ಪೂರ್ಣ ಎದ್ದು ಕೂಡ ಕುಳಿತಿರಲಿಲ್ಲ. ಒಬ್ಬ ಕೆಲಸದವಳು ಓಡಿಬಂದು, "ಅಯ್ಯಯ್ಯೋ, ಆಗಿಹೋಯ್ತಲ್ಲಾ ಅಮ್ಮಯ್ಯಾ! ಹಾಳಾಗಿ ಹೋಯಿತಲ್ಲಾ ಅಮ್ಮಯ್ಯಾ! ಯಾರೋ ಯಜಮಾನರ ಖೂನಮಾಡಿ ಬಿಟ್ಟಿದ್ದಾರೆ ಅಮ್ಮಯ್ಯಾ!" ಎಂದು ಒಂದೇ ಸಮನೆ ಅರಚಿದಳು. ಕಡಾಯಿಯಲ್ಲಿ ಕುದಿಯುತ್ತಿರುವ ಎಣ್ಣೆಯನ್ನು ಸುರಿದರೆ ಹೇಗೆ ಮಿಲಮಿಲನೆ ಒದ್ದಾಡುತ್ತಾ ಬರುತ್ತಾರೋ ಹಾಗೆಯೇ ಕಮಲಾ ಮಿಲಮಿಲನೆ ಒದ್ದಾಡುತ್ತಾ ಮಂಚದಿಂದ ಇಳಿದು ಬಂದಳು.

"ಒಂದೇ ಸಲ ಖೂನಮಾಡಿದರೆ ?"

ಯಾರೋ ಉತ್ತರ ಕೊಟ್ಟರು, "ಹೌದು, ಒಂದೇ ಸಲ."

ಅದೇ ಅಸ್ತವ್ಯಸ್ತವಾದ ಉಡುಪಿನಲ್ಲಿಯೇ ಕಮಲಾ ಬೇಗ ಬೇಗ ಹೊರ ಕೊಠಡಿಗೆ ಬಂದಳು. ಚೇತನವಿಲ್ಲದ ಕಾಶೀನಾಥನು ಸೋಫಾದ ಮೇಲೆ ಮಲಗಿಸಲ್ಪಟ್ಟಿದ್ದನು. ಬಟ್ಟೆಬರೆ, ಮೈ ಕೈಯೆಲ್ಲ ರಕ್ತಮಯವಾಗಿತ್ತು. ಬೀದಿಯ ಧೂಳಿನಿಂದ ತುಂಬಿತ್ತು.

ಮೂಗು ಬಾಯಿಗಳಿಂದ ಹೊರಟಿದ್ದ ರಕ್ತ ಅಲ್ಲೇ ಹೆಪ್ಪುಗಟ್ಟಿತ್ತು. ಕಮಲಾ ಇದನ್ನು ನೋಡುತ್ತಿದ್ದ ಹಾಗೆಯೇ ಚೀತ್ಕರಿಸಿದಳು. ಒಡನೆಯೇ ಧೊಪ್ಪೆಂದು ಮೂರ್ಛೆ ಬಿದ್ದಳು.

ರಾತ್ರಿ ಏಕಾಂಗಿಯಾಗಿ ಜಮೀನುದಾರರ ಅಳಿಯಂದಿರು ಎಲ್ಲಿಯೋ ಹೋಗುತ್ತಿದ್ದರು ದಾರಿಯಲ್ಲಿ ಯಾರೋ ಅವರ ಖೂನಿಮಾಡಿ ಬಿಟ್ಟಿದ್ದಾರೆ. ಸ್ಥಿತಿ ಚಿಂತಾಜನಕವಾಗಿದೆ ಎಂದು ಊರಲ್ಲೆಲ್ಲಾ ಹರಡಿಹೋಯಿತು

ಎರಡು ದಿನಗಳ ನಂತರ ಕಾಶೀನಾಥನಿಗೆ ಕೊಂಚ ಜ್ಞಾನ ಬಂತು. ಆಗ ಪೋಲೀಸ್ ಇನ್ಸ್‌ಪೆಕ್ಟರು, "ಹೀಗೆ ಮಾಡಿದವರು ಯಾರು, ರಾಯರೆ" ಎಂದು ಕೇಳಿದರು.

ಕಾಶೀನಾಥನು ಮೇಲಕ್ಕೆ ತೋರಿಸಿ, "ಅವನು" ಎಂದನು.

ಆ ವೃದ್ಧ ಗುಮಾಸ್ತನು ಅಲ್ಲಿಯೇ ನಿಂತಿದ್ದನು. ಅವನ ಕಣ್ಣಿನಿಂದ ನೀರು ಹರಿಯ ತೊಡಗಿತು. ಇನ್ಸ್‌ಪೆಕ್ಟರು ಮತ್ತೆ, "ನೀವು ಅವರುಗಳನ್ನು ಗುರುತಿಸಲಾರಿರಾ ?" ಎಂದು ಕೇಳಿದನು.

ಕಾಶೀನಾಥನು ಅಸ್ಫುಟ ಸ್ವರದಲ್ಲಿ, "ಗುರುತಿಸುತ್ತೇನೆ" ಎಂದ. ಇನ್ಸ್‌ಪೆಕ್ಟರು ಆತುರದಿಂದ, "ಅವರಾರು ?" ಎಂದ.

ಕಾಶೀನಾಥನು ಕೊಂಚಹೊತ್ತು ಮೌನವಾಗಿದ್ದು ಆಮೇಲೆ, "ನಾನು ಸುಳ್ಳು ಹೇಳಿದೆ. ಅವರನ್ನು ನಾನು ಗುರುತಿಸಲಾರೆ" ಎಂದನು.

ಇನ್ಸ್‌ಪೆಕ್ಟರು ಮತ್ತೆ ಮೂರು ನಾಲ್ಕು ಸಲ ಕೇಳಿದರು. ಆದರೂ ಯಾವ ಸುಳಿವೂ ಹೊರಬೀಳಲಿಲ್ಲ. ಕಾಶೀನಾಥನು ಮತ್ತೆ ಎರಡನೆಯ ಮಾತನ್ನೇ ಆಡಲಿಲ್ಲ. ಆ ಮಾರನೆಯ ದಿನ ಆ ವೃದ್ಧಗುಮಾಸ್ತನನ್ನು ಕರೆಸಿ, "ವೈದ್ಯಶಾಲೆಯಲ್ಲಿ ನನ್ನ ತಂಗಿ ಬಿಂದುವಾಸಿನಿ ಇದ್ದಾಳೆ. ಅವಳನ್ನೊಮ್ಮೆ ನೋಡಬೇಕೆಂಬ ಆಸೆ ಇದೆ. ಯಾರನ್ನಾದರೂ ಕಳುಹಿಸಿ ಕರೆಸಿ" ಎಂದನು.

ಮೂರು ದಿನಗಳಮೇಲೆ ಬಿಂದುವಾಸಿನಿ, ಯೋಗೇಶಬಾಬು ಬಂದರು. ಬಿಂದು ಒಂದು ಬಗೆಯ ಗಟ್ಟಿಮನಸ್ಸಿನ ಹೆಂಗಸು ಕಮಲೆಯಂತಲ್ಲ. ಆದ್ದರಿಂದಲೇ ಆಕೆಯು ಕಮಲೆಯಂತೆ ಚೀತ್ಕರಿಸಲೂ ಇಲ್ಲ; ಮೂರ್ಛೆಹೋಗಲೂ ಇಲ್ಲ. ಕೇವಲ ತುಂಬಿ ಬಂದ ಕಣ್ಣೀರೊರೆಸಿಕೊಂಡು. ಭಾರವಾದ ಗದ್ಗದ ಧ್ವನಿಯಿಂದ, "ಭಾವಯ್ಯಾ, ಹೀಗೆ ಮಾಡಿದವರು ಯಾರು ?" ಎಂದು ಕೇಳಿದಳು.

"ಹೇಗೆ ಗೊತ್ತಾಗುತ್ತೆ ತಂಗಿ ?"

"ಯಾರ ಮೇಲಾದರೂ ಸಂದೇಹವಿದೆಯೋ ?"

"ಅದನ್ನ ಕೇಳಬೇಡ ತಂಗಿ"

ಬಿಂದುವಾಸಿನಿಯು ಸುಮ್ಮನೆ ಕಾಶೀನಾಥನ ಮುಖವನ್ನು ನೋಡುತ್ತಿದ್ದಳು.

ಇಂತಹ ಭಾರಿಯಾದ ಆಪಘಾತದಿಂದ ಕಾಶೀನಾಥನು ಖಂಡಿತವಾಗಿ ಚೇತರಿಸಿಕೊಳ್ಳಲಾರನೆಂದು ಎಲ್ಲರೂ ತಿಳಿದೇ ಇದ್ದರು. ಮೃತ್ಯುವು ಕ್ರಮೇಣ ಸಮೀಪಿಸತೊಡಗಿತು. ಇಂದು ರಾತ್ರಿ ಜ್ವರದ ಜೋರಿನಿಂದ ಕಾಶೀನಾಥನು ಬಡಬಡಿಸುತ್ತಾ ಚೀತ್ಕರಿಸಿದನು. "ಹೇಳು ಕಮಲಾ, ನೀನು ಈ ಕೆಲಸವನ್ನು ಮಾಡಿಲ್ಲ ತಾನೆ ?"

ಬಿಂದು ಅವನ ಮುಖದ ಬಳಿ ಮುಖವಿಟ್ಟು, "ಏನು ಹೇಳುತ್ತಿದ್ದೀ ಭಾವಯ್ಯಾ" ಎಂದಳು.

ಕಾಶೀನಾಥನು ಬಿಂದುವನ್ನೇ ಕಮಲಾ ಎಂದು ತಿಳಿದುಕೊಂಡು ಅವಳ ಕೊರಳ ಮೇಲೆ ಕೈಹಾಕಿ ಕರುಣಮಯ ಕಂಠದಿಂದ, "ನಾನು ಸತ್ತರೂ ಸುಖಿಯಾಗಲಾರೆ ಕಮಲಾ. ಒಂದು ಸಲ ಹೇಳು – ಕೇವಲ ಒಂದೇ ಒಂದು ಸಲ ಹೇಳು. ಈ ಕೆಲಸ ನಿನ್ನ ಮುಖಾಂತರ ನಡೆದದ್ದಲ್ಲವೆಂದು" ಎಂದನು.

—೧೦—

ಒಮ್ಮೆ ಎಚ್ಚರವಿದ್ದಂತೆ, ಮತ್ತೊಮ್ಮೆ ಎಚ್ಚರವಿಲ್ಲವಂತೆ ಕಮಲಾ ಮಲಗಿರುತ್ತಿದ್ದಳು. ಬಿಂದು ಬಂದಮೇಲೆ ಈ ಎರಡು ದಿನಗಳೂ ಕಮಲೆಯು ತಂದ್ರಾವಸ್ಥೆಯಲ್ಲಿಯೇ ಕಳೆದುಹೋದವು. ಅವಳ ವಿಚಾರದಲ್ಲಿ ಡಾಕ್ಟರಿಗೆ ನಿಜವಾಗಿ ಬಹಳ ಶಂಕೆಯಿತ್ತು. ಅದರಿಂದ ಅವರು ಹೇಳಿದಂತೆ ಜನಗಳು ಅವಳನ್ನು ಸುತ್ತುಗಟ್ಟಿ ಬಹಳ ಜಾಗರೂಕತೆಯಿಂದ, ಸಾವಧಾನೀಯತೆಯಿಂದ, ನೋಡಿಕೊಂಡು ಕುಳಿತಿರುತ್ತಿದ್ದರು. ಅಂತೂ ಒಂದೇ ಸಮನೆ ಎರಡು ದಿನಗಳು ಬಹಳ ಕಷ್ಟಪಟ್ಟು ಸೇವಾಶುಶ್ರೂಷೆ ಮಾಡಿದ ಮೇಲೆ ಕಮಲಾ ಕೊಂಚ ಎಚ್ಚರಗೊಂಡಳು. ಆಮೇಲೆ ಅವಳನ್ನು ಹಾಸಿಗೆಯ ಮೇಲೆ ಕೂಡಿಸಲಾಯಿತು.

ಕಮಲಾ ಚೆನ್ನಾಗಿ ಕಣ್ಣುಬಿಟ್ಟು ನೋಡಿದಳು. ತಾನು ಇದುವರೆಗೂ ಯಾರ ತೊಡೆಯ ಮೇಲೆ ತಲೆಯಿಟ್ಟುಕೊಂಡು ಮಲಗಿದ್ದಳೋ ಅವಳು ಅಪರಿಚಿತಳೆಂದು ಕಮಲೆಗೆ ಗೊತ್ತಾಯಿತು. "ನೀನಾರು ?" ಎಂದು ಕಮಲಾ ಕೇಳಿದಳು.

ಅಪರಿಚಿತೆಯು, "ನಾನು ಬಿಂದು. ನಿನ್ನ ಗಂಡನ ತಂಗಿ" ಎಂದಳು.

ಕಮಲಾ ಬಹಳ ಹೊತ್ತು ಸುಮ್ಮನೆ ಅವಳ ಮುಖವನ್ನೇ ನೋಡುತ್ತಿದ್ದಳು. ಆಮೇಲೆ ಕೊಠಡಿಯಲ್ಲಿರುವವರೆಲ್ಲರನ್ನೂ ಹೊರಟು ಹೋಗುವಂತೆ ಸಂಜ್ಞೆಯಿಂದ ಅಪ್ಪಣೆ ಮಾಡಿ, ಮೆಲ್ಲಗೆ "ನಾನೆಷ್ಟು ಹೊತ್ತಿನಿಂದ ಹೀಗೆ ಮಲಗಿದ್ದೇನೆ" ಎಂದು ಕೇಳಿದಳು.

"ಮೊನ್ನೆ ಬೆಳಗ್ಗೆ ನೀನು ಮೂರ್ಛೆಹೋದವಳು, ಮತ್ತೆ ಈವರೆಗೂ ಎಚ್ಚರಗೊಳ್ಳಲೇ ಇಲ್ಲ ಅತ್ತಿಗೆ."

"ಮೊನ್ನೆ" ಕಮಲಾ ಬೆಚ್ಚಿ ಸುಮ್ಮನಾದಳು. ಹಾಗೆಯೇ ಸ್ತಬ್ಧಳಾಗಿ ತಲೆ ತಗ್ಗಿಸಿ ಕುಳಿತಿದ್ದಳು. ಬಹಳ ಹೊತ್ತಿನವರೆಗೆ ಅವಳ ಶರೀರದಲ್ಲಿ ಯಾವ ಬಗೆಯ ಚಲನವನ್ನೂ

ಕಾಣದ್ದರಿಂದ ಬಿಂದು ಶಂಕೆಯಿಂದ ಅವಳ ಬಲಗೈಯನ್ನು ತನ್ನ ಕೈಯಲ್ಲಿ ಹಿಡಿದ ಕೊಂಡು, "ಅತ್ತಿಗೆ!" ಎಂದು ಕೂಗಿದಳು.

ಕಮಲಾ ತಲೆಯೆತ್ತಲಿಲ್ಲ. ಆದರೆ ಉತ್ತರವಿತ್ತಳು. "ಹೆದರಬೇಡಮ್ಮ. ನಾನು ಮತ್ತೆ ಎಚ್ಚರ ತಪ್ಪುವುದಿಲ್ಲ."

ತಾನು ಎಚ್ಚರದಿಂದಿರುವಂತೆ ಅವಳು ಬಲವತ್ತರವಾದ ಪ್ರಯತ್ನಮಾಡುತ್ತಿರುವ ಳೆಂದು ಬಿಂದು ತಿಳಿದುಕೊಂಡಳು. ಆದರಿಂದ ಧೈರ್ಯತಳೆದು ಬಿಂದು ಸುಮ್ಮನೆ ಕುಳಿ ತಳು. ಇನ್ನು ಸ್ವಲ್ಪಹೊತ್ತು ಹಾಗೆಯೇ ಕುಳಿತಿದ್ದ ಮೇಲೆ ಕಮಲಾ ಮಾತನಾಡ ತೊಡಗಿದಳು—"ನೀನು ನನ್ನನ್ನು ಈ ಅವಸ್ಥೆಯಲ್ಲಿ ಎರಡು ದಿನದಿಂದ ನೋಡಿಕೊಂಡು ಕುಳಿತಿದ್ದೆಯಲ್ಲಾ. ಹೀಗೆ ನನ್ನ ಸೇವೆಮಾಡುವ ಪ್ರವೃತ್ತಿ ನಿನ್ನಲ್ಲಿ ಹೇಗೆ ಬಂದಿತು? ನಾನಾಗಿದ್ದಿದ್ದರೆ ಖಂಡಿತ ಹೀಗೆ ಮಾಡುತ್ತಿರಲಿಲ್ಲ" ಎಂದಳು.

ಬಿಂದು ಅವಳ ಮಾತನ್ನು ಪೂರ್ಣ ತಿಳಿದುಕೊಳ್ಳಲಿಲ್ಲ. "ಏಕೆ? ಆದೇಕೆ ಸೇವೆ ಮಾಡುವ ಪ್ರವೃತ್ತಿ ಬರುವುದಿಲ್ಲ ಅತ್ತಿಗೆ? ನೀನೇನು ಬೇರೆ ಅಲ್ಲವಲ್ಲ. ನಮ್ಮಗಳ ಗುರುತು ಪರಿಚಯವಿಲ್ಲ. ಆದರೆ ಭಾವಯ್ಯನ ಸಂಬಂಧದಿಂದ ನೀನು ನಮ್ಮವಳೇ ಆದೆ. ಅವನಂತೆ ನಿನಗೂ ಸೇವೆಮಾಡುವುದೇ ನನ್ನ ಕೆಲಸ. ಅತ್ತಿಗೆ, ನಿನಗೆ ಗೊತ್ತಿಲ್ಲ. ನಾನಿಲ್ಲಿಗೆ ಬಂದಾಗಿನಿಂದ ಈ ಎರಡು ದಿವಸ ಹೇಗೆ ಕಳೆದೆನೋ ಭಗವಂತನೇ ಬಲ್ಲ. ಒಮ್ಮೆ ಭಾವಯ್ಯನ ಕೊಠಡಿಯಲ್ಲಿರುತ್ತಿದ್ದೆ. ಮತ್ತೊಮ್ಮೆ ನಿನ್ನ ಕೊಠಡಿಯಲ್ಲಿರುತ್ತಿದ್ದೆ. ಭಾವ ಯ್ಯನ ಬಳಿ ಇರುತ್ತಿದ್ದಾಗ ನಿನಗಾಗಿ ನನ್ನ ಜೀವ ತಳಮಳಗೊಳ್ಳುತ್ತಿತ್ತು. ನಿನ್ನ ಬಳಿ ಬಂದಾಗ ಭಾವಯ್ಯನಿಗಾಗಿ ಜೀವ ಹೆದರಿಕೆಯಿಂದ ಹೊಡೆದುಕೊಳ್ಳುತ್ತಿತ್ತು. ಸಾಯಂ ಕಾಲದಿಂದ ಭಾವಯ್ಯನ ಸ್ಥಿತಿ ಕೊಂಚ ಉತ್ತಮವಾಗಿದೆ. ಅವನು ಆರಾಮವಾಗಿ ನಿದ್ದೆ ಹೋಗುತ್ತಿದ್ದುದನ್ನು ನೋಡಿ ನಿನ್ನ ಹತ್ತಿರ ಸ್ವಲ್ಪ ಸ್ಥಿರವಾಗಿ ಕುಳಿತುಕೊಳ್ಳಲು ಆಗಿದೆ. ನಿಜವಾಗಿಯೂ, ಈ ಸಂಕಟದಿಂದ ಭಾವಯ್ಯ ಉಳಿಯುತ್ತಾನೆಂದು ಕೊಂಚವಾದರೂ ಆಸೆ ಇರಲಿಲ್ಲ, ಅತ್ತಿಗೆ!"

"ಉಳಿದುಕೊಂಡರೇ" ಕಮಲಾ ಕೇಳಿದಳು.

ಬಿಂದು ತಲೆಹಾಕಿ, "ಹು, ಆದೇಕೆ ಉಳಿಯುವುದಿಲ್ಲ? ಜ್ವರ ನಿಂತಿದೆ, ಇನ್ನೇನು ಹೆದರುವ ಕಾರಣವಿಲ್ಲೆಂದು ಡಾಕ್ಟರು ಹೇಳಿದರು" ಎಂದಳು.

ಕಮಲೆಯ ಮುಖ ಒಮ್ಮೆ ಇದ್ದಕ್ಕಿದಂತೆಯೇ ಮಿಂಚಿನಂತೆ ಪ್ರಜ್ವಲಿಸಿ ಮತ್ತೆ ಸತ್ವಹೀನವಾಗಿ ವಿವರ್ಣವಾಗಿ ಹೋಯಿತು. ಒಮ್ಮೆ ಉಂಗುಷ್ಠದಿಂದ ನೆತ್ತಿಯವರೆಗೂ ಅವಳ ಶರೀರವು ಗಡಗಡನೆ ನಡುಗಿಹೋಯಿತು. ಮರುಕ್ಷಣವೇ ಅವಳು ಎಚ್ಚರತಪ್ಪಿ ಬಿಂದುವಿನ ತೊಡೆಯಮೇಲೆ ಉರುಳಿದಳು.

ಬಿಂದು ಗಾಬರಿಯಿಂದ ಅರಚಿಕೊಂಡು ಯಾರನ್ನೂ ಕೂಗಲಿಲ್ಲ. ಬದಲಾಗಿ ಅವಳ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಸುಮ್ಮನೆ ಬೀಸಣಿಗೆಯಿಂದ ಗಾಳಿ

ಹಾಕತೊಡಗಿದಳು. ಈ ಹೆಂಗಸಿನಲ್ಲಿ ಸ್ವಾಭಾವಿಕ ಶಕ್ತಿ ಎಷ್ಟು ಹೆಚ್ಚಿಗೆ ಇದೆಯೆಂಬುದರ ಪರೀಕ್ಷೆ ಅವಳ ಪತಿಯ ಖಾಯಿಲೆ ಸಂದರ್ಭದಲ್ಲೇ ಆಗಿದೆ. ಮೃತ್ಯುವು ಅವಳ ಪತಿಯ ಬಳಿ ಬಂದು ತಾಂಡವವಾಡುತ್ತಿತ್ತು. ಆದರೂ ಅವಳ ಮನಸ್ಸು ಚಂಚಲವಾಗಲಿಲ್ಲ. ಇಂತಹ ಬಿಂದು ಕಮಲೆಗಾಗಿ ಚಂಚಲಳಾಗುವಳೇ? ಕೊಂಚ ಹೊತ್ತಾದ ಮೇಲೆ ಎಚ್ಚರಗೊಂಡ ಕಮಲಾ ಕಣ್ಣುಬಿಟ್ಟು ತಾನೆಲ್ಲಿದ್ದೇನೆಂದು ನೋಡಿದಳು. ಅಮೇಲೆ ಬಿಂದುವಿನ ತೊಡೆಯ ಮೇಲೆ ಬೋರಲು ಮಲಗಿ ತಳಮಳಗೊಂಡ ಹೃದಯದಿಂದ ಅಳತೊಡಗಿದಳು.

ಅವಳ ಆಕ್ರಂದನವು ಬಿಂದುವಿನ ತೊಡೆಯಲ್ಲಿಯೇ ಐಕ್ಯವಾಗಿ ಹೋಯಿತು! ಆ ಆಕ್ರಂದನದ ಒಂದು ಸಣ್ಣ ತರಂಗ ಕೂಡ ಯಾರ ಕಿವಿಯವರೆಗೂ ಮುಟ್ಟಲಿಲ್ಲ. ಹೊರಗೆ ನಿರ್ಜನರಾತ್ರಿಯ ಅಂಧಕಾರವು ಇನ್ನೂ ಗಾಢತರವಾಗತೊಡಗಿತು. ಈ ಸಣ್ಣ ಕೊಠಡಿಯ ಒಳಗೆ ಇಬ್ಬರು ರಮಣಿಯರಲ್ಲಿ ಒಬ್ಬಳು ತನ್ನ ಛಿದ್ರಹೃದಯದ ಸಂಪೂರ್ಣ ಜ್ವಾಲೆಯನ್ನು ಇನ್ನೊಬ್ಬಳ ಗಭೀರವಾದ ಶಾಂತವಾದ ತೊಡೆಯ ಮೇಲೆ ಸುಮ್ಮನೆ ಕುಣಿಸಾಡುತ್ತಿದ್ದಳು.

ಕ್ರಮೇಣ ಶಾಂತವಾದ ಮೇಲೆ ಕಮಲಾ ತನ್ನ ಪತಿಯ ವಿಚಾರವಾಗಿ ಬಹಳ ವಿಚಾರಗಳನ್ನು ಕೇಳಿದಳು. ಆದರೆ ಸ್ವತಃ ಪತಿಯನ್ನು ನೋಡಿಕೊಂಡು ಬರುವ ಇಚ್ಛೆಯನ್ನು ಅವಳೇಕೆ ಪ್ರಕಟಮಾಡಲಿಲ್ಲವೆಂದು ಎಷ್ಟು ಯೋಚಿಸಿದರೂ ಬಿಂದು ಅರಿಯಲಾರದೆ ಹೋದಳು. ದೊಡ್ಡವರ ಮನೆಗಳಲ್ಲಿ ಈ ಬಗೆಯ ಸಂಸ್ಕಾರ, ಶಿಕ್ಷಣ ಮತ್ತು ಬೆಳವಣಿಗೆ ಇರಬಹುದು. ಸೇವಾ ಶುಶ್ರೂಷೆಯ ಭಾರವನ್ನು ನೌಕರರ ಮೇಲೆ ಹಾಕಿ, ಹೊರಗಿನಿಂದಲೇ ವಿಚಾರಗಳನ್ನು ತಿಳಿದುಕೊಳ್ಳುವ ನಿಯಮವಿರಬಹುದು ಎಂದು ಸಹ ಬಿಂದು ಯೋಚಿಸಿದಳು. ಇದ್ದಕ್ಕಿದ್ದ ಹಾಗೆಯೇ, "ಅದು ಸರಿಯಮ್ಮ, ನಿನ್ನ ಭಾವಯ್ಯ ಎಚ್ಚರವಿದ್ದಾಗ ಒಂದು ಸಲವಾದರೂ ನನ್ನ ವಿಚಾರ ಕೇಳಲಿಲ್ಲವೇ?" ಎಂದು ಕಮಲಾ ಕೇಳಿದಳು.

"ಒಮ್ಮೆ ಕೇಳಿದ" ಎಂದು ಬಿಂದು ಸುಮ್ಮನಾಗಿ ಬಿಟ್ಟಳು. ಕಮಲಾ ಅದೇನೆಂದು ಊಹಿಸಿದಳು. ಆದರೂ, ಅವಳು ಯಾವ ಪ್ರಶ್ನೆಯನ್ನೂ ಕೇಳದೆ ಕೇವಲ ಉತ್ಸುಕತೆಯಿಂದ ಕೂಡಿದ ವ್ಯಾಕುಲ ದೃಷ್ಟಿಯಿಂದ ಬಿಂದುವಿನ ಮುಖವನ್ನೇ ನೋಡುತ್ತಿದ್ದಳು.

ಬಿಂದು ಕೊಂಚ ಹೊತ್ತು ಸುಮ್ಮನಿದ್ದು, "ಒಮ್ಮೆ ಜ್ಞಾನ ಬಂದಾಗ ನನ್ನನ್ನು ನೀನೆಂದು ತಿಳಿದು, ನನ್ನ ಕುತ್ತಿಗೆಯ ಮೇಲೆ ಕೈಹಾಕಿ, ಒಂದು ಸಲ ಗಟ್ಟಿಯಾಗಿ, 'ಹೇಳು ಕಮಲಾ! ಈ ಕೆಲಸವನ್ನು ನೀನು ಮಾಡಿಲ್ಲ ತಾನೆ? ನಾನು ಸತ್ತರೂ ಸುಖಿಯಾಗಲಾರೆ ಕಮಲಾ, ಕೇವಲ ಒಂದು ಸಲ ಹೇಳಿಬಿಡು ಈ ಕೆಲಸ ನಿನ್ನ ಮುಖಾಂತರವಾಗಲಿಲ್ಲವೆಂದು' ಎಂದು ಹೇಳಿದ" ಎಂದಳು.

ಕಮಲಾ ಸ್ವಲ್ಪ ತಡೆದು, "ಅಮೇಲೆ" ಎಂದು ಕೇಳಿದಳು.

"ಯಾವ ಕೆಲಸಕ್ಕೆ ಕೇಳುತ್ತಿದ್ದನೆಂದು ನನಗೆ ಗೊತ್ತಿಲ್ಲ ಅತ್ತಿಗೆ!"

“ನನಗೆ ಗೊತ್ತು. ಅವರೇನು ತಿಳಿದುಕೊಳ್ಳಲು ಅಪೇಕ್ಷಿಸುತ್ತಾರೆಂದು” ಎಂದು ಒಮ್ಮೆಲೇ ಕಮಲಾ ಸಿಟಮ್ಮನೆ ಎದ್ದು ಕುಳಿತಳು.

ಬಿಂದು ಕಮಲಾ ಕೈಹಿಡಿದು, ನೀನು ಈಗ ಆ ಕೊಠಡಿಯೊಳಕ್ಕೆ ಹೋಗಬೇಡ ಅತ್ತಿಗೆ” ಎಂದಳು.

“ಏಕೆ ? ಏಕೆ ಹೋಗಕೂಡದು ?”

“ಡಾಕ್ಟರು ಅಡ್ಡಿಮಾಡಿದ್ದಾರೆ. ನೀನು ಹೋಗುವುದರಿಂದ ಹಾನಿಯಾಗುವ ಸಂಭವವಿದೆ.”

“ನನ್ನ ಹಾನಿಯ ವಿಚಾರ ನನಗಿಂತ ಹೆಚ್ಚಾಗಿ ಡಾಕ್ಟರಿಗೆ ಗೊತ್ತಾಗುವುದಿಲ್ಲ, ಬಿಂದು. ನಾನು ಅವರ ಬಳಿ ಹೋಗಿಯೇ ಹೋಗುತ್ತೇನೆ. ನಿದ್ದೆಯಿಂದ ಎಚ್ಚೆತ್ತ ಮೇಲೆ ಅವರು ಮತ್ತೆ ತಿಳಿಯಲಿಷ್ಟಪಟ್ಟರೆ ನಾನೇ ಅದಕ್ಕೆ ಉತ್ತರ ಕೊಡಬೇಕಾದೀತು” ಎಂದು ಕಮಲಾ ಬಿಂದುವಿನ ಕೈಯನ್ನು ತನ್ನೆರಡು ಕೈಗಳಲ್ಲಿ ಹಿಡಿದುಕೊಂಡು ದೈನ್ಯದಿಂದ, “ಆಜನ್ಮ ಪರಿಯಂತ ನಾನು ತಲೆಯೆತ್ತಿ ನಡೆಯಲಾರೆನಮ್ಮ. ಅದರಿಂದ ದಯವಿಟ್ಟು ನನ್ನನ್ನು ಒಂದು ಸಲ ಅವರ ಬಳಿ ಕಳುಹಿಸು” ಎಂದು ಬೇಡಿದಳು.

ಆಮೇಲೆ ಕಮಲಾ ಮನದೊಳಗೆ, “ಭಗವಂತ ! ನೀನು ನನ್ನ ಮಾಂಗಲ್ಯ, ಅರಿಸಿನ ಕುಂಕುಮವನ್ನು ಇದೂವರೆಗೂ ಇಟ್ಟಿದ್ದೀಯೆ. ಈಗ ಈತಹುದರ ಸತ್ಯ-ಅಸತ್ಯದ ನಿರ್ಣಯಮಾಡಿ ಅವನ್ನು ಮತ್ತೆ ಕಿತ್ತುಕೊಂಡು ಬಿಡಬೇಡ ದೇವರೆ ! ನಾನನುಭವಿಸಬೇಕಾದ ಶಿಕ್ಷೆ ಇನ್ನೂ ಎಲ್ಲಿ ಮುಗಿದಿದೆ – ಅದಿನ್ನೂ ಹಾಗೆಯೇ ಪೆಡಂಭೂತವಾಗಿ ಇದ್ದೇ ಇದೆ. ನೀನು ಕೊಡುವ ಬೇರಾವ ಭಯಂಕರ ಶಿಕ್ಷೆಯನ್ನಾದರೂ ನಾನು ನಗುನಗುತ್ತಾ ಅನುಭವಿಸಲೊಪ್ಪುತ್ತೇನೆ. ಕೇವಲ ನನ್ನ ಈ ಇದೊಂದಕ್ಕೆ ಆತಂಕ ತಂದೊಡ್ಡಬೇಡ. ಭಗವಂತ ಕೇವಲ ಇಷ್ಟನ್ನಾದರೂ ಮಾಡು !” ಎಂದು ಯಾಚಿಸಿವಳು.

ಪತಿಯ ಕೊಠಡಿಯನ್ನು ಪ್ರವೇಶಿಸುತ್ತಲೇ ಕಮಲೆಯಿಂದ ಸ್ಥಿರವಾಗಿರಲಾಗಲಿಲ್ಲ. ಎರಡು ದಿನದಿಂದ ಹೊಟ್ಟೆಗಿಲ್ಲದೆ ದುರ್ಬಲವಾಗಿದ್ದ ಶರೀರ, ಅದಕ್ಕಿಂತ ಹೆಚ್ಚು ನಿಸ್ಸತ್ವವಾಗಿದ್ದ ತಲೆ – ಗರಗರನೆ ತಿರುಗಿ ಪತಿಯ ಕಾಲುಗಳ ಮೇಲೆ ಬಿದ್ದುಬಿಟ್ಟಳು.

ಕಾಶೀನಾಥನು ಎಚ್ಚರವಾಗಿದ್ದನು. ಯಾರೋ ಕಾಲ ಬಳಿ ಬಂದು ಹಾಸಿಗೆಯ ಮೇಲೆ ಬಿದ್ದರೆಂದು ಅವನಿಗೆ ಗೊತ್ತಾಯಿತು. ಆದರೆ ತಲೆಯೆತ್ತಿ ನೋಡುವ ಶಕ್ತಿ ಅವನಲ್ಲಿರಲಿಲ್ಲ. ಹಾಗೆಯೇ ಮಲಗಿಕೊಂಡೇ ಅವನು, “ಯಾರು ? ಬಿಂದೂ ?” ಎಂದನು.

“ಅಲ್ಲ ಭಾವಯ್ಯ ! ಅತ್ತಿಗೆ” ಎಂದಳು ಬಿಂದು.

“ಕಮಲಾ ? – ನೀನೇಕೆ ಇಲ್ಲಿಗೆ ಬಂದೆ ?”

ಬಿಂದು ತಲೆಯ ಬಳಿ ಕುಳಿತು ಮೃದುಸ್ವರದಲ್ಲಿ, “ಅತ್ತಿಗೆಗೆ ಚೇತರಿಸಿಕೊಂಡು ತನ್ನ ಕಾಲ ಮೇಲೆ ನಿಲ್ಲುವ ಶಕ್ತಿ ಕೂಡ ಇಲ್ಲ. ಅದಕ್ಕೆ ತಲೆತಿರುಗಿ ಬಿದ್ದುಬಿಟ್ಟಳು, ಭಾವಯ್ಯ” ಎಂದಳು.

ಕಾಶೀನಾಥನು ಸುಮ್ಮನಿದ್ದನು. ಬಿಂದು ಮುಂದುವರಿಸಿದಳು—"ಈ ರಾತ್ರಿ ಇಲ್ಲಿಗೆ ಬರಬೇಡವೆಂದು ಅವಳಿಗೆ ಹೇಳಿದೆ. ಎರಡು ದಿನ ಎಚ್ಚರತಪ್ಪಿ ಬಿದ್ದಿದ್ದು ಇದ್ದಕ್ಕಿದ್ದ ಹಾಗೆಯೇ ಎಚ್ಚರಗೊಂಡವರು ಈ ಕೊಠಡಿಗೆ ಬಂದರೆ ಚೇತರಿಸಿಕೊಂಡು ತಮ್ಮ ಕಾಲಮೇಲೆ ತಾವು ನಿಲ್ಲುವುದಸಾಧ್ಯವಿಲ್ಲವೆಂದು ನನಗೆ ಗೊತ್ತಿತ್ತು."

ಗಂಡನ ಎರಡು ಕಾಲುಗಳ ಮಧ್ಯೆ ತನ್ನ ತಲೆಯನ್ನು ಹುದುಗಿಕೊಂಡು ಕಮಲಾ ಹಾಗೆಯೇ ಮಲಗಿದ್ದಳು. ಅವಳ ಕಣ್ಣುಗಳಿಂದ ಒಂದೇ ಸಮನೆ ಹರಿಯುತ್ತಿದ್ದ ಬಿಸಿ ಕಣ್ಣೀರಿನ ಅನುಭವ ಸ್ವತಃ ಕಾಶೀನಾಥನ ತಣ್ಣನೆಯ ಕಾಲುಗಳಿಗೆ ಆಯಿತು. ಆದರಿಂದ ಅವನು ಮೆಲ್ಲ ಮೆಲ್ಲನೆ, "ಹೌದು ತಂಗಿ, ಇವಳು ಇಲ್ಲಿಗೆ ಬರದಿದ್ದರೇ ಇವಳಿಗೆ ಒಳ್ಳೆಯದಾಗುತ್ತಿತ್ತು" ಎಂದನು

ಕಮಲಾ ಕಡೆ ನೋಡುತ್ತಿದ್ದ ಹಾಗೆಯೇ ಬಿಂದುವಾಸಿನಿಯ ಕಣ್ಣುಗಳು ತುಂಬಿ ಬಂದವು. ಅವಳು ಕಣ್ಣೊರೆಸಿಕೊಳ್ಳುತ್ತಾ, "ಒಳ್ಳೆಯದಾಗುತ್ತಿತ್ತು. ಆದರೆ ಹಾಗೆ ಯಾರಿಂದಲಾದರೂ ಒಳ್ಳೆಯದನ್ನು ಮಾಡಲು ಸಾಧ್ಯವೆ ಭಾವಯ್ಯ? ನಿನಗೆ, ಬೇಗ ಉತ್ತಮವಾಗಿ ಬಿಡಲಿ. ಈ ಎರಡು ದಿನಗಳನ್ನು ಅತ್ತಿಗೆ ಹೇಗೆ ಕಳೆದಿದ್ದಾಳೆಂಬುದು ನನಗೆ ಗೊತ್ತು ; ದೇವರಿಗೆ ಗೊತ್ತು ; ಸ್ವತಃ ಅವಳಿಗೇ ಗೊತ್ತಿಲ್ಲವೆಂದು ಕಾಣುತ್ತೆ" ಎಂದಳು.

ದೇವರ ಹೆಸರಿನಲ್ಲಿ ಕಾಶೀನಾಥನು ಕಣ್ಣುಮುಚ್ಚಿ ತನ್ನ ಹೊರದೃಷ್ಟಿಯನ್ನು ಒಂದು ಕ್ಷಣದವರೆಗೆ, ಜಗತ್ತಿನ ಸಮಸ್ತ ನರನಾರಿಯರ ಅಂತರ್ಯಾಮಿಯು ಚಿರಕಾಲದಿಂದಲೂ ಪ್ರತಿಷ್ಠಿತನಾಗಿರುವ, ಅಂತರಾಳದ ಕಡೆ ಹೊರಳಿಸಿ, ಆ ಅಂತರ್ಯಾಮಿಯ ಪಾದಪದ್ಮಗಳಲ್ಲಿ ಬಿಂದುವಿನ ಈ ಪ್ರಶ್ನೆಯನ್ನು ಇಟ್ಟು, ಅದರ ಉತ್ತರದ ಪ್ರತೀಕ್ಷೆ ಮಾಡಿದನು. ಆಮೇಲೆ ಕಣ್ಣುಬಿಟ್ಟು, "ನನ್ನ ಪ್ರಾಣಕ್ಕೆ ಇನ್ನಾವ ಭಯವೂ ಇಲ್ಲ. ಕಮಲಾ ಎದ್ದು ಕುಳಿತುಕೋ—" ಎಂದನು.

"ಭಾವಯ್ಯ, ನೀನು ಯಾವ ಪ್ರಶ್ನೆಯನ್ನು ನನ್ನಲ್ಲಿ ಕೇಳಿದೆಯೋ ಅದಕ್ಕೆ ಉತ್ತರ ಕೊಡಲು ಅತ್ತಿಗೆ ನಿನ್ನಬಳಿ ಬಂದಿದ್ದಾಳೆ" ಎಂದು ಬಿಂದು ಹೇಳಿದಳು.

ಕಾಶೀನಾಥನ ಬಿಳಿಚಿಕೊಂಡ ತುಟಿಗಳಮೇಲೆ ಮುಗುಳು ನಗೆ ಬಂತು. "ಇನ್ನು ಯಾರಿಗೆ ಯಾರೂ ಯಾವ ಉತ್ತರವನ್ನೂ ಕೊಡಬೇಕಾದದ್ದಿಲ್ಲ, ಬಿಂದೂ. ಈ ಎರಡು ದಿನದಿಂದ ಇವಳು ಎಚ್ಚರತಪ್ಪಿ ಬಿದ್ದಿದ್ದುದರಿಂದಲೇ ನನ್ನ ಪ್ರಶ್ನೆಗೆ ನನಗೆ ಪೂರ್ಣ ಉತ್ತರ ಬಂದಿದೆ" ಎಂದು ಕಾಶೀನಾಥನು ಎಡಗೈಮೇಲೆ ಭಾರಹಾಕಿ ಕಷ್ಟದಿಂದ ಎದ್ದು ಕುಳಿತು, ಬಲಗೈಯಿಂದ ಕಮಲೆಯ ಮುಖವನ್ನು ಮೇಲಕ್ಕೆತ್ತಲು ಪ್ರಯತ್ನಿಸುತ್ತಾ, "ಕಮಲಾ!" ಎಂದನು.

ಕಮಲಾ ಮಾತನಾಡಲಿಲ್ಲ. ಅವಳು ಹಾಗೆಯೇ ಬಲವಂತದಿಂದ ಅವನ ಕಾಲುಗಳ

ಮಧ್ಯೆ ಮುಖ ಮುಚ್ಚಿಕೊಂಡೇ ಇದ್ದಳು. ಅವಳ ಕಣ್ಣುಗಳಿಂದ ಇನ್ನೂ ಅದೇ ರೀತಿಯಲ್ಲಿ ಕೋಡಿ ಹರಿಯುತ್ತಲೇ ಇತ್ತು.

ಬಿಂದು ಸಂಕಟದಿಂದ ಹೇಳಿದಳು, "ನೀನೆದ್ದು ಕುಳಿತುಕೊಳ್ಳಬೇಡ ಭಾವಯ್ಯ. ಡಾಕ್ಟರು ಹೇಳಿಹೋಗಿದ್ದಾರೆ. ಮತ್ತೆ......"

ಕಾಶೀನಾಥನು ನಗುತ್ತಾ, "ಡಾಕ್ಟರು, ಏನಾದರು ಹೇಳಲಿ ತಂಗಿ, ನಾನು ಇನ್ನು ಹೆದರಬೇಕಾದ ಕಾರಣವೇನೂ ಇಲ್ಲವೆಂದು ಹೇಳುತ್ತೇನೆ. ಈ ಸಂಕಟದಿಂದ ನೀವುಗಳು ನನ್ನನ್ನು ಬದುಕಿಸಿದಿರಿ" ಎಂದನು.

ಆಮೇಲೆ ಕಾಶೀನಾಥನು ಬಿರಿಹೊಯ್ದ ಕಮಲೆಯ ಒಣ ಕೇಶರಾಶಿಯಲ್ಲಿ ಹಾಗೆಯೇ ಕೈಬೆರಳುಗಳನ್ನಾಡಿಸಿ ಕೂದಲು ನೇವರಿಸುತ್ತಾ ಮಲಗಿಕೊಂಡನು.

---

ಬೆಂಗಳೂರು ಸುಬೋಧ ವಿದ್ಯುನ್ಮುದ್ರಣಾಲಯದಲ್ಲಿ
ಬಿ. ರಂಗನಾಥರಾಯರು ಮುದ್ರಿಸಿದರು.

ALL TITLES OF

Messrs PADMA PUBLICATIONS
BOMBAY

Can be had from

CHITRA AGENCIES
(Agents for Mysore State & Coorg)
BANGALORE CITY.